ಕರ್ನಾಟಕ ವಿಧಾನಸಭೆ

ಮಂಗಳವಾರ 27ನೇ ಫೆಬ್ರವರಿ 2001 ರಂದು ಸದನವು ಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:- (ಶ್ರೀ ಎಂ.ವಿ.ವೆಂಕಟಪ್ಪ ರವರು) ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆಗಳು

ಮಾನ್ಯ ಸಭಾಧ್ಯಕ್ಷರು : ಗುಜರಾತ್ ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕಂಪದಲ್ಲಿ ಅಸಂಖ್ಯಾತ ಜನರು ನಿಧನರಾಗಿರುವುದನ್ನು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್, ವಿಧಾನಸಭೆಯ ಮಾಜಿ ಉಪಾಧ್ಯಕ್ಷರಾಗಿದ್ದ ಶ್ರೀ ಲಕ್ಷ್ಮೀನರಸಿಂಹಯ್ಯ, ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಡಾ॥ ಜೀವರಾಜ್ ಆಳ್ವ, ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಮತಿ ಟಿ.ಕೆಂಪಮ್ಮ ಶ್ರೀ ಟಿ.ಎಸ್. ಮೃತ್ಯುಂಜಯಪ್ಪ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಆರ್. ವೆಂಕಟರಾಮಯ್ಯ, ಶ್ರೀ ಜಿ.ಎಸ್. ಬಸವರಾಜು, ಶ್ರೀ ಎಸ್.ಎ.ಪಾಟೀಲ್ ಹಾಗೂ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಶ್ರೀ ಎಂ.ಬಸಪ್ಪ ಎ. ರಾಮಣ್ಣ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

1. ಗುಜರಾತ್ ಭೂಕಂಪದಲ್ಲಿ ಮಡಿದವರು

52ನೇ ಗಣರಾಜ್ಯೋತ್ಸವ ಆಚರಿಸುವ ಸಂಭ್ರಮದಲ್ಲಿದ್ದ ಜನತೆ ಅನಿರೀಕ್ಷಿತವಾಗಿ ಅತ್ಯಂತ ಭೀಕರವಾದ ಭಾರಿ ವಿನಾಶಕಾರಿ ಭೂಕಂಪವು ಗುಜರಾತ್ ರಾಜ್ಯವನ್ನು ಅಲುಗಾಡಿಸಿ, ಸಾವಿರಾರು ಮಂದಿಯನ್ನು ಬಲಿ ತೆಗೆದುಕೊಂಡಿದೆ. ಕಳೆದ 200 ವರ್ಷಗಳಲ್ಲಿಯೇ ಅತ್ಯಂತ ಭೀಕರವಾದ ಭೂಕಂಪವು ಅಸಂಖ್ಯಾತ ಜನರ ಸಾವಿನೊಡನೆ, ಲಕ್ಷಾಂತರ ಮನೆಗಳು, ಇತರ ಕಟ್ಟಡಗಳು ನೆಲಕ್ಕುರುಳಿ ಸಾವು ನೋವು ಸಂಭವಿಸಿದೆ.

ಭೂಕಂಪದಲ್ಲಿ ಬಂಧುಗಳನ್ನು ಕಳೆದುಕೊಂಡವರು, ಗಾಯಗೊಂಡು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ನೋವಿನಲ್ಲಿ ಈ ಸದನದ ಎಲ್ಲಾ ಸದಸ್ಯರು ಪಾಲ್ಗೊಳ್ಳುವುದಲ್ಲದೆ, ಅವರ ಸಹಾಯಕ್ಕೂ ಎಲ್ಲಾ ರೀತಿಯ ಸಹಕಾರವನ್ನು ಕೊಡುವ ಅವಶ್ಯಕತೆ ನಮ್ಮ ಮೇಲಿದೆ.

ದಿನಾಂಕ 26-1-2001 ರಂದು ನಡೆದ ಈ ದುರಂತದಲ್ಲಿ ಮಡಿದವರೆಲ್ಲರಿಗೂ ಈ ಸದನ ತನ್ನ ದುಃಖವನ್ನು ವ್ಯಕ್ತಪಡಿಸುವುದಲ್ಲದೆ, ಈ ಘಟನೆಯಿಂದ ನಲುಗಿದ ಗುಜರಾತ್ ರಾಜ್ಯದ ಜನತೆಗೆ ಆಘಾತವನ್ನು ಭರಿಸುವ ಶಕ್ತಿ ದೊರೆಯಲೆಂದು ಹಾರೈಸುತ್ತದೆ.

2. ಶ್ರೀ ಜೆ.ಹೆಚ್. ಪಟೇಲ್

ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಜಯದೇವಪ್ಪ ಹಾಲಪ್ಪ ಪಟೇಲ್ ಅವರು ಹಿಂದಿನ ಶಿವಮೊಗ್ಗ ಜಿಲ್ಲೆಯ ಕಾರಿಗನೂರಿನಲ್ಲಿ 1930ರ ಅಕ್ಟೋಬರ್ 1 ರಂದು ಜಮೀನ್ದಾರಿ ಕುಟುಂಬದಲ್ಲಿ ಜನಿಸಿದ್ದರು. ಚನ್ನಗಿರಿ ತಾಲ್ಲೂಕಿನ ಕತ್ತಗೆರೆಯಲಿ ಪ್ರಾಥಮಿಕ

ಶಿಕ್ಷಣ, ದಾವಣಗೆರೆ ಮತ್ತು ಮೈಸೂರುಗಳಲ್ಲಿ ಪ್ರೌಢ ಮತ್ತು ಕಾಲೇಜು ಶಿಕ್ಷಣ ಹಾಗೂ ಬೆಳಗಾವಿಯಲ್ಲಿ ಕಾನೂನು ಪದವಿ ಗಳಿಸಿದ ಶ್ರೀಯುತರು ಕೆಲ ಕಾಲ ನ್ಯಾಯವಾದಿಗಳಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ ಸೆರೆಮನೆ ವಾಸ ಅನುಭವಿಸಿದ್ದ ಪಟೇಲರು ''ಉಳುವವರಿಗೆ ಭೂಮಿಯ ಒಡೆತನ ನೀಡಬೇಕೆಂದು ಒತ್ತಾಯಿಸಿ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಐತಿಹಾಸಿಕ ಕಾಗೋಡು ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ರಾಷ್ಟ್ರದ ಸಮಾಜವಾದಿ ಚಿಂತಕ ಡಾ|| ರಾಮ್ ಮನೋಹರ ಲೋಹಿಯಾ ಅವರಿಂದ ಪ್ರಭಾವಿತರಾಗಿದ್ದ ಶ್ರೀ ಪಟೇಲ್ ಅವರು ಶ್ರೀ ಜಯಪ್ರಕಾಶ್ ನಾರಾಯಣ್, ಶ್ರೀ ಶಾಂತವೇರಿ ಗೋಪಾಲಗೌಡ ಅವರುಗಳ ಒಡನಾಡಿಯಾಗಿದ್ದು ಸಮಾಜವಾದದ ಪ್ರತಿಪಾದಕರಾಗಿದ್ದರು. 1967ರಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿ ''ಕನ್ನಡದಲ್ಲಿ ಭಾಷಣ ಮಾಡಿ'' ಸಾಧನೆ ಮಾಡಿದ್ದರು.

1978ರಲ್ಲಿ ಪ್ರಪ್ರಥಮ ಬಾರಿಗೆ ಚನ್ನಗಿರಿ ಕ್ಷೇತ್ರದಿಂದ ಆರನೇ ವಿಧಾನಸಭೆಗೆ ಆಯ್ಕೆಯಾಗಿ, ತದನಂತರ ಏಳನೇ, ಎಂಟನೇ ಹಾಗೂ ಹತ್ತನೆ ವಿಧಾನಸಭೆಯ ಸದಸ್ಯರಾಗಿದ್ದರು. ಹಲವಾರು ಖಾತೆಗಳ ಸಚಿವರಾಗಿ, 1994ರಿಂದ ಉಪ ಮುಖ್ಯಮಂತ್ರಿಯಾಗಿ ಹಾಗೂ 1996 ರಿಂದ ಮುಖ್ಯಮಂತ್ರಿಗಳಾಗಿಯೂ ಸೇವೆ ಸಲ್ಲಿಸಿದ್ದ ಶ್ರೀಯುತರು ಆಡಳಿತ ವಿಕೇಂದ್ರಿಕರಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದಲ್ಲದೆ, ರಾಜ್ಯದಲ್ಲಿ ಹೊಸದಾಗಿ ಏಳು ಜಿಲ್ಲೆಗಳ ರಚನೆಗೂ ಕಾರಣಕರ್ತರಾದರು.

ಶ್ರೀ ಪಟೇಲ್ ಅವರು ಸಾಹಿತ್ಯ ಮತ್ತು ಸಂಗೀತದ ಅಭಿಮಾನಿಗಳಾಗಿದ್ದು ತಮ್ಮ ಹಾಸ್ಯ ಚಟಾಕಿಗಳಿಂದ ರಂಜಿಸುತ್ತಿದ್ದರು. ಶ್ರೀಯುತರು ವಿಚಾರಶೀಲ, ಸಮಾಜವಾದಿ ಹಾಗೂ ವರ್ಣರಂಜಿತ ವ್ಯಕ್ತಿಯಾಗಿದ್ದರು.

ಶ್ರೀ ಯುತರು ದಿನಾಂಕ 12- 12-2000ದಂದು ನಿಧನ ಹೊಂದಿದರು.

3. ಶ್ರೀ ಲಕ್ಷ್ಮೀನರಸಿಂಹಯ್ಯ

ಕರ್ನಾಟಕ ವಿಧಾನಸಭೆಯ ಉಪಾಧ್ಯಕ್ಷರು ಹಾಗೂ ಮಾಜಿ ಮಂತ್ರಿಗಳಾಗಿದ್ದ ಶ್ರೀ ಲಕ್ಷ್ಮೀನರಸಿಂಹಯ್ಯ ಅವರು 7ನೇ ನವೆಂಬರ್, 1935 ರಂದು ತುಮಕೂರಿನ ಚೌಡಯ್ಯಪಾಳ್ಯದಲ್ಲಿ ಜನಿಸಿದ್ದು, ಎಲೆಕ್ಟ್ರಿಕಲ್ ಇಂಜಿನೀಯರಿಂಗ್‌ನಲ್ಲಿ ಡಿಪ್ಲೋಮೋ ಪಡೆದಿದ್ದರು. ವೃತ್ತಿಯಲ್ಲಿ ವ್ಯಾಪರಸ್ಥರಾಗಿದ್ದು ತುರ್ತು ಪರಿಸ್ಥಿತಿ ಕಾಲದಲ್ಲಿ ಜೈಲು ವಾಸ ಅನುಭವಿಸಿದ್ದರು. ಶ್ರೀ ಯುತರು 1983ರಲ್ಲಿ ತುಮಕೂರು ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ 1984ರಲ್ಲಿ ವಿಧಾನಸಭೆಯ ಉಪಸಭಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1985 ರಲ್ಲಿ ಮತ್ತೆ ವಿಧಾನಸಭೆಗೆ ಆಯ್ಕೆಯಾಗಿ, ತೋಟಗಾರಿಕೆ ಹಾಗೂ ಇಂಧನ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

ಶ್ರೀ ಲಕ್ಷ್ಮೀನರಸಿಂಹಯ್ಯ ಅವರು ದಿನಾಂಕ 21-2-2000 ದಂದು ನಿಧನ ಹೊಂದಿದರು.

4. ಡಾ|| ಜೀವರಾಜ್ ಆಳ್ವ

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಸಚಿವರಾಗಿದ್ದ ಡಾ|| ಜೀವರಾಜ್ ಆಳ್ವ ಅವರು 1947 ನೇ ಏಪ್ರಿಲ್ 18ರಂದು ಮಂಗಳೂರಿನಲ್ಲಿ ಜನಿಸಿದ್ದು ವೈದ್ಯಕೀಯ ಪದವೀಧರರು ಬೆಂಗಳೂರು ವಿಶ್ವವಿದ್ಯಾನಿಲಯ ಹಾಗೂ ಸೆಂಟ್ ಜಾನ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ನಾಯಕರಾಗಿದ್ದ ಶ್ರೀ ಆಳ್ವ ಅವರು ವಿದ್ಯಾರ್ಥಿ ದಿಸೆಯಲ್ಲಿಯೇ ಹಲವಾರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘಟನೆ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. 6ನೇ ಹಾಗೂ 7ನೇ ವಿಧಾನಸಭೆಯ ಸದಸ್ಯರಾಗಿ 1983ರಲ್ಲಿ ಕನ್ನಡ ಮತ್ತು ಸಂಸ್ಕೃತಿ, ಯವಜನ ಸೇವೇಹಾಗೂ ಕ್ರೀಡೆ ಹಾಗೂ 8ನೇ ವಿಧಾನಸಭೆಗೆ ಮತ್ತೆ ಆಯ್ಕೆಯಾಗಿ ವಾರ್ತಾ, ಯುವಜನ ಸೇವೆ ಹಾಗೂ ಕ್ರೀಡಾ ಹಾಗೂ ಉನ್ನತ ಶಿಕ್ಷಣ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. 9ನೇ ಹಾಗೂ 10ನೇ ವಿಧಾನಸಭೆಗೆ ಆಯ್ಕೆಯಾಗಿ ಫೆಬ್ರವರಿ 1996 ರವರೆಗೆ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಾಗಿ, ರಾಜ್ಯದ ಹಲವಾರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನಮನ್ನಣೆ ಗಳಿಸಿದ್ದ ಶ್ರೀಯುತರು ಸಂಘಟನಾ ಚತುರರೆಂದು ಹೆಸರು ಗಳಿಸಿದ್ದರು.

ಶ್ರೀ ಆಳ್ವ ಅವರು ದಿನಾಂಕ 12-2-2001ರಂದು ನಿಧನ ಹೊಂದಿದರು.

5. ಶ್ರೀ ಮತಿ ಟಿ.ಕೆಂಪಮ್ಮ

ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಮತಿ ಟಿ.ಕೆಂಪಮ್ಮ ಅವರು 1937 ನೇ ಜೂನ್ 20ರಂದು ಬೆಂಗಳೂರಿನಲ್ಲಿ ಜನಿಸಿದ್ದು, ಬಿ.ಎ. ಪದವೀಧರರು. ಸಮಾಜ ಸೇವಕರಾಗಿದ್ದ ಶ್ರೀಮತಿಯವರು ಹಲವಾರು ಸಹಕಾರ ಸಂಘಗಳ ನಿರ್ದೇಶಕರಾಗಿ, ಪ.ಜಾ.:ಪ.ವರ್ಗಗಳ ಕಲ್ಯಾಣ ಸಂಘಗಳ ಸದಸ್ಯರಾಗಿ ಕರ್ನಾಟಕ ಚಿತ್ರಕಲಾ ಪರಿಷತ್ತು, ಮಹಿಳಾ ಸಾಂಸ್ಕೃತಿಕ ಸಂಘ, ಕೇಂದ್ರ ಬಾಲ ಕಾರ್ಮಿಕರ ಸಲಹಾ ಸಮಿತಿಗಳ ಸದಸ್ಯರಾಗಿ, ಬಾಲಭವನದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ವಿಧಾನ ಪರಿಷತ್ತಿಗೆ ಎರಡು ಬಾರಿ ಆಯ್ಕೆಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಮತಿ ಕೆಂಪಮ್ಮ ಅವರು ದಿನಾಂಕ 4-12-2000 ದಂದು ನಿಧನ ಹೊಂದಿದರು.

6. ಶ್ರೀ ಟಿ.ಎಸ್.ಮೃತ್ಯುಂಜಯಪ್ಪ

ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಟಿ.ಎಸ್. ಮೃತ್ಯುಂಜಯಪ್ಪ ಅವರು ಸಮಾಜ ಸೇವಕರಾಗಿ, ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. ಹಡಗಲಿಯ ತುಂಗಭದ್ರಾ ಶಿಕ್ಷಣ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದ ಶ್ರೀಯುತರು ಬಳ್ಳಾರಿ ಜಿಲ್ಲೆಯ ಸ್ಥಳೀಯ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿದ್ದರು.

ಶ್ರೀ ಮೃತ್ಯುಂಜಯಪ್ಪ ಅವರು ದಿನಾಂಕ 20-12-2000ದಂದು ನಿಧನ ಹೊಂದಿದರು.

7. ಶ್ರೀ ಆರ್. ವೆಂಕಟರಾಮಯ್ಯ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಆರ್. ವೆಂಕಟರಾಮಯ್ಯ ಅವರು 1930 ನೇ ಇಸವಿ ಅಕ್ಟೋಬರ್ 26ರಂದು ಜನಿಸಿದ್ದು, ಬಿ.ಎ. ಹಾಗೂ ಬಿ.ಎಲ್. ಪದವೀಧರರು. ವೃತ್ತಿಯಲ್ಲಿ ಕೃಷಿಕರು ಹಾಗೂ ವಕೀಲರಾಗಿದ್ದ ಶ್ರೀಯತರು ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸಿದ್ದರು. ಕೋಲಾರ ಜಿಲ್ಲೆಯಲ್ಲಿ ನಡೆದ ರೈತರ ಚಳುವಳಿ ಹಾಗೂ ಇನಾಂ ರದ್ಧತಿಗಾಗಿ, ಬೇಸಾಯಗಾರರಿಗೆ ಭೂ ಮಂಜೂರಾತಿ ಮಾಡಿಸುವ ಸಲುವಾಗಿ, ಭೂಕಂದಾಯ ಹಾಗೂ ನೀರಿನ ತೆರಿಗೆಯನ್ನು ಮನ್ನಾ ಮಾಡುವ ಸಲುವಾಗಿ ಹೋರಾಡಿದ್ದರು. ಕೋಲಾರ ಜಿಲ್ಲಾ ರೈತ ಸಂಘದ ಅಧ್ಯಕ್ಷರಾಗಿ, ಜಿಲ್ಲಾ ಮೋಟಾರು ವಾಹನಗಳ ಕಾರ್ಮಿಕರ ಅಧ್ಯಕ್ಷರ ಕೃಷಿ ಕಾರ್ಮಿಕರುಗಳ ಏಳಿಗೆಗಾಗಿ ಶ್ರಮಿಸಿದ್ದರು. 1985 ರಲ್ಲಿ ಎಂಟನೇ ವಿಧಾನಸಭೆಗೆ ಮುಳಬಾಗಿಲು ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ದಿನಾಂಕ 27-11-2000ರಂದು ನಿಧನ ಹೊಂದಿದರು.

8. ಶ್ರೀ ಜಿ.ಎಸ್. ಬಸವರಾಜು

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಜಿ.ಎಸ್. ಬಸವರಾಜು ಅವರು ಬಿ.ಎ. ಹಾಗೂ ಬಿಎಲ್ ಪದವೀಧರರಾಗಿದ್ದು ವೃತ್ತಿಯಲ್ಲಿ ವಕೀಲರು ಹಾಗೂ ಕೃಷಿಕರಾಗಿದ್ದರು. ಸಮಾಜ ಸೇವಕರಾಗಿ ಸಹಕಾರ ರಂಗದಲ್ಲಿ ಆಸಕ್ತಿಯದ್ದ ಶ್ರೀಯುತರು ಕ್ರೀಡಾ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಸಮಾಜವಾದಿ ತತ್ವದ ಮೇಲೆ ಗ್ರಾಮೀಣ ಕೃಷಿಕರ ಹಾಗೂ ಕಾರ್ಮಿಕರ ಏಳಿಗೆಗಾಗಿ ದುಡಿಯುತ್ತಿದ್ದ ಶ್ರೀಯುತರು ಏಳನೇ ವಿಧಾನಸಭೆಗೆ ಅರಸೀಕೆರೆ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ದಿನಾಂಕ 18-12-2000 ದಂದು ನಿಧನ ಹೊಂದಿದರು

9. ಶ್ರೀ ಎಸ್.ಎ. ಪಾಟೀಲ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಶಂಕರಗೌಡ ಅಣ್ಣಪ್ಪಗೌಡ ಪಾಟೀಲ್ ಅವರು ಹಿರಿಯ ನ್ಯಾಯವಾದಿಗಳಾಗಿದ್ದರು. ಶಿಂದೊಳ್ಳಿಯ ಮುಖಂಡರಾಗಿದ್ದ ಶ್ರೀಯುತರು ಸಮಾಜ ಸೇವಾಕರ್ತರು. 1971ರಲ್ಲಿ ಐದನೇ ವಿಧಾನಸಭೆಗೆ ಹಿರೇಬಾಗೇವಾಡಿ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ದಿನಾಂಕ 8-2-2001 ರಂದು ನಿಧನ ಹೊಂದಿದರು

10. ಶ್ರೀ ಎಂ.ಬಸಪ್ಪ

ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ. ಬಸಪ್ಪ ಅವರು ಸ್ವಾತಂತ್ರ್ಯ ಹೋರಾಟಗಾರರು. ಶಿವಮೊಗ್ಗ ಜಿಲ್ಲೆಯಲ್ಲಿ ಹಲವಾರು ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗವಹಿಸಿ ಜೈಲು ಶಿಕ್ಷೆಯನ್ನು ಅನುಭವಿಸಿದ್ದು 1932-33ರ ಅವಧಿಯಲ್ಲಿ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ದಿನಾಂಕ 5-12-2000ದಂದು ನಿಧನ ಹೊಂದಿದರು

11. ಶ್ರೀ ಎ.ರಾಮಣ್ಣ

ಶ್ರೀಯುತ ಎ.ರಾಮಣ್ಣನವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಿಸಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರಲ್ಲದೆ ಪತ್ರಕರ್ತರಾಗಿದ್ದರು. ಕಾರ್ಮಿಕ ಹೋರಾಟಗಳಿಂದ ಪ್ರೇರಿತರಾಗಿ ಎಳೆಯ ವಯಸ್ಸಿನಲ್ಲಿಯೇ ಮಹಾತ್ಮಾಗಾಂಧಿಯವರ ಆದರ್ಶಗಳಿಗೆ ಮಾರು ಹೋಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಜೈಲುವಾಸವನ್ನು ಅನುಭವಿಸಿದ್ದರು. ಪತ್ರಿಕೆಯನ್ನು ಪ್ರಾರಂಭಿಸಿ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದರು. ಕರ್ನಾಟಕ ಪತ್ರಿಕಾ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದಿದ್ದ ಶ್ರೀ ಯುತರು ಹಲವಾರು ಸರ್ಕಾರಿ ಹಾಗೂ ಸರ್ಕಾರೇತರ ಸಂಘ-ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸೇವೆ ಸಲ್ಲಿಸಿದ್ದರು. ಶ್ರೀ ಎ.ರಾಮಣ್ಣನವರು ವಿಧಾನಪರಿಷತ್ತಿನ ಸದಸ್ಯರಾಗಿ ನಾಮಕರಣಗೊಂಡು ಸೇವೆ ಸಲ್ಲಿಸಿದ್ದು ದಿನಾಂಕ 14-2-01ರಂದು ನಿಧನ ಹೊಂದಿದರು.

+ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿ) :- ಗುಜರಾತ್ ರಾಜ್ಯದಲ್ಲಿ ಆಗಿರುವಂತಹ ಭೂಕಂಪ ದೇಶ ಕಂಡಂಥ ಅತ್ಯಂತ ಭೀಕರವಾದಂಥ ದುರಂತವಾಗಿದೆ. 52 ನೇ ಗಣರಾಜ್ಯೋತ್ಸವದ ಸಂಭ್ರಮದಲ್ಲಿ ಇಡೀ ದೇಶ ಇದ್ದಾಗ ಈ ದುರಂತ ಗುಜರಾತ್ ರಾಜ್ಯವನ್ನು ಅಪ್ಪಳಿಸಿ, ಅಲುಗಾಡಿಸಿ ಸಾವಿರಾರು ಮಂದಿಯನ್ನು ಬಲಿ ತೆಗೆದುಕೊಂಡು, ಸಹಸ್ರಾರು ಕುಟುಂಬಗಳನ್ನು ಅತ್ಯಂತ ದುಃಖ, ಶೋಚನೀಯವಾದ ಪರಿಸ್ಥಿತಿಗೆ ಈ ಭೂಕಂಪ ಅವರನ್ನು ಈಡುಮಾಡಿದೆ. ಕಳೆದ ವರ್ಷ ಒರಿಸ್ಸಾದಲ್ಲಿ ಸೈಕ್ಲೋನ್ ಹಾವಳಿಯಿಂದ ಸಹಸ್ರಾರು ಜನ ಸತ್ತರು, ಹಾಗೆಯೇ ಸಹಸ್ರಾರು ಕುಟುಂಬಗಳು ತಮ್ಮ ನೆಲೆಯನ್ನು ಕಳೆದುಕೊಂಡರು. ಈ ವರ್ಷ ಇಂಥ ಮತ್ತೊಂದು ಗಂಭೀರ ಸ್ವರೂಪದ ಬೆಳವಣಿಗೆ ನಮ್ಮೆಲ್ಲರಿಗೂ ಹೆಚ್ಚಿನ ವ್ಯಸನವನ್ನು ಉಂಟು ಮಾಡಿದೆ. ಈ ಘಟನೆಯ ವಿವರಣೆ ಪಡೆದ 24 ಗಂಟೆಯಲ್ಲಿ ಅತ್ಯಂತ ಚಿಕ್ಕ ಕಾಣಿಕೆಯಾದಂಥ 5 ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯ ಸರ್ಕಾರದ ವತಿಯಿಂದಗುಜರಾತ್ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಎಲ್ಲಾ ಸಂಘ ಸಂಸ್ಥೆಗಳು, ಸಾರ್ವಜನಿಕರು ಈ ದುರಂತದಲ್ಲಿ ನೊಂದವರ ಸಹಾಯಕ್ಕೆ ಧಾವಿಸಿ ಹೋಗಬೇಕೆಂದು ನಾವು ಕರೆಯನ್ನು ಕೊಟ್ಟಮೇಲೆ ರಾಜ್ಯದ ನಾನಾ ಭಾಗಗಳಿಂದ ಮತ್ತು ಸಮಾಜದ ನಾನಾ ವರ್ಗಗಳಿಂದ ಪ್ರತಿದಿವಸ ಗುಜರಾತ್ ಸರ್ಕಾರದ ಮುಖ್ಯಮಂತ್ರಿಯವರ ಪರಿಹಾರನಿಧಿಗೆ ಲಕ್ಷಾಂತರ ರೂಪಾಯಿಗಳು ಬರುತ್ತಿವೆ ಎನ್ನತಕ್ಕಂಥಾದ್ದು ಕೊಂಚ ಸಮಾಧಾನವನ್ನು ತರತಕ್ಕಂಥ ಬೆಳವಣಿಗೆಯಾಗಿದೆ. ನಮ್ಮ ಧರ್ಮದ ಪ್ರಾಕರ ಯಾರಾದರೂ ಕಷ್ಟಕ್ಕೆ ಸಿಕ್ಕಿದಾಗ ಅವರ ಕಷ್ಟವನ್ನು ಹಂಚಿಕೊಳ್ಳತಕ್ಕಂಥ ಒಂದು ಧಾರ್ಮಿಕ ಪರಂಪರೆಯನ್ನು ಹೊಂದಿರುವಂತಹ ಸಮಾಜ ನಮ್ಮದು ಹಾಗೂ ನಮ್ಮ ರಾಜ್ಯವಾಗಿದೆ. ಗುಜರಾತ್ ಸರ್ಕಾರದ ಪರಿಹಾರ ನಿಧಿಗೆ ಈಗಾಗಲೇ ನಮ್ಮ ಶಾಸಕರು ತಮ್ಮ ತಮ್ಮ ಒಂದು ತಿಂಗಳ ವೇತನವನ್ನು ಅರ್ಪಣೆ ಮಾಡಿದ್ದಾರೆ. ಹಾಗೆಯೇ ನಮ್ಮ ರಾಜ್ಯದ ಸರ್ಕಾರಿ ನೌಕರರು ಒಂದು ದಿವಸದ ಸಂಬಳವನ್ನು ಗುಜರಾತ್ ಭೂಕಂಪ ಸಂತ್ರಸ್ತರಿಗೆ ಕೊಡುವುದಕ್ಕೋಸ್ಕರ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದಾರೆ. ಭುಜ ಜಿಲ್ಲೆಯ ಒಂದು ಭಾಗವನ್ನು ತೆಗೆದುಕೊಂಡು ಅಲ್ಲಿ ಆಸ್ಪತ್ರೆ ಅಥವಾ ಶಾಲೆಗಳನ್ನು ಪುನರ್ ನಿರ್ಮಾಣ ಮಾಡತಕ್ಕಂಥ ಈ ಎರಡು ಕಾರ್ಯಕ್ರಮದಲ್ಲಿ ಯಾವುದಾದರೊಂದು ಕಾರ್ಯಕ್ರಮವನ್ನು ಮಾಡುವುದಕ್ಕೆ ಗುಜರಾತ್ ಸರ್ಕಾರದ ಜೊತೆಯಲ್ಲಿ ಸಮಕ್ಷಮ ಮಾತನಾಡಿ ಆನಂತರ ಸದರಿ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುತ್ತೇವೆ.

ಶ್ರೀ ಜೆ.ಚ್.ಪಟೇಲ್‌ರವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಅಖಂಡವಾದಂಥ,ತ್ಯಾಗ, ಹೋರಾಟ ಮತ್ತು ನಿಷ್ಟುರವಾದಂಥ ಸೈದ್ಧಾಂತಿಕ ಚಿಂತನೆಗಳನ್ನು ಮಾಡಿದ ಒಬ್ಬ ಮಹಾನ್ ಚಿಂತಕ, ಸಮಾಜವಾದಿ ಸಿದ್ಧಾಂತಹ ಮೂಸೆಯಿಂದ ಎದ್ದು ಬಂದವರು ಶ್ರೀ ಜೆ.ಹೆಚ್. ಪಟೇಲ್‌ರವರು. ರಾಜಕಾರಣದಲ್ಲಿ ವೈಶಿಷ್ಟ್ಯಪೂರ್ಣವಾದಂಥ ತಮ್ಮದೇ ಆದ ವ್ಯಕ್ತಿತ್ವದ ಚಾಪನ್ನು ಅವರು ಬಿಟ್ಟು ಹೋಗಿದ್ದಾರೆ. ಅವರು ಶಾಸಕರಾಗಿ, ಸಂಸತ್ ಸದಸ್ಯರಾಗಿ, ಉಪ ಮುಖ್ಯಮಂತ್ರಿಗಳಾಗಿ ಹಾಗೂ ಮುಖ್ಯಮಂತ್ರಿಗಳಾಗಿ ಆಳ್ವಿಕೆ ಮಾಡಿದರು. ಕರ್ನಾಟಕ ರಾಜ್ಯಕ್ಕೆ ಸಲ್ಲಿಸಿರುವ ಅವರ ಸೇವೆ ಅನುಪಮವಾದುದು. ''ಗಡುಸು ನಿರ್ಧಾರ ತೆಗೆದುಕೊಳ್ಳುವ ಒಬ್ಬ ಸರ್ದಾರ'' ಎಂದು ನಾನು ಅವರನ್ನು ಕರೆಯುತ್ತೇನೆ, ಅವರು ನಿಷ್ಠುರವಾದಿ ಕೂಡ ಹೌದು. ತಮಗೆ ಬಹಳ ಬೇಕಾದವರನ್ನು ಕೂಡ ಅವರು ಎಷ್ಟೋ ಸಾರಿ ತಮ್ಮ ನಿಷ್ಟುರವಾದದಿಂದ ದೂರ ಇಡತಕ್ಕಂಥ ಪ್ರವೃತ್ತಿ ಅವರಲ್ಲಿತ್ತು. ಬಂದ ಕಷ್ಟಗಳನ್ನು ಕೂಡ ಎದುರಿಸತಕ್ಕಂಥ ಧೀಶಕ್ತಿ ಅವರಲ್ಲಿ ಇತ್ತು; ಅದನ್ನು ಅವರು ಪಡೆದಿದ್ದರು. ಅವರು ಮೂರುವರೇ ವರ್ಷಗಳ ಕಾಲ ಆಡಳಿತವನ್ನು ನಡೆಸಿ ಕೊಂಡು ಬಂದ ದಿನನದಿನದ ಬೆಳವಣಿಗೆಯನ್ನು ಯಾರಾದರೂ ಗಮನಿಸಿದರೆ ಎಷ್ಟು ಕಷ್ಟದಲ್ಲಿ ಅವರು ಮುಖ್ಯಮಂತ್ರಿ ಸ್ಥಾನವನ್ನು ಹಾಗೂ ಸರ್ಕಾರವನ್ನು ನಡೆಸಿಕೊಂಡು ಬಂದರು ಎನ್ನುವುದಕ್ಕೆ ಒಂದು ಜ್ವಲಂತ ಉದಾಹರಣೆಯಾಗಿದೆ ಎಂದು ನಾನು ಭಾವನೆ ಮಾಡುತ್ತೇನೆ. ಈ ಮಾತುಗಳನ್ನು ಹೇಳತಕ್ಕಂಥ ಕಾಲದಲ್ಲಿ ನನಗೆ ಯಾವುದೇ ಉದ್ದೇಶವಿಲ್ಲ. ಆ ಮನುಷ್ಯನ ನಡತೆ, ಅವರ ವ್ಯಕ್ತಿತ್ವ, ಅವರ ಮನೋಭೂಮಿಕೆ ನೋಡಲಿಕ್ಕೆ ಶಿಥಿಲವಾಗಿದ್ದಂಥ ದೇಹ ಇತ್ತು, ಆದರೆ ಅವರಿಗೆ ಗಂಡು ಹೃದಯ ಇತ್ತು; ಯಾರೇ ತಮಗಿಂಥ ಶಕ್ತರಾದಂಥವರನ್ನು ಎದುರಿಸತಕ್ಕಂಥ ಹೋರಾಟಗಾರ, ಆ ಹೋರಾಟದ ಮನೋಭಾವನೆ ಏನಿತ್ತು, ಆ ಹೋರಾಟದ ಹಿನ್ನಲೆ ಏನಿತ್ತು, ಅದು ಅವರ ಕೊನೆಯ ಉಸಿರು ಬಿಡುವವರೆಗೂ ಕೂಡ ಆ ಹೋರಾಟದ ಹಾದಿಯನ್ನು ಅವರು ಬಿಡಲಿಲ್ಲ ಎನ್ನುವುದ ಶ್ರೀ ಜೆ.ಹೆಚ್. ಪಟೇಲ್‌ರಲ್ಲಿ ನಾನು ಕಂಡಂಥ ಒಂದು ವಿಶೇಷವಾದ ವ್ಯಕ್ತಿತ್ವವೆಂದು ಈ ಸಮಯದಲ್ಲಿ ನಾನು ಹೇಳುತ್ತೇನೆ. ಅವರು ನನ್ನ ಜೊತೆಯಲ್ಲಿ ಮಹಾರಾಜ ಕಾಲೇಜಿನಲ್ಲಿ ಓದಿದರು, ನಾನು ಅವರ ಜೊತೆಯಲ್ಲಿ ಇದ್ದರೂ ಕೂಡ ಸಮಾಜವಾದಿ ಚಳುವಳಿಯಲ್ಲಿ ಭಾಗವಹಿಸಲಿಲ್ಲ, ಏಕೆಂದರೆ ನಾನು ಆಗ ಈ ದೇಶದಲ್ಲಿ ಇರಲಿಲ್ಲ. ಅನಂಥರ ನಾವು ಇಬ್ಬರೂ ರಾಜಕಾರಣದ ಎರಡು ತುದಿಗಳಲ್ಲಿ ನಿಂತೆವು. ಅವರು ವಿರೋಧ ಪಕ್ಷದಲ್ಲಿ ಇದ್ದಾಗ, ನಾವು ಆಡಳಿತ ಪಕ್ಷದಲ್ಲಿದ್ದೆವು. ನಾವು ಆಡಳಿತ ಪಕ್ಷದಲ್ಲಿದ್ದಾಗ ಅವರು ವಿರೋಧ ಪಕ್ಷದಲ್ಲಿರುತ್ತಿದ್ದರು; ನಾನು ಆಗ ಇರಲಿಲ್ಲ, ನಾನು ಪಕ್ಷದ ಪರವಾಗಿ ಮಾತನಾಡುತ್ತಿದ್ದೇನೆ. ಅವರ ಜೀವನದುದ್ದಕ್ಕೂ ಕೂಡ ಅವರು ತಾವು ನಂಬಿದ ಸಿದ್ಧಾಂತಗಳನ್ನು ಹಾಗೂ ಸ್ನೇಹಿತರನ್ನು ವಂಚಿಸಲಿಲ್ಲ, ಅವರನ್ನು ತಮ್ಮ ಹೊಟ್ಟೆಯೊಳಗೆ ಹಾಕಿಕೊಂಡರು. ನನಗೆ ಅವರ ಬಗ್ಗೆ ಬಹಳ ದೊಡ್ಡ ಅಭಿಮಾನ ಬಂದಿದ್ದು 1999ನೇ ಅಕ್ಟೋಬರ್ 11ನೇ ದಿನಾಂಕದಂದು. ನಾನು ನಿರೀಕ್ಷೆ ಮಾಡಿರಲಿಲ್ಲ, ಹೊಸ ಮುಖ್ಯಮಂತ್ರಿಯ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಬರುವುದಕ್ಕೆ ಅವರ ಆರೋಗ್ಯ ಸರಿಯಿರಲಿಲ್ಲ. ಆಗತಾನೇ ಅವರು ಚುನಾವಣೆಯಲ್ಲಿ ಸೋತು ಅದರಿಂದಾಗಿ ಬಹಳ ನೊಂದಿದ್ದರು, ಸರ್ಕಾರ ಉರುಳಿ ಹೋಗಿತ್ತು; ಬಹುಶಃ ನನಗೆ ಧೈರ್ಯ ಬರುತ್ತಿರಲಿಲ್ಲ. ನಾನು ಆ ಪರಿಸ್ಥಿತಿಯಲ್ಲಿದ್ದರೆ ನಮ್ಮ ಉತ್ತರಾಧಿಕಾರಿಯ

ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ನನಗೆ ಹೋಗತಕ್ಕಂಥ ಮಾನಸಿಕ ಶಕ್ತಿ ಬರುತ್ತಿತ್ತೋ ಇಲ್ಲವೆ ಅದು ನನಗೆ ಗೊತ್ತಿಲ್ಲ. ಆದರೆ ನಾನು ಅವರನ್ನು ಕಂಡಾಗ ನನಗೆ ಬಹಳ ಅಪಾರವಾದಂಥ ಆನಂದವಾಯಿತು. ಅದು ಅವರ ನಡತೆ, ಆ ಕ್ಯಾರೆಕ್ಟರ್‌ನ ಒಂದು ಡೈಮೆನ್‌ಷನ್. ಅವರು ಆಸ್ಪತ್ರೆಯಲ್ಲಿದ್ದಾಗ ನಾನು ಅವರನ್ನು ಮೂರು-ನಾಲ್ಕು ಬಾರಿ ನೋಡಿದೆ. ಅವರು ತಮ್ಮ ಕೊನೆಯ ಉಸಿರು ಬಿಡುವ 24 ಗಂಟೆ ಹಿಂದೆ ನಾನು ಅವರನ್ನು ಮಣಿಪಾಲ್ ಆಸ್ಪತ್ರೆಯಲ್ಲಿ ನೋಡಿದೆ. ಅಲ್ಲಿ ಆಗ ಯಾರನ್ನು ಒಳಗೆ ಬಿಡುತ್ತಿರಲಿಲ್ಲ. ಆದರೆ ಅಲ್ಲಿರುವ ವೈದ್ಯರು ನನ್ನನ್ನು ಒಳಗಡೆ ಕರೆದುಕೊಂಡು ಹೋದರು. ಅವರು ನನ್ನ ಕೈ ಹಿಡಿದಾಗ ಕಣ್ಣಲ್ಲಿ ಎರಡು ಹನಿ ನೀರು ಬಂತು. ಒಬ್ಬ ಅತ್ಯಂತ ಪ್ರಾಮಾಣಿಕ, ಅತ್ಯಂತ ಪಾರದರ್ಶಕತೆಯ ವ್ಯಕ್ತಿತ್ವವನ್ನು ಹೊಂದಿದ್ದಂಥ ಒಬ್ಬ ಸ್ನೇಹಿತನನ್ನು ಕಳೆದುಕೊಂಡಿದ್ದೇನೆಂದು ನೆನೆದಾಗ ದುಃಖ ಉಮ್ಮಳಿಸಿ ಬರುತ್ತದೆ. ಆದರೆ ಒಂದಲ್ಲ ಒಂದು ದಿವಸ ನಾವೆಲ್ಲರೂ ಕೂಡ ಅವರು ಎಲ್ಲಿ ಹೋಗಿ ಸೇರಿದ್ದಾರೋ ಅಲ್ಲಿಗೆ ಹೋಗಿ ಸೇರಬೇಕಾಗುತ್ತದೆ. ಅದೊಂದು ಸಮಾಧಾನವೇ ನಮಗೆ ನೀಡತಕ್ಕದ್ದು. ಅವರು ಈ ರಾಜ್ಯಕ್ಕೆ ಮಾಡಿದಂಥ ಸೇವೆ ಎಂದರೆ ಹೊಸ ಜಿಲ್ಲೆಗಳನ್ನು ರಚನೆ ಮಾಡಿರುವುದು. ಅವರು ವಿದ್ಯುತ್ ಕ್ಷೇತ್ರದಲ್ಲಿ ತೆಗೆದುಕೊಂಡಂಥ ದಿಟ್ಟ, ಗಂಭೀರ ಹೆಜ್ಜೆಗಳು, ಮತ್ತು ಇನ್ನು ಹಲವಾರು ವಿಚಾರಗಳಲ್ಲಿ ಅವರು ಕರ್ನಾಟಕದ ಸರ್ವಾಂಗೀಣ ಬೆಳವಣಿಗೆಗೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ಕೊಟ್ಟು ಇಂದು ನಮ್ಮನ್ನು ಅವರು ಬಿಟ್ಟು ಅಗಲಿ ಹೋಗಿದ್ದಾರೆ. ಇನ್ನು ಶ್ರೀ ಲಕ್ಷ್ಮೀನರಸಿಂಹಯ್ಯನವರು ತುಮಕೂರು ವಿಧಾನಸಭೆ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ವಿಧಾನಸಭೆಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ತೋಟಗಾರಿಕೆ ಮತ್ತು ಇಂಧನ ಇಲಾಖೆಯ ಸಚಿವರಾಗಿ ಸೇವೆ ಮಾಡಿದರು. ಇನ್ನೊಬ್ಬ ನಮಗೆ ಬೇಕಾದಂಥ ಸ್ನೇಹಿತರಾಗಿದ್ದ ಡಾ॥ ಜೀವರಾಜ್ ಆಳ್ವಾರವರ ಅಕಾಲಿಕ ಮರಣ ನನಗೆ ಬಹಳ ವ್ಯಕ್ತಿಗತವಾದ ದುಃಖವನ್ನು ತಂದಿದೆ. ಚಿಕ್ಕಪ್ರಾಯದಲ್ಲಿಯೇ ಅವರು ನಮ್ಮನ್ನು ಬಿಟ್ಟು ಹೋಗಿದ್ದಾರೆ. ನಾನು ಅವರನ್ನು ಬಹಳ ವರ್ಷಗಳಿಂದ ಬಲ್ಲವನಾಗಿರುತ್ತೇನೆ. ಅಗತ್ಯವಾದ ಚೈತನ್ಯ ಅವರ ಜೀವನದ ಒಂದು ವಿಶ್ಲೇಷಣೆ ಎಂದರೆ, ಒಳ್ಳೆಯ ಕೆಲಸವಾಗಲಿ ಅಥವಾ ಇನ್ನೊಂದು ಕೆಲಸವಾದರೂ ಡೈನಾಮಿಸಂ, ನಾನು ಡಾ॥ ಜೀವರಾಜ್ ಆಳ್ವಾರವರನ್ನು ಗುರುತಿಸತಕ್ಕಂಥ ರೀತಿಯದ್ದಾಗಿದೆ. ಅವರು ಒಬ್ಬ ಹೋರಾಟಗಾರ ಹಾಗೂ ಕನಸುಗಾರ. ಅವರ ಹೋರಾಟ ಹಾಗೂ ಕನಸು ಎರಡು ಜೊತೆಜೊತೆಯಲ್ಲೇ ಹೋಗುತ್ತಿದ್ದವು ಎಂದು ನಾನು ಭಾವನೆ ಮಾಡುತ್ತೇನೆ. ದೊಡ್ಡವರಾಗಲಿ, ಚಿಕ್ಕವರಾಗಿಲಿ ಒಂದುಕನಸನ್ನು ಇಟ್ಟುಕೊಳ್ಳದೆ ಹೋದರೆ ಹೋರಾಟ ಮಾಡತಕ್ಕಂಥ ಪ್ರಜ್ಞೆ ಅಥವಾ ಕಾಳಜಿ ಸ್ಫೂರ್ತಿ ಬರುವುದಿಲ್ಲ. ಡಾ॥ ಜೀವರಾಜ್ ಆಳ್ವಾರವರು ತಮ್ಮ ಜೀವನದ ಉದ್ದಕ್ಕೂ ಕೂಡ ಯಾರ ಮೇಲಾದರೂ, ಯಾವ ಗುಂಪಿನವರ ಮೇಲಾದರೂ ಮತ್ತು ಯಾವ ಪಕ್ಷದವರ ಮೇಲಾದರೂ ಹೋರಾಟ ಮಾಡಿ ತಾನು ಮುಂದೆ ಬರಬೇಕು ಎನ್ನತಕ್ಕಂಥ ಆಶೆಯಿಂದ ಅವರು ನಮ್ಮ ರಾಜ್ಯದ ರಾಜಕಾರಣದಲ್ಲಿ ವಿಧಾನಸಭೆಯ ಶಾಸಕರಾಗಿದ್ದರು. ಸಚಿವರಾಗಿದ್ದಂಥ ಕಾಲದಲ್ಲಿ ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದು, ಈ ಇಲಾಖೆಯ ಬಗ್ಗೆ ಅವರಿಗೆ ಬಹಳ ಕಳಕಳಿ ಇತ್ತು. ನನ್ನ ಹಾಗೂ ಅವರ ನಿಕಟವಾದ ಸಂಪರ್ಕ ಕರ್ನಾಟಕ ರಾಜ್ಯ ಚಿತ್ರಕಲಾ ಪರಿಷತ್ತಿನ ಆ ಒಂದು ಭವ್ಯ ಸುಂದರವಾದ ಕಟ್ಟಡದಲ್ಲಿ ಪ್ರಾರಂಭವಾಯಿತು. ಚಿತ್ರಕಲಾ ಪರಿಷತ್ತಿನ ಆ

ಒಂದು ಭವ್ಯ ಸುಂದರವಾದ ಕಟ್ಟಡದಲ್ಲಿ ಪ್ರಾರಂಭವಾಯಿತು. ಚಿತ್ರಕಲಾ ಪರಿಷತ್ತು ತನ್ನ ದಿಕ್ಕುದೆಸೆಗಳನ್ನು ತಪ್ಪುತ್ತಿದೆ ಮತ್ತು ಹಳಿ ತಪ್ಪಿದ ಒಂದು ಸಂಸ್ಥೆಯಾಗುತ್ತಿದೆ ಎಂದು ಕಂಡು ಬಂದ ಮೇಲೆ ಶ್ರೀ ಮತಿ ನಾಗರತ್ನಮ್ಮನವರು ನಿಧನರಾದ ಮೇಲೆ ಡಾ॥ ಜೀವರಾಜ್ ಆಳ್ವಾರವರು ನಮ್ಮ ಜೊತೆಯಲ್ಲಿ ನಿಂತು ಆ ಚಿತ್ರಕಲಾ ಪರಿಷತ್ತಿಗೆ ತಮ್ಮ ಯೋಗ್ಯವಾದ ಒಂದು ನಿರ್ದೇಶನವನ್ನು ತಂದು ಕೊಟ್ಟರು, ಗುರಿಯನ್ನು ಹಾಕಿದರು. ಅವರು ತಮ್ಮ ಗುರಿಯತ್ತ ಮುಟ್ಟಲಿಕ್ಕೆ ತಮ್ಮ ಹಲವಾರು ಕಾಲವನ್ನು ಮೀಸಲಾಗಿಟ್ಟರು. ನಾನು ಆ ಟ್ರಸ್ಟಿನ ಅಧ್ಯಕ್ಷನಾಗಿದ್ದರೂ ಕೂಡ, ನನ್ನ ಕೆಲವೊಂದು ಕೆಲಸಕಾರ್ಯಗಳ ಮಧ್ಯೆ ಆಕಡೆಗೆ ಗಮನ ಕೊಡುವುದಕ್ಕೆ ಹಲವಾರು ಕಟ್ಟುಪಾಡುಗಳಿಂದ ಸಾಧ್ಯವಾಗಿರಲಿಲ್ಲ. ಅದೆಲ್ಲವನ್ನು ತುಂಬಿಸಿದವರು ಡಾ॥ ಜೀವರಾಜ್ ಆಳ್ವಾರವರು. ರಾಷ್ಟ್ರದಲ್ಲಿ ಇವತ್ತು ಆ ಚಿತ್ರಕಲಾ ಟ್ರಸ್ಟು ಒಂದು ಪ್ರತಿಬಿಂಬವಾಗಿ ರಾರಾಜಿಸುವುದಕ್ಕೆ ಕಾರಣರೆಂದರೆ ಶ್ರೀಯುತ ಜೀವರಾಜ್ ಆಳ್ವಾರವರು ಎಂದು ನಾನು ತಮ್ಮಲ್ಲಿ ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

ಶ್ರೀಮತಿ ಕೆಂಪಮ್ಮನವರು ನಮ್ಮ ಜೊತೆಯಲ್ಲಿಯೇ ಹಲವಾರು ಹೋರಾಟದಲ್ಲಿ ಭಾಗವಹಿಸಿದ್ದರು. ನಮ್ಮ ಕಾಂಗ್ರೆಸ್ಸಿನ ಗೌರವಾನ್ವಿತ ಮಹಿಳಾ ನಾಯಕಿಯಾಗಿದ್ದರು, ಶ್ರೀಮತಿಯವರು ಹತ್ತು ಹಲವಾರು ಕನಸುಗಳನ್ನು ಕಂಡಿದ್ದರು. ನಾನು ಬುದ್ಧಿಪೂರ್ವಕವಾಗಿಯೇ ಅವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಲಿಲ್ಲ, ಅವರಿಗೆ ಬೇರೊಂದು ಜವಾಬ್ದಾರಿಯನ್ನು ಕೊಡಬೇಕೆನ್ನುವ ನನ್ನ ಆಕಾಂಕ್ಷೆಯು ಈಡೇರುವ ಮೊದಲೇ ಅವರು ವಿಧಿವಶರಾದರು. ಅವರು ತುಂಬು ಆರೋಗ್ಯದಿಂದಿದ್ದರು; ಅವರು ನಮ್ಮನ್ನು ಅಗಲಿ ಇಷ್ಟು ಬೇಗ ಹೋಗುತ್ತಾರೆಂಬ ಯೋಚನೆಯೂ ಕೂಡ ನಮಗಿರಲಿಲ್ಲ. ಇದ್ದಕ್ಕಿದ್ದಹಾಗೆ ಸಿಡಿಲು ಬಡಿದ ರೀತಿಯಲ್ಲಿ ಅವರ ನಿಧನದ ವಾರ್ತೆಯನ್ನು ಕೇಳಿ ನನಗೆ ಬಹಳ ದುಃಖವಾಯಿತು. ನಾನು ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿದ್ದಾಗ, ಅವರು ನನ್ನ ಜೊತೆಯಲ್ಲಿ ಬಹಳ ಶಿಸ್ತಿನಿಂದ ಸದಸ್ಯರಲ್ಲಿ ಒಬ್ಬರಾಗಿದ್ದರು, ಆ ಸಮಾಜದ ಕೊನೆಯ ಶ್ರೇಣಿಯ ಏಳಿಗೆಗೋಸ್ಕರ ಅವರು ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದರು. ಅಂತಃ ಒಬ್ಬ ಮಹಿಳೆಯನ್ನು ನಾವು ಕಳೆದುಕೊಂಡಿರುವುದು ನನಗೆ ವ್ಯಕ್ತಿಗತವಾದಂತಹ ದುಃಖವನ್ನು ತಂದುಕೊಟ್ಟಿದೆ.

ಶ್ರೀ ಟಿ.ಎಸ್. ಮೃತ್ಯುಂಜಯಪ್ಪ, ಶ್ರೀ ಆರ್. ವೆಂಕಟರಾಮಯ್ಯ, ಶ್ರೀ ಜಿ.ಎಸ್. ಬಸವರಾಜು, ಶ್ರೀ ಎಸ್.ಎ. ಪಾಟೀಲ್‌ರವರು, ಶ್ರೀ ಎಂ. ಬಸಪ್ಪ, ಇವರುಗಳೆಲ್ಲರೂ ಕೂಡ ನಮ್ಮ ರಾಜ್ಯದ, ನಮ್ಮ ಸಮಾಜದ ಹಲವಾರು ಕ್ಷೇತ್ರಗಳಲ್ಲಿ ಗಣನೀಯವಾದಂತಹ ಸೇವೆಯನ್ನು ಸಲ್ಲಿಸಿ ನಮ್ಮನ್ನು ಬಿಟ್ಟುಹೋಗಿದ್ದಾರೆ. ಮೊನ್ನೆ ತಾನೇ ನಿಧನರಾದ ಶ್ರೀಯುತ ಎ.ರಾಮಣ್ಣನವರು 'ವಿಜಯಾ' ಪತ್ರಿಕೆಯ ಸಂಪಾದಕರಾಗಿದ್ದರು. ಶ್ರೀ ಯುತರು 'ವಿಜಯಾ' ಪತ್ರಿಕೆಯನ್ನು ಮೈಸೂರಿನಲ್ಲಿ ಹುಟ್ಟು ಹಾಕಿದರು. ಶ್ರೀ ಯುತರು ವಿಧಾನಪರಿಷತ್ತಿನ ಸದಸ್ಯರಾಗಿದ್ದರು, ನನಗೆ ಮತ್ತು ಶ್ರೀ ಯುತ ಎ.ರಾಮಣ್ಣನವರಿಗೆ ಸುಮಾರು 50 ವರ್ಷಗಳ ಸ್ನೇಹವಿತ್ತು. ಶ್ರೀ ಯುತರು ನಡೆದು ಬಂದ ದಾರಿಯನ್ನು ನಾನು ಗುರುತಿಸುವುದಕ್ಕೆ ಹೊರಟರೆ ಬಹಳ ಕಾಲ ಬೇಕಾಗುತ್ತದೆ. ಶ್ರೀ ಯುತರು ಸ್ವಾತಂತ್ರ್ಯಕ್ಕೋಸ್ಕರ ಬಹಳ ಹೋರಾಟವನ್ನು ಮಾಡಿದವರಾಗಿದ್ದರು. ಮಂಡ್ಯಜಿಲ್ಲೆಗೂ ಹಾಗೂ ಶ್ರೀ ರಾಮಣ್ಣನವರಿಗೂ

ವಿಶೇಷವಾದಂಥಹ ಸಂಬಂಧ, ಶ್ರೀ ಯುತರು ಮಂಡ್ಯ ಸಕ್ಕರೆ ಕಾರ್ಖಾನೆಯ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ನಾಲ್ಕಾರು ವರ್ಷಗಳ ಕಾಲ ಕೆಲಸವನ್ನು ಮಾಡಿದರು. ಆಗ ನಾನು ಅವರ ಜೊತೆಯಲ್ಲಿ ಪರಿಚಯವನ್ನು ಮಾಡಿಕೊಳ್ಳುವ ಪ್ರಸಂಗ ಬಂದಿತ್ತು. ಅನಂತರ ನಾನು ಮೈಸೂರಿನಲ್ಲಿ ಓದುತ್ತಿದ್ದ ಕಾಲದಲ್ಲಿ ಮಹಾರಾಜ ಕಾಲೇಜಿನ ಸಮಾರಂಭವೇ ಆಗಲಿ ಅಥವಾ ಯಾವ ಸಮಾರಂಭವೇ ಆಗಿಲಿ, ಯುವರಾಜ ಕಾಲೇಜಿನ ಸಮಾರಂಭವೇ ಆಗಲಿ, ರಾಮಕೃಷ್ಣ ಕಾಲೇಜಿನ ಸಮಾರಂಭವೇ ಆಗಲಿ ಅಲ್ಲಿ ವಿಶೇಷವಾದಂಥಹ ಮಮತೆ ಇತ್ತು, ಅದರಲ್ಲಿಯೂ ಅವರು ಬೆಳೆಯುವ ಯುವಕರು, ಉತ್ತಮ ವಾಕ್‌ಚಾತುರ್ಯವನ್ನು ಪಡೆದಿರುವಂಥಹವರನ್ನು ಕಂಡಾಗ ಅವರಿಗೆ ವಿಶೇಷವಾದಂತಹ ಮಮಕಾರ ಬರುತ್ತಿತ್ತು. ಆ ದೃಷ್ಟಿಯಿಂದ ಅವರು ನನಗೆ ವಿಶೇಷವಾದಂತಹ ಉತ್ತೇಜನವನ್ನು, ನನ್ನನ್ನು ವಿಶೇಷವಾದಂತಹ ಪ್ರೀತಿಯಿಂದ, ಸಲಿಗೆಯಿಂದ ನಡೆಸಿಕೊಂಡು ಬಂದರು. ನಾನು ಹೋದಸಾರಿ ಮೈಸೂರಿಗೆ ಹೋದಾಗ ಅವರನ್ನು ಭೇಟಿ ಮಾಡಿದ್ದೆ, ಆದರೆ ಅವರ ಆರೋಗ್ಯ ಬಹಳ ಬೇಗ ಕ್ಷೀಣಿಸಿ ಇವತ್ತು ಅವರು ನಮ್ಮಿಂದ ಮರೆಯಾಗಿದ್ದಾರೆ. ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ಗೌರವಾನ್ವಿತರ ಬಗ್ಗೆ ನಾನು ಸರ್ಕಾರದ ಪರವಾಗಿ, ಈ ಸದನದ ನಾಯಕನಾಗಿ ನನ್ನ ಅನಂತವಾದಂಥಹ ಗೌರವಗಳನ್ನು ಮತ್ತು ನನ್ನ ಶೋಕವನ್ನು ವ್ಯಕ್ತಪಡಿಸಿ ಅವರ ಆತ್ಮಗಳಿಗೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಗುಜರಾತ್ ರಾಜ್ಯದಲ್ಲಿ ನಡೆದಂತಹ ದುರಂತದ ಬಗ್ಗೆ ಹೇಳಬೇಕೆಂದರೆ, ಬಹುಶಃ ನಮ್ಮ ದೇಶದ ಇತಿಹಾಸದಲ್ಲಿ ಈ ರೀತಿಯಾದಂತಹ ದುರಂತವನ್ನು ನಾನು ನೋಡಿಯೇ ಇಲ್ಲ. ಈ ಒಂದು ಭೂಕಂಪದಲ್ಲಿ ಲಕ್ಷಾಂತರ ಜನರು ಬಲಿಯಾದರು, ಹಾಗೂ ಮನೆಮಠಗಳನ್ನು ಕಳೆದುಕೊಂಡರು. ಭಾರತ ದೇಶದಲ್ಲಿ ಇರುವಂತಹ ಶ್ರೀಮಂತ ರಾಜ್ಯಗಳಲ್ಲಿ ಗುಜರಾತ್ ರಾಜ್ಯವು ಒಂದು ಎಂದು ನಾವು ಹೇಳುತ್ತೇವೆ. ಆ ಗುಜರಾತ್ ರಾಜ್ಯ ವು ಇವತ್ತು ಬಹಳ ಒಂದು ದುರ್ಗಮಯ ಪರಿಸ್ಥಿತಿಯಲ್ಲಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಗುಜರಾತ್ ರಾಜ್ಯವು ಸುಮಾರು 25,000 ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ನಷ್ಟವನ್ನು ಅನುಭವಿಸುತ್ತಿದೆ. ಸಂಪರ್ಕ ರಸ್ತೆ ಹಾಗೂ ಸಂಪರ್ಕ ವ್ಯವಸ್ಥೆ ಇವತ್ತು ಅಲ್ಲಿ ಕೆಟ್ಟು ಹೋಗಿದೆ. ಇವತ್ತು ಅಲ್ಲಿ ಪರಿಹಾರ ಕಾರ್ಯವನ್ನು ಮಾಡಬೇಕಾದರೆ, ಅಲ್ಲಿ ಹೋಗುವುದಕ್ಕೆ ಅನಾನುಕೂಲವಾದಂಥಹ ವ್ಯವಸ್ಥೆಯನ್ನು ನಾವು ನೋಡುತ್ತಿದ್ದೇವೆ. ಈ ದುರಂತಕ್ಕೆ ನಾವು ಎಷ್ಟೇ ಸಹಾಯ ಮತ್ತು ಸಹಕಾರಗಳನ್ನು ಮಾಡಿದರೂ ಕೂಡ ಅದು ಕಡಿಮೆ ಎಂದು ನಾನು ಹೇಳ ಬಯಸುತ್ತೇನೆ. ಈ ರೀತಿಯ ದುರಂತವಾದಂತಹ ಸಂದರ್ಭದಲ್ಲಿ ಇಡೀ ದೇಶ ಅಲ್ಲ, ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಇದಕ್ಕಾಗಿ ನೆರವು ಬಂತು. ಅದರಲ್ಲಿ ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಕರ್ನಾಟಕದ ಜನತೆ ಉದಾರ ಹೃದಯದಿಂದ ನೆರವನ್ನು ನೀಡಿತು; ಅದಕ್ಕಾಗಿ ಅವರೆಲ್ಲರನ್ನು ನಾನು ಅಭಿನಂದಿಸುತ್ತಿದ್ದೇನೆ. ಇನ್ನೂ ಹೆಚ್ಚಿನ ರೀತಿಯಲ್ಲಿ ನೆರವುಗಳು ಹರಿದು ಬರುತ್ತಿದೆ, ಆದರೂ ನಾವು ಎಷ್ಟೇ ನೆರವನ್ನು ನೀಡಿದರೂ ಸಹ ಅದು ಕಡಿಮೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಇವತ್ತು ಕೇವಲ ಹಣಕಾಸಿನ ನೆರವಲ್ಲ, ಇವತ್ತು ಅಲ್ಲಿ ಮನುಷ್ಯರ ನರವು, ಅಲ್ಲಿ ಪರಿಹಾರ ಕಾರ್ಯದಲ್ಲಿ ಕೆಲಸ

ಮಾಡುವಂತಹ ಕೈಗಳ ನೆರವನ್ನು ನಾವು ನೀಡಬೇಕಾಗಿದೆ. ಅದರ ಪುನರ್‌ನಿರ್ಮಾಣಕ್ಕಾಗಿ ಎಷ್ಟೋ ವರ್ಷಗಳ ಕಾಲ ಬೇಕಾಗಬಹುದು; ಇವತ್ತು ಭಾರತೀಯ ಜನತಾ ಪಕ್ಷದ ಶಾಸಕರು ಒಂದು ತಿಂಗಳ ವೇತನವನ್ನು ನಾವು ಆ ಪರಿಹಾರ ನಿಧಿಗಾಗಿ ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ. ನಾವು ಇವತ್ತು ಆ ಗುಜರಾತ್ ರಾಜ್ಯದ ಜನತೆ ಕ್ಷೋಭೆಯಲ್ಲಿದ್ದಾರೆ, ದುಃಖದಲ್ಲಿದ್ದಾರೆ, ಅವರ ದುಃಖದಲ್ಲಿ ನಾವು ಪಾಲ್ಗೊಳ್ಳಬೇಕು, ಆ ಕುಟುಂಬಗಳಲ್ಲಿ ತಮ್ಮ ಸಂಬಂಧಿಕರನ್ನು ಕಳೆದುಕೊಂಡಂತವರು, ಪೂರ್ಣ ಕುಟುಂಬ ನಾಶವಾದಂತಹವರು ಏನಿದ್ದಾರೆ ಅವರ ಆತ್ಮಕ್ಕೆ ನಾವು ಶಾಂತಿಯನ್ನು ಕೋರಬೇಕಾಗಿದೆ. ಆ ಗುಜರಾತ್ ಜನತೆಯಲ್ಲಿ ಧೈರ್ಯ ತುಂಬುವಂತಹ ಕೆಲಸವನ್ನು ಮಾಡಬೇಕಾಗಿದೆ.

ಇನ್ನು ಶ್ರೀ ಜೆ.ಹೆಚ್.ಪಟೇಲ್‌ರವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಅವರು ಈ ಒಂದು ಸದನದ ಕಾರ್ಯಕಲಾಪಗಳಲ್ಲಿ ಮಾನ್ಯ ಜೆ.ಹೆಚ್. ಪಟೇಲ್‌ರವರು, ಮುಖ್ಯಮಂತ್ರಿಗಳಾಗಿ ಏನು ಕಾರ್ಯ ಚಟುವಟಿಕೆಗಳನ್ನು ಮಾಡಿದ್ದರು, ಅವರ ಒಂದು ವ್ಯಕ್ತಿತ್ವ ಅವರ ಒಂದು ಮೇಧಾವಿತನ ಇವತ್ತಿಗೂ ನಮ್ಮ ಕಣ್ಮುಂದೆ ಇದೆ. 1994-99ನೇ ಸಾಲಿನಲ್ಲಿ ನಾನು ಈ ಒಂದು ಸದನಕ್ಕೆ ಪ್ರತಮವಾಗಿ ಚುನಾಯಿತನಾಗಿ ಬಂದಾಗ ಮಾನ್ಯ ಜೆ.ಹೆಚ್. ಪಟೇಲ್‌ರವರ ವ್ಯಕ್ತಿತ್ವ ನಮ್ಮ ಕಣ್ಮುಂದೆ ಬಂತು.

ವೈಯಕ್ತಿಕವಾಗಿ ಅದಕ್ಕಿಂತ ಮುಂಚೆ ಅಷ್ಟು ನಮಗೆ ಪರಿಚಯವಿರಲಿಲ್ಲ. ಆದರೆ ಐದು ವರ್ಷಗಳ ಅವರ ಒಡನಾಟದಿಂದ ಅವರ ವ್ಯಕ್ತಿತ್ವವೇನು, ಅವರ ಮೇಧಾವಿತನವೇನು ಎಂಬುದು ನಮಗೆ ತಿಳಿದು ಬಂತು. ಅವರು ಮುಖ್ಯಮಂತ್ರಿಗಳಾಗಿದ್ದಾಗ ಹಲವಾರು ಸಾರಿ ಒಳ್ಳೆಯ ಭಾಷಣ ಗಳನ್ನು ಮಾಡಿದ್ದರು, ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದರು. ಅವರ ಯಾವ ಭಾಷಣಕ್ಕೂ ನಾನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಮಾನ್ಯ ಜೆ.ಹೆಚ್. ಪಟೇಲರು ಭಾಷಣ ಮಾಡುತ್ತಾರೆಂದರೆ, ಯಾವುದೇ ಕೆಲಸವಿದ್ದರೂ ಅದನ್ನು ಬಿಟ್ಟು ಇಲ್ಲಿ ಬಂದು ಕುಳಿತುಕೊಳ್ಳುತ್ತಿದ್ದೆ. ಅಷ್ಟೊಂದು ವಿಚಾರವಿರುವಂತಹ ಪ್ರಚೋದನೆಯರುವಂತಹ ಭಾಷಣ, ಹಾಸ್ಯಮಿಶ್ರಿತವಾದ ಭಾಷಣ ಅವರದು. ಅವರು ಕೆಲವೊಂದು ಹಾಸ್ಯ ಚಟಾಕಿಗಳನ್ನು ಹಾಸ್ಯ ಚುಟುಕುಗಳನ್ನು ಹೇಳುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಅವರ ಹಾಸ್ಯ ಜೀವನದಲ್ಲಿ ಹಲವಾರು ಇನ್ಸಿಡೆಂಟ್ಸ್‌ಗಳನ್ನು ನಾನು ನೋಡಿದ್ದೇನೆ. ಅನುಭವ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಅದರ ಬಗ್ಗೆ ಗಂಭೀರವಾದ ಚಿಂತನೆ ವ್ಯಕ್ತ ಮಾಡಿದ್ದನ್ನು ನೋಡಿದ್ದೇನೆ. ಅವರಿಗೆ ಅಗಾಧವಾದ ನೆನೆಪಿನ ಶಕ್ತಿಯಿತ್ತು. ಅವರು ಒಂದು ಸಲ ಎದ್ದು ನಿಂತು ಭಾಷಣ ಮಾಡಲಿಕ್ಕೆ ಚಾಲೂ ಮಾಡಿದರೂ ಅಂದರೆ ಹಿಂದಿನ ನೆನಪುಗಳನ್ನು ಮೆಲಕು ಹಾಕುತ್ತಿದ್ದರು. 30-40 ವರ್ಷಗಳ ಹಿಂದಿನ ಘಟನೆಗಳನ್ನು ತಕ್ಷಣ ಹೇಳುವಂತಹ ಒಂದು ಅಗಾಧವಾದ ಮೇಧಾವಿಶಕ್ತಿ ಬಹುಶಃ ಅದು ಎಲ್ಲರಿಗೂ ಬರಲಿಕ್ಕಿಲ್ಲ. ಅವರು ಒಬ್ಬ ಮುತ್ಸದ್ದಿ ರಾಜಕಾರಣಿ. ಬಹುಶಃ ಮಾನ್ಯ ಜೆ.ಹೆಚ್. ಪಟೇಲರು ಯಾವ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಿದ್ದರು ಮತ್ತು ಯಾವ ಸಂದರ್ಭದಲ್ಲಿ ಆ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋದರು, ಆ ಸಂದರ್ಭದಲ್ಲಿ ನಡೆದಂತಹ ಅವರ ಪಕ್ಷದ ಒಳ ಚಟುವಟಿಕೆಗಳಿರಬಹುದು, ಮತ್ತೆ ಬೇರೆ ಬೇರೆ ಒತ್ತಡಗಳಿರಬಹುದು. ಆ ಸಂದರ್ಬದಲ್ಲಿ ಜೆ.ಹೆಚ್.ಪಟೇಲರು ಅಲ್ಲದೆ ಬೇರೆ ಯಾರೇ ಮುಖ್ಯಮಂತ್ರಿಗಳಾಗಿದ್ದರೂ ಆ ಮೂರುವರೆ ವರ್ಷಗಳ ಅವಧಿಯಲ್ಲಿ ಅವರು ಮುಖ್ಯಮಂತ್ರಿಗಳಾಗಿ ಮುಂದುವರಿಯುವುದು ಡೌಟ್ ಇತ್ತು.

ಮನ್ಯ ಪಟೇಲ್‌ರವರ ವೈಯಕ್ತಿಕ ಸ್ನೇಹಪರತೆ, ಮುತ್ಸದ್ಧಿತನ ಅವರು ಮೂರುವರೆ ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಮುಂದುವರೆಯಲಿಕ್ಕೆ ಕಾರಣ. ಆ ರೀತಿಯ ಮುತ್ಸದ್ಧಿತನ ಅವರಲ್ಲಿತ್ತು ಎನ್ನುವುದನ್ನು ನಾವೀಗ ನೆನಪಿಸಿಕೊಳ್ಳಬೇಕಾಗುತ್ತದೆ. ಬಹಳ ಮುಖ್ಯವಾಗಿ ಹೇಳಬೇಕಾದರೆ ಇವತ್ತು ಬಹಳಷ್ಟು ರಾಜಕಾರಣಿಗಳನ್ನು ನೋಡುತ್ತಿದದೇವೆ. ಬಹಳಷ್ಟು ರಾಜಕಾರಣಿಗಳಿಗೆ ಎರಡು ಮುಖವಾಡಗಳಿರುತ್ತವೆ. ಒಂದು ವೈಯಕ್ತಿಕವಾದ ಮುಖವಾಡ, ಇನ್ನೊಂದು ಸಾರ್ವಜನಿಕವಾದ ಮುಖವಾಡ. ಆದರೆ ಮಾನ್ಯ ಪಟೇಲರಲ್ಲಿ ಯಾವುದೂ ಮುಖವಾಡ ಇರಲಿಲ್ಲ. ಅವರ ಸಾರ್ವಜನಿಕ ಜೀವನ ಮತ್ತು ವೈಯಕ್ತಿಕ ಜೀವನವನ್ನು ಅವರು ಇಡೀ ಸಮಾಜಕ್ಕೆ ತೆರೆದಿಟ್ಟಿದ್ದರು. ಅವರು ಇದ್ದುದನ್ನು ಇದ್ದಹಾಗೆ ಹೇಳುವ ನಿಷ್ಠೂರವಾದಿ. ಬಹಳಷ್ಟು ರಾಜಕಾರಣಿಗಳಿಗೆ ಅದು ಬರುವುದಿಲ್ಲ. ಆ ಗುಣ ಮಾನ್ಯ ಪಟೇಲರಲ್ಲಿತ್ತು; ಹೀಗಾಗಿ ಅವರು ಸಾರ್ವಜನಿಕ ಜೀವನದಲ್ಲಿ ಎಲ್ಲರ ಒಂದು ಪ್ರೀತಿಗೆ ಪಾತ್ರರಾಗಿದ್ದರು. ಯಾವುದೇ ಜಾತಿ, ಯಾವುದೇ ಧರ್ಮ ಯಾವುದೇ ಬೇದಭಾವ ಮಾಡಲಾರದ ಒಬ್ಬ ಮಾನವತಾವಾದಿಯಾಗಿ ಬೆಳೆದಂತಹ ವ್ಯಕ್ತಿತ್ವವನ್ನು ಮಾನ್ಯ ಪಟೇಲ್‌ರಲ್ಲಿ ಕಾಣಬಹುದಾಗಿತ್ತು. ಅಂತಹ ಒಬ್ಬ ಮೇಧಾವಿ ರಾಜಕಾರಣಿ ಇವತ್ತು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅವರ ನೆನಪುಗಳು ನಮ್ಮ ಮುಂದಿವೆ. ಕೆಲವೊಂದು ಉದಾಹರಣೆಗಳನ್ನು ಕೊಟ್ಟರೆ ಅದು ತಪ್ಪಾಗಲಾರದೆಂದು ನನಗನಗನಿಸುತ್ತದೆ. ಅಂದರೆ ಜ್ವಲಂತ ಸಮಸ್ಯೆಗಳಿಗೆ ಅವರು ಯಾವರೀತಿಯ ಸ್ಪಂದಣ ಕೊಡುತ್ತಿದ್ದರೆಂದರೆ, ಒಂದುಸಲ ಅವರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ಹುಬ್ಬಳ್ಳಿ- ಧಾರವಾಡಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಕೆಲವರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಏನ್ರಿ ಮುಖ್ಯಮಂತ್ರಿಗಳೇ ನಮ್ಮ ಹುಬ್ಬಳ್ಳಿ- ಧಾರವಾಡದ ರಸ್ತೆಗಳು ಬಹಳ ಹದಗೆಟ್ಟು ವಾಹನ ಸಂಚಾರಕ್ಕೆ ಯೋಗ್ಯವಿಲ್ಲವೆಂದು ಹೇಳಿದಾಗ, ಆಗ ಪಟೇಲರು, ವಾಹನ ಸಂಚಾರಕ್ಕೆ ಯೋಗ್ಯವಿಲ್ಲವೆಂದರೆ ಹೇಳಿದಾಗ, ಆಗ ಪಟೇಲರು 'ವಾಹನ ಸಂಚಾರಕ್ಕೆ ಯೋಗ್ಯವಿಲ್ಲವೆಂದರೆ ಕುದುರೆಯ ಮೇಲೆ ಸಂಚಾರ ಮಾಡಿರಿ' ಎಂದು ಹೇಳಿದರು. ಆದರೆ ಅವರು ಏಕೆ ಈ ರೀತಿ ಮಾಡಿದರು? ಏಕೆ ಹೀಗೆ ಹೆಳಿದರೆಂದು ನಮಗೆ ಜಿಜ್ಞಾಸೆ ಶುರುವಾಯಿತು. ಕೆಲವು ಜನ ಪ್ರಮುಖರು ಮಾನ್ಯ ಪಟೇಲರ ಹತ್ತಿರ ಹೋಗಿ, ನೀವು ಏಕೆ ಕುದುರೆಯ ಮೇಲೆ ಸಂಚಾರ ಮಾಡಿರಿ ಎಂದು ಹೇಳಿದಿರಿ ಎಂದು ಕೇಳಿದಾಗ, ಅದಕ್ಕೆ ಅವರು ನಮಗೆ ಹೇಳಿದರು, ನಾನು ಹಗುರವಾಗಿ ಮಾತನಾಡಿಲ್ಲ, ಅದರಲ್ಲಿ ಅರ್ಥವಿದೆ; ಹುಬ್ಬಳ್ಳಿ- ಧಾರವಾಡದಲ್ಲಿ ನನಗೆ ಬಂದು ಮನವಿ ಕೊಡುವಾಗ ಕುದುರೆಯ ಮೇಲೆ ಸಂಚಾರ ಮಾಡುವುದಕ್ಕೂ ಆಗಲಾರದಷ್ಟು ರಸ್ತೆಗಳು ಕೆಟ್ಟುಹೋಗಿವೆಯೆಂದು ಬೇಡಿಕೆ ಇಡಬೇಕಾಗಿತ್ತು. ಆದರೆ ನಾನು ನಿಮ್ಮ ಪರವಾಗಿ ಈ ರೀತಿಯ ಉತ್ತರ ಹೇಳಿದ್ದೇನೆಂದರು. ಮುಂದೆ ಒಂದೇ ವಾರದಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ಮಂಜೂರು ಮಾಡಿ ಹುಬ್ಬಳ್ಳಿ-ಧಾರವಾಡ ರಸ್ತೆ ಸುಧಾರಣೆ ಮಾಡಿದರು. ಸಮಸ್ಯೆಗಳಿಗೆ ಯಾವರೀತಿಯ ಸ್ಪಂದನವನ್ನು ಕೊಡಬೇಕು, ಸಮಾಜದಲ್ಲಿದ್ದಂತಹ ಸಮಸ್ಯೆಗಳನ್ನು ಯಾವರೀತಿ ಹೇಳಬೇಕು ಅದನ್ನು ಅವರು ಹಾಸ್ಯ ಪೂರ್ವಕವಾಗಿ ಅವರು ವ್ಯಕ್ತಮಾಡುತ್ತಿದ್ದರು ಮತ್ತು ಅದಕ್ಕೆ ಪರಿಹಾರವನ್ನು ಕೊಡುತ್ತಿದ್ದರು. ಇನ್ನೊಂದು ಘಟನೆ ಈಗ ನನ್ನ ನೆನಪಿಗೆ ಬರುತ್ತಿದೆ. ನಾವು ಈ ಕಡೆ ಕುಳಿತಿದ್ದೊ, ಮಾನ್ಯ ಪಟೇಲರು ಆಕಡೆ ಕುಳಿತಿದ್ದರು. ಆ ಸಂದರ್ಭದಲ್ಲಿ ಪ್ರತಿಪಕ್ಷದಲ್ಲಿದ್ದಂತಹ ಪ್ರಮುಖ ನಾಯಕರು ಒಂದು ವಿಷಯದ ಬಗ್ಗೆ ಬಹಳಷ್ಟು ಗಂಭೀರವಾಗಿ, ಬಹಳ ಟೆನ್‌ಷನ್ ಮಾಡಿಕೊಂಡು 10- 15 ನಿಮಿಷ

ಬಹಳ ಕೋಪೋದ್ರಿಕ್ತರಾಗಿ ಮಾತನಾಡುವುದಕ್ಕೆ ಶುರು ಮಾಡಿದರು. ಮಾನ್ಯ ಪಟೇಲರಿಗೆ ಅದು ಸರಿ ಅನ್ನಿಸಲಿಲ್ಲ. ಅವರು ತಕ್ಷಣ ಎದ್ದು ನಿಂತು ಹೇಳಿದರು; ನೀವು ಬಹಳಷ್ಟು ತಲೆ ಬಿಸಿ ಮಾಡಿಕೊಂಡಿದ್ದೀರಿ, ಇಷ್ಟೊಂದು ತಲೆ ಬಿಸಿ ಮಾಡಿಕೊಳ್ಳುವ ಅವಶ್ಯಕತೆಯಿಲ್ಲ. ಯಾವಾಗಲೂ ತಲೆ ತಂಪಾಗಿರಬೇಕು, ಎದೆ ಬಿಸಿಯಾಗಿರಬೇಕು. ಇದು ಉಲ್ಟಾ ಆಗುತ್ತಿದೆ. ತಲೆಯನ್ನು ತಂಪಾಗಿ ಇಟ್ಟುಕೊಂಡರೆ ಚರ್ಚೆಯಲ್ಲಿ ಬಹಳಷ್ಟು ವಿಚಾರ ಹೇಳುತ್ತೀರಿ, ತಲೆ ಬಹಳ ಬಿಸಿ ಮಾಡಿಕೊಂಡರೆ ಎದೆ ತಣ್ಣಗಾಗುತ್ತದೆ. ಅದಕ್ಕೆ ನೀವು ಯಾವಾಗಲೂ ಎದೆ ಬಿಸಿಯಾಗಿಡಬೇಕು, ತಲೆ ತಂಪಾಗಿರಬೇಕೆಂದು ಹೇಳಿದರು. ಅಂದರೆ ಇದರಲ್ಲಿ ಎಷ್ಟೊಂದು ಅರ್ಥವಿದೆ? ಆ ತಕ್ಷಣ ಉದ್ರೇಕರಾಗಿ ಮಾತನಾಡುತ್ತಿದ್ದವರು ಪೂರ್ತಿ ಶಾಂತರಾಗಿಬಿಟ್ಟರು. ಈ ರೀತಿಯ ಹಾಸ್ಯ ಚಟಾಕಿಯನ್ನು ಹಾರಿಸಿ ಹಾಸ್ಯ ಲೇಪನ ಕೊಟ್ಟು ಜೀವನದಲ್ಲಿ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹರಿಸತಕ್ಕ ಕೆಲಸವನ್ನು ಪಟೇಲರು ಅಳವಡಿಸಿಕೊಂಡು ಮಾಡುತ್ತಿದ್ದರು. ಅಂತಹ ಒಬ್ಬ ಧೀಮಂತ ವ್ಯಕ್ತಿ ಇವತ್ತು ನಮ್ಮ ನಡುವೆ ಇಲ್ಲವೆನ್ನುವಂತಹ ಕೊರತೆ ಇದೆ. ಬಹುಶಃ ಅವರು ಕೊನೆಯ ದಿವಸಗಳಲ್ಲಿ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಅಡ್ಮಿಟ್ ಆದಂತಹ ಸಂದರ್ಭದಲ್ಲಿನಾನು ಒಂದೆರಡು ಸಲ ಭೇಟಿ ಆಗಲಿಕ್ಕೆ ಹೋಗಿದ್ದೆ. ಆ ಸಂದರ್ಭದಲ್ಲಿ ನನಗೊಂದು ಮಾತು ಹೇಳಿದರು. ಏನಪ್ಪ ನಿನಗೆ ಚಿಕ್ಕ ವಯಸ್ಸಿನಲ್ಲಿ ದೊಡ್ಡ ಜವಾಬ್ದಾರಿ ಬಂದಿದೆ. ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋಗು. ಈ ಅವಕಾಶ ಎಲ್ಲರಿಗೂ ಸಿಗುವುದಿಲ್ಲವೆಂದು ನನಗೆ ಆಶೀರ್ವಾದ ಮಾಡಿದರು. ಇವತ್ತಿಗೂ ಅದು ನನಗೆ ನೆನಪು ಇದೆ. ಈ ರೀತಿಯಾದ ಒಬ್ಬ ಧೀಮಂತ ವ್ಯಕ್ತಿ ನಮ್ಮನ್ನೆಲ್ಲ ಅಗಲಿದ್ದಾರೆ. ಅವರ ಕುಟುಂಬ ಅವರ ಅಗಲಿಕೆಯ ದುಃಖವನ್ನು ಸಹಿಸುವುದಕ್ಕೆ ಭಗವಂತ ಧೈರ್ಯವನ್ನು ಕೊಡಲಿಯೆಂದು ಪ್ರಾರ್ಥಿಸಿಕೊಂಡು ನನ್ನ ದುಃಖದ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದೇನೆ.

ಮತ್ತೊಬ್ಬರು ಡಾ||ಜೀವರಾಜ್ ಆಳ್ವರವರು. ಜೀವರಾಜ ಆಳ್ವರು ಅಂದರೆ ಸಂಘಟನೆ ಮತ್ತೊಂದು ಹೆಸರು. ಸಂಘಟನೆ ಮತ್ತೊಂದು ಹೆಸರು. ಸಂಘಟನೆ ಎನ್ನುವ ಡೆಫನಿಷನ್‌ಗೆ ಏನಾದರೂ ಆನ್ಸರ್ ಇದ್ದರೆ ಅದು ಜೀವರಾಜ ಆಳ್ವರು ಎಂದು ಅರ್ಥವಿರಬಹುದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರದು ಪಾದರಸದಂತಹ ವ್ಯಕ್ತಿತ್ವ. ಯಾವುದೇ ಕೆಲಸ ಹಿಡಿದರೆ ಅದನ್ನು ಬಿಟ್ಟು ಬಿಡಲಾರದೆ ಛಲದಿಂದ ಮುಂದುವರಿಸಿಕೊಂಡು ಹೋಗುವಂತಹ ವ್ಯಕ್ತಿತ್ವ ಜೀವರಾಜ ಆಳ್ವರವರದು. ಜೀವರಾಜ ಆಳ್ವರವರು ಅಧಿಕಾರದಲ್ಲಿರಲಿ ಇಲ್ಲದಿರಲಿ ಅವರ ಸುತ್ತಮುತ್ತ ಸಾವಿರಾರು ಜನರಿರುತ್ತಿದ್ದರು. ಅವರ ಮನೆಗೆ ಹೋದರೆ ನೂರಾರು ಸಾವಿರಾರು ಜನರಿರುವಂತಹ ಸನ್ನಿವೇಶವನ್ನು ನಾವು ನೋಡುತ್ತಿದ್ದೆವು. ಆ ರೀತಿ ಇದ್ದಂತಹ ಆಳ್ವರು ನಮ್ಮನ್ನು ಆಗಲಿ ನಮಗೆಲ್ಲರಿಗೂ ದುಃಖವನ್ನುಂಟು ಮಾಡಿದ್ದಾರೆ. ಅವರ ಕುಟುಂಬದವರು ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತನು ಕೊಡಲಿಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅದೇ ರೀತಿ ಮಾನ್ಯ ಲಕ್ಷ್ಮೀನರಸಿಂಹಯ್ಯನವರು, ಶ್ರೀಮತಿ ಕೆಂಪಮ್ಮನವರು ಟಿ.ಎಸ್. ಮೃತ್ಯುಂಜಯಪ್ಪನವರು, ಆರ್. ವೆಂಕಟರಾಮಯ್ಯನವರು, ಜಿ.ಎಸ್. ಬಸವರಾಜ್, ಎಸ್.ಎ. ಪಾಟೀಲ್‌ರವರು, ಎಂ.ಬಸಪ್ಪನವರು ಹಾಗೂ ಎ.ರಾಮಣ್ಣನವರು ಈ ರೀತಿ ಹಲವಾರು ಸಮಾಜಸೇವಕರು ವಿಧಾನಸಭೆ ಮತ್ತು ವಿಧಾನಪರಿಷತ್ತು ಮಾಜಿ ಶಾಸಕರುಗಳಾಗಿ ಹಾಗೂ ಜನ

ಪ್ರತಿನಿಧಿಗಳಾಗಿ ಅವರು ನಮ್ಮನ್ನೆಲ್ಲ ಅಗಲಿದ್ದಾರೆ. ಸಮಾಜಸೇವೆಯಲ್ಲಿದ್ದವರು ಅಗಲಿದ್ದು ನಮಗೆ ದುಃಖವಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ. ಆರ್. ಸಿಂಧ್ಯ : (ಕನಕಪುರ) ಮಾನ್ಯ ಅಧ್ಯಕ್ಷರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳವರು ಮಂಡಿಸಿರತಕ್ಕ ಸಂತಾಪ ಸೂಚನೆ ಪ್ರಸ್ತಾವದ ಬಗ್ಗೆ ಮಾತನಾಡುತ್ತಾ ತುಂಬು ಹೃದಯದ ಅಂತರಾಳದಿಂದ ಅನೇಕ ಭಾವನೆಗಳನ್ನು ವ್ಯಕ್ತಮಾಡಿದ್ದಾರೆ. ನಾನು ಸಹ ಈ ಸಂದರ್ಭದಲ್ಲಿ ರಾಷ್ಟ್ರ ಮತ್ತು ವಿಶ್ವ ಕಂಡರಿಯದ ಗುಜರಾತ್ ಭೂಕಂಪದಲ್ಲಿ ಸಂಕಷ್ಟಕ್ಕೆ ಸಿಕ್ಕಿರತಕ್ಕ ಜನರಿಗೆ ಅನುಕಂಪವನ್ನು ವ್ಯಕ್ತ ಮಾಡುವುದರ ಜೊತೆಗೆ ಲೆಕ್ಕ ಹಿಡಿಯಲಾರದಷ್ಟು ಜನರು ಸತ್ತಿದ್ದಾರೆ; ಅವರ ಆತ್ಮಕ್ಕೆ ಶಾಂತಿ ಸಿಗಲಿ ಯೆಂದು ಕೋರುತ್ತೇನೆ. ಭೂಕಂಪ ಇದು ವಿಜ್ಞಾನಿಗಳಿಗೂ ಒಂದು ಸವಾಲಾಗಿದೆ. ಕಾರಣ ಭೂಕಂಪ ಯಾವಾಗ ಆಗುತ್ತದೆ, ಯಾವ ಸಂದರ್ಭದಲ್ಲಿ ಆಗುತ್ತದೆ, ಎಲ್ಲಿ ಆಗುತ್ತದೆ, ಎಷ್ಟರಮಟ್ಟಿಗೆ ಆಗುತ್ತದೆಂದು ವೈಜ್ಞಾನಿಕವಾಗಿ ತಿಳಿಸುವುದಕ್ಕೆ ಇಲ್ಲಿಯವರೆಗೆ ಆಗಿಲ್ಲ. ಆದ್ದರಿಂದ ಇದು ವಿಜ್ಞಾನಿಗಳಿಗೂ ಕೂಡ ದೊಡ್ಡ ಸವಾಲೆಂದು ನಾನು ತಿಳಿದಿದ್ದೇನೆ.

ಕರ್ನಾಟಕದ ಮಹಾನ್ ಜನತೆ ತಮ್ಮ ರಾಷ್ಟ್ರಪ್ರೇಮವನ್ನು ಆ ಸಂದರ್ಭದಲ್ಲಿ ವ್ಯಕ್ತ ಮಾಡಿದ್ದಾರೆ. ಸಂತ್ರಸ್ತರ ಕುಟುಂಬಗಳಿಗೆ ನೆರವು ನೀಡುವ ದೃಷ್ಟಿಯಿಂದ ರಾಜ್ಯಸರ್ಕಾರ ಸಹಾಯ ಮಾಡಿದೆ ಮತ್ತು ಸರ್ಕಾರಿ ನೌಕರರು ಸಹಿತ ಒಂದು ದಿನದ ಸಂಬಳ ಕೊಟ್ಟಿರತಕ್ಕಂಥಾದ್ದು ಪ್ರಶಂಸನೀಯ. ಸಾರ್ವಜನಿಕರು ವಿಶೇಷವಾದ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವತ್ತು ಮಠಾಧಿಪತಿಗಳು, ಸಂಘಸಂಸ್ಥೆಗಳು ಮತ್ತು ನಮ್ಮ ಶಾಸಕ ಮಿತ್ರರು ಅವರವರ ಕ್ಷೇತ್ರಗಳಲ್ಲಿ ಅದರ ನಾಯಕತ್ವ ವಹಿಸಿ ಉತ್ತಮವಾಗಿರತಕ್ಕಂಥ ಕೆಲಸಗಳನ್ನು ಮಾಡಿದ್ದಾರೆ. ಬಹಳ ಮುಖ್ಯವಾಗಿ ಮಾನ್ಯ ಮುಖ್ಯ ಮಂತ್ರಿಗಳು ಭುಜ್ ಜಿಲ್ಲೆಯ ಒಂದು ಭಾಗದಲ್ಲಿ ಒಂದು ಆಸ್ಪತ್ರೆ ಅಥವಾ ಶಾಲೆಯನ್ನು ಕಟ್ಟುವುದಕ್ಕೆ ಇದೆಲ್ಲ ಹಣವನ್ನು ಉಪಯೋಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದನ್ನು ನಾವು ಕೂಡ ಒಪ್ಪುತ್ತೇವೆ. ಕಳೆದ ವರ್ಷ ಒರಿಸ್ಸಾದಲ್ಲಿ ನಡೆದಂಥ ಚಂಡಮಾರುತ ಅನಾಹುತದ ಸಂದರ್ಭದಲ್ಲಿ ಸಹಿತ ಸುಮಾರು ಮೂವತ್ತು-ನಲ್ವತ್ತು ಕೋಟಿ ರೂಪಾಯಿಗಳನ್ನು ಒರಿಸ್ಸಾ ಸರ್ಕಾರಕ್ಕೆ ನಮ್ಮ ರಾಜ್ಯದ ಜನ ಮತ್ತು ಸರ್ಕಾರಿ ನೌಕರರು ಕೊಟ್ಟಿದ್ದಾರೆ. ಇದೆಲ್ಲ ಏನಾಗಿದೆಯೆಂದು ತಿಳಿದುಕೊಳ್ಳತಕ್ಕಂಥ ಹಕ್ಕು ನಮಗೆ ಇದೆ. ಇದರ ಬಗ್ಗೆ ಯಾವುದಾದರೂ ಸಂದರ್ಭ ಮಾನ್ಯಮುಖ್ಯಮಂತ್ರಿಗಳು ಸದನಕ್ಕೆ ಮತ್ತು ರಾಜ್ಯದ ಜನತೆಗೆ ತಿಳಿಸಬೇಕು ಎನ್ನತಕ್ಕಂಥ ಒತ್ತಾಯವನ್ನು ಸಹಿತ ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಏಕೆಂದರೆ ಅನೇಕ ಜನ ಗುಜರಾತಿಗೆ ಹೋಗಿ ಬಂದಿರತಕ್ಕಂಥವರು ಅಲ್ಲಿಯ ವ್ಯವಸ್ಥೆ ಬಗ್ಗೆ ಅನೇಕ ಮಾತುಗಳನ್ನು ಹೇಳಿದ್ದಾರೆ. ಆದ್ದರಿಂದ ಒಬ್ಬ ಹಿರಿಯ ಸಚಿವರನ್ನು ತಾವು ಅಲ್ಲಿಗೆ ಕಳಿಸಬೆಕು. ನನ್ನ ಅಂದಾಜಿನ ಪ್ರಕಾರ ಸುಮಾರು 50-60 ಕೋಟಿ ರೂಪಾಯಿಗಳ ಹಣ ಸಂಗ್ರಹ ಆಗಿರಲಿಕ್ಕೆ ಸಾಕು. ಆ ಹಣದ ಸದುಪಯೋಗ ಸರಿಯಾದ ರೀತಿಯಲ್ಲಿ ಆಗಬೇಕು. ಅದರ ಕಡೆಗೆ ತಾವು ಗಮನಸಹರಿಸುತ್ತೀರಿ ಎನ್ನತಕ್ಕಂತ ಮಾತನ್ನು ಸಹಿತ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ; ನಾವೆಲ್ಲರೂ

ಸಹಿತ ಒಂದು ರೀತಿಯ ಅನಾಥ ಪ್ರಜ್ಞೆಯಿಂದ ತಬ್ಬಲಿಗಳಾಗಿದ್ದೇವೆ ಎನ್ನತಕ್ಕಂಥ ಭಾವನೆ ನಮ್ಮಲ್ಲಿ ಅನೇಕರಿಗೆ, ವಿಶೇಷವಾಗಿ ಈ ಸದನದಲ್ಲಿ ಇರತಕ್ಕಂಥ ನಮ್ಮ ಪಕ್ಷದ ಸಹೋದ್ಯೋಗಿಗಳಿಗೆ, ನಮಗೆಲ್ಲರಿಗೂ ಸಹಿತ ಅನ್ನಿಸಿದೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈ ಸಿದ್ಧಾಂತಗಳನ್ನು ಆಳವಾಗಿ ಅಧ್ಯಯನ ಮಾಡಿ ಶ್ರೀ ಮಾನ್ ಜೆ.ಹೆಚ್. ಪಟೇಲರು ಬುದ್ಧ, ಬಸವೇಶ್ವರ, ಅಂಬೇಡ್ಕರ್ ಅವರುಗಳ ವಿಚಾರಗಳನ್ನು ಅರಿತಿದ್ದ ಒಬ್ಬ ದಾರ್ಶನಿಕರಾಗಿದ್ದರು. ವಿಶೇಷವಾಗಿ ಇತ್ತೀಚಿನ ವರ್ಷಗಳಲ್ಲಿ ಈ ಹೊಸ ಆರ್ಥಿಕನೀತಿಯ ಉದಾರೀಕರಣ ಹುಚ್ಚು ಹೊಳೆಯ ಪ್ರವಾಹದಲ್ಲಿ ತಾನು ನಂಬಿದ್ದಂಥ ಸಮಾಜವಾದದ ವಿಚಾರಗಳು ಕೊಚ್ಚಿಹೋಗುತ್ತಿವೆಯಲ್ಲ ಎನ್ನತಕ್ಕಂಥ ವಿಚಾರವೂ ಸಹಿತ ಅವರಲ್ಲಿ ಇತ್ತು. ಆತ್ಮೀಯತೆ, ಸ್ನೇಹ ಇವೆಲ್ಲವೂ ಸಹಿತ ಒಂದು ರೀತಿಯಲ್ಲಿ ಸಾಗರೋಪಾದಿಯಲ್ಲಿ ಅವರಲ್ಲಿ ನಾವು ನೋಡಬಹುದಾಗಿತ್ತು. ಮಾನ್ಯ ಜೆ.ಹೆಚ್. ಪಟೇಲರು ಬದುಕಿದ್ದಾಗ ಒಂದು ಶಕ್ತಿಯಾಗಿದ್ದರೆ, ಸತ್ತ ಮೇಲೂ ಸಹಿತ ಅವರು ಬಲಶಾಲಿಯಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಅವರು ಸಂತ್ತಂಥ ಸಂದರ್ಭದಲ್ಲಿ ಕರ್ನಾಟಕ ಶೋಕ ವ್ಯಕ್ತಪಡಿಸಿದ್ದನ್ನು ನಾವು ನೋಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಪಟೇಲರ ಬಗ್ಗೆ ಮಾತನಾಡಿದ್ದರ ಬಗ್ಗೆ ನಾನು ಇನ್ನೂ ಹೆಚ್ಚಿನ ಹೇಳತಕ್ಕಂಥ ಅವಶ್ಯಕತೆ ಇಲ್ಲದೇ ಹೋದರೂ ಜೆ.ಹೆಚ್.ಪಟೇಲರು ಹೊಸಜಿಲ್ಲೆಗಳ ಹರಿಕಾರರಾಗಿದ್ದರು. ಒಂದು ಜಿಲ್ಲೆಯನ್ನು ಹೊಸದಾಗಿ ಮಾಡಬೇಕು ಎಂದು ಹೇಳಿದರೆ ಎಷ್ಟೊಂದು ಕಷ್ಟವಿದೆ ಎಂಬುದು ನಮಗೆ ಗೊತ್ತಿದೆ. ಅಂತಹ ಸಂದರ್ಭದಲ್ಲಿ ಯಾವುದೇ ಒಂದು ಮುಷ್ಕರಕ್ಕೆ, ಪ್ರತಿಭಟನೆಗೆ ಅವಕಾಶ ಕೊಡದೆ ಕರ್ನಾಟಕ ಏಕೀಕರಣದ ನಂತರ ಯಶಸ್ವಿಯಾಗಿ ಕರ್ನಾಟಕದಲ್ಲಿ ಏಳು ಜಿಲ್ಲೆಗಳನ್ನು ಮಾಡಿದಂಥ ಕೀರ್ತಿ, ಶ್ರೀ ಮಾನ್ ಜೆ.ಹೆಚ್. ಪಟೇಲರಿಗೆ ಹೋಗಬೇಕಾಗುತ್ತದೆ. ವಿದ್ಯುತ್‌ಕ್ಷೇತ್ರದಲ್ಲಿ ಬಹಳ ಗಡುಸಾದ ನಿರ್ಧಾರವನ್ನು ಅವರು ತೆಗೆದುಕೊಳ್ಳುತ್ತಿದ್ದರು. ಬಹುಶಃ ಈ ವಿಚಾರ ಮುಖ್ಯಮಂತ್ರಿಗಳಿಗೆ ಗೊತ್ತಿರುವುದಕ್ಕೆ ಸಾಧ್ಯವಿಲ್ಲ. ನಾವು ಚುನಾವಣೆಗಳಲ್ಲಿ ಸೋತ ಮೇಲೆ ಶಾಸಕಾಂಗ ಸಭೆಯನ್ನು ಕರೆಸಿದ್ದರು. ನಾವು 18ಜನ ಗೆದ್ದಿದ್ದೆವು, ಈಗ 19 ಜನ ಆಗಿದ್ದೇವೆ. ಆ ಸಂದರ್ಭದಲ್ಲಿ ಅವರು ನಮಗೊಂದು ಮಾತನ್ನು ಹೆಳಿದ್ದರು. ನಾವು ವಿರೋಧಪಕ್ಷದಲ್ಲಿದ್ದೇವೆ ಅಂತ ಹೇಳಿ ಎಲ್ಲ ವಿಚಾರಗಳಲ್ಲೂ ವಿರೋಧ ಮಾಡುವುದಕ್ಕೆ ಹೋಗಬೇಡಿ. ಧರಣಿ, ಸತ್ಯಾಗ್ರಹಗಳನ್ನು ನೀವು ಮಾಡುವುದಕ್ಕೆ ಹೋಗಬೇಡಿ. ವಿದ್ಯುತ್ ಕ್ಷೇತ್ರದಲ್ಲಿ ಆಗಿರತಕ್ಕಂಥ ಕೆಲಸ ದೊಡ್ಡದಾಗಿದ್ದು ಇದನ್ನು ನಾವು ಮಾಡಿದ್ದೇವೆ. ಅದನ್ನು ಈ ಸರ್ಕಾರ ಉಳಿಸಿಕೊಂಡು ಹೋಗಬೇಕು ಮತ್ತು ರಚನಾತ್ಮಕವಾಗಿ ನಾವು ವಿರೋಧಪಕ್ಷದಲ್ಲಿ ಕೆಲಸ ಮಾಡಬೇಕು ಎನ್ನತಕ್ಕಂಥ ಮಾತನ್ನು ಅವರು ನಮಗೆ ಹೇಳಿದರು. ಆರು ಕೋಟಿ ಕನ್ನಡಿಗರು ಸಹಿತ ಪಟೇಲರನ್ನು ಮರೆಯುವುದಕ್ಕೆ ಆಗುವುದಿಲ್ಲ. ಡೆಲ್ಲಿಯ ಪಾರ್ಲಿಮೆಂಟ್‌ನಲ್ಲಿ ಪ್ರಥಮಬಾರಿಗೆ ಕನ್ನಡದಲ್ಲಿ ಭಾಷಣ ಮಾಡಿದಂಥ ಕೀರ್ತಿ ಶ್ರೀ ಮಾನ್ ಜೆ.ಹೆಚ್. ಪಟೇಲರಿಗೆ ಹೋಗಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಅವರಿಗೆ ಒಂದು ದೊಡ್ಡ ಆಸೆ ಇತ್ತು. ಮಾನ್ಯ ಮುಖ್ಯಮಂತ್ರಿಗಳು ಅದನ್ನು ನೆರವೇರಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. 'ಬಸವ ಪ್ರಶಸ್ತಿ' ಎನ್ನತಕ್ಕಂಥ ಪ್ರಶಸ್ತಿಯನ್ನು ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಪ್ರಾರಂಭ ಮಾಡಿದರು. ಆ ಬಸವ ಪ್ರಶಸ್ತಿಯನ್ನು ವಿಶ್ವಮಟ್ಟದಲ್ಲಿ ದಲಿತರ ಬಗ್ಗೆ, ದೀನರ ಬಗ್ಗೆ, ದರಿದ್ರರ ಬಗ್ಗೆ ಹೋರಾಟ ಮಾಡುತ್ತಾ ಇರತಕ್ಕಂಥ ಮತ್ತೊಬ್ಬ ಹೋರಾಟಗಾರ

ನೆಲ್ಸನ್ ಮಂಡೇಲಾ ಅವರಿಗೆ ಕೊಡಬೇಕು ಎನ್ನತಕ್ಕಂಥ ಆಸೆಯನ್ನು ಅವರು ಇಟ್ಟುಕೊಂಡಿದ್ದರು. ಆದರೆ ಅವರ ಅನಾರೋಗ್ಯದ ಕಾರಣದಿಂದ ಅದನ್ನು ನೆರವೇರಿಸಲಿಕ್ಕೆ ಅವರಿಗೆ ಆಗಲಿಲ್ಲ. 'ಬಸವ ಪ್ರಶಸ್ತಿ'ಯನ್ನು ನೆಲ್ಸನ್ ಮಂಡೇಲಾಗೆ ಕೊಡುವುದರ ಮೂಲಕವಾಗಿ ಕರ್ನಾಟಕದ ಸಮಾಜವಾದಿ, ಧುರೀಣ 12ನೇ ಶತಮಾನದ ಬಸವೇಶ್ವರರ ಹೆಸರು ವಿಶ್ವಮಟ್ಟದಲ್ಲಿ ಹೋಗಬೇಕು ಎನ್ನತಕ್ಕಂಥ ದೃಢ ಕಲ್ಪನೆ ಅವರದ್ದಾಗಿತ್ತು. ಅವರ ಈ ಆಸೆಯನ್ನು ನೆರವೇರಿಸಿಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪಟೇಲರ ಧೈರ್ಯದ ಬಗ್ಗೆ ತಮಗೆ ಗೊತ್ತಿರಬೇಕು. ಹದಿನೆಂಟು ತಿಂಗಳುಗಳ ಕಾಲ ಅವರ ಜೊತೆಯಲ್ಲಿ ಜೈಲಿನಲ್ಲಿ ನಾವು ಇದ್ದೆವು. ಅವರನ್ನು ಸರ್ಕಾರದವರು ಅಥವಾ ಆಡಳಿತದಲ್ಲಿದ್ದವರು ಶಿವಮೊಗ್ಗ ಜೈಲು, ಅದಾದನಂತರ ಬಳ್ಳಾರಿ ಜೈಲು, ಅದಾದನಂತರ ಗುಲ್ಬರ್ಗಾ ಜೈಲು, ಅದಾದಬಳಿಕ ಹೈಕೋರ್ಟು ಮೂಲಕವಾಗಿ ಬೆಂಗಳೂರಿನ ಜೈಲಿಗೆ ಕರೆದುಕೊಂಡು ಬರತಕ್ಕಂಥ ಸಂದರ್ಭ ಬಂದಿತು. ಆದರೆ 'ನೀವು ಹೊರಗಡೆ ಹೋಗಬೇಕು' ಎಂದು ಅವರ ಮೇಲೆ ಬಹಳ ಒತ್ತಡಗಳು ಇದ್ದವು. ನೀವು ಹೊರಗಡೆ ಹೋಗಬೆಕು. 20 ಅಂಶ ಕಾರ್ಯಕ್ರಮಕ್ಕೆ ಸಹಿಯನ್ನು ಹಾಕಬೇಕು ಎನ್ನತಕ್ಕಂಥ ಮಾತಿತ್ತು. ಆದರೂ ಸಹಿತ ಪಟೇಲರು ಒಪ್ಪಿಗೆಯನ್ನು ಕೊಟ್ಟಿರಲಿಲ್ಲ. ಅವರು ಮಾಜಿ ಲೋಕಸಭಾ ಸದಸ್ಯರಾಗಿದ್ದರೂ ಒಬ್ಬ ಖೈದಿಯ ರೂಪದಲ್ಲಿ ಶ್ರೀ ಮಾನ್ ಜೆ.ಹೆಚ್. ಪಟೇಲರು ಇದ್ದರು. ಯಾವುದರ ಬಗ್ಗೆಯೂ ಅವರು ಬೇಜಾರು ಮಾಡಿಕೊಂಡಿರಲಿಲ್ಲ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರಬಹುದು, ಈಗಾಗಲೇ ಅನೇಕ ಪತ್ರಿಕೆಗಳಲ್ಲಿ ಇದು ಪ್ರಕಟವಾಗಿದೆ. ತುರ್ತುಪರಿಸ್ಥಿತಿ ಸಂದರ್ಭದಲ್ಲಿ, ತುರ್ತುಪರಿಸ್ಥಿತಿಯನ್ನು ಹೇರಿರತಕ್ಕಂಥಾದ್ದು ತಪ್ಪು, ನಾವು ಇದನ್ನು ಮಾತನಾಡುವುದಕ್ಕೆ ಆಗುವುದಿಲ್ಲ ಎನ್ನುವುದು ಸರ್ವವಿಧಿತ ವಿಚಾರವಾಗಿತ್ತು. ಮಾನ್ಯ ಶ್ರೀಖಾದ್ರಿ ಶಾಮಣ್ಣನವರು ಇವತ್ತು ನಮ್ಮ ಜತೆಯಲ್ಲಿ ಬದುಕಿಲ್ಲ. ಅವರು ಒಂದು ಪ್ರಮುಖವಾಗಿರತಕ್ಕಂಥ ಪತ್ರಿಕೆಗೆ ಸಂಪಾದಕರಾಗಿದ್ದರು. ತುರ್ತು ಪರಿಸ್ಥಿತಿಯನ್ನು ಹೇರಿದ ಮೂರನೇ ಇದಿವಸ ಅವರು ಸಂಪಾದಕಿಯವನ್ನು ಬರೆಯುವುದಕ್ಕೆ ಹೋಗಲಿಲ್ಲ. ಅಲ್ಲಿ ಜಾಗವನ್ನು ಖಾಲಿ ಬಿಟ್ಟರು. ಅಂದರೆ ನಾನು ಏನೂ ಮಾತನಾಡುವುದಕ್ಕೆ ಆಗುವುದಿಲ್ಲ, ನಾನು ಬರೆಯುವುದಕ್ಕೆ ಆಗುವುದಿಲ್ಲ ಎಂಬುದನ್ನು ತೋರಿಸಬೇಕು ಎನ್ನುವ ದೃಷ್ಟಿಯಿಂದ ಅವರು ಹಾಗೆ ಮಾಡಿದರು. ಆ ದಿವಸ ಶ್ರೀ ಮಾನ್ ಜೆ.ಹೆಚ್. ಪಟೇಲರು ಮತ್ತು ಒಡನಾಡಿಗಳಾದ ಶ್ರೀಮತಿ ಸ್ನೇಹಲತಾರೆಡ್ಡಿ ಅವರೆಲ್ಲರೂ ಸೇರಿ ಸರ್ಕಾರವನ್ನು ಬೆದರಿಸಬೇಕು ಎನ್ನುವ ದೃಷ್ಟಿಯಿಂದ ಕೆಲವು ಕಡೆ ಸೇತುವೆಗಳನ್ನು ಧ್ವಂಸ ಮಾಡಬೇಕು ಎನ್ನತಕ್ಕಂಥ ವಿಚಾರವನ್ನು ಇಟ್ಟುಕೊಂಡಿದ್ದರು. ಆ ಸಂದರ್ಭದಲ್ಲಿ ಕಡೂರಿನ ಒಂದು ಸೇತುವೆಯನ್ನು ಧ್ವಂಸ ಮಾಡಬೇಕು, ಅದರ ಮೂಲಕವಾಗಿ ತುರ್ತು ಪರಿಸ್ಥಿತಿಗೆ ಜನರ ವಿರೋಧವಿದೆ ಎಂಬುದನ್ನು ತೋರಿಸುವಂಥ ಅದಮ್ಯವಾದ ಧೈರ್ಯವನ್ನು ತಳೆದು ರೈಲ್ವೆ ಸೇತುವೆಯನ್ನು ಧ್ವಂಸ ಮಾಡಬೇಕೆಂದು ಹೇಳಿ ಬಾಂಬ್‌ನ್ನು ಇಟ್ಟಿದ್ದರು. ಆ ದಿವಸ ಆ ರೈಲಿನಲ್ಲಿ ಗೋವಾದ ಅವತ್ತಿನ ಮುಖ್ಯಮಂತ್ರಿ ಶಶಿಕಲಾ ಕಾಕೋಡ್ಕರ್ ಅವರು, ನಮ್ಮ ರಾಜ್ಯಪಾಲರಾಗಿದ್ದ ಮೋಹನ್‌ಲಾಲ್ ಸುಖಾಡಿಯಾ ಅವರು, ನಮ್ಮ ನಯಕರಾದಂಥ ಮುಖ್ಯಮಂತ್ರಿಗಳಾದ ಶ್ರೀ ಮಾನ್ಯ ದೇವರಾಜ್ ಅರಸು ಅವರು ಆ ಟ್ರೈನಿನಲ್ಲಿ ಹೋಗಿದ್ದರು. ಅಂತಹ ಒಂದು ಅದಮ್ಯ

ಧೈರ್ಯವನ್ನು ಪ್ರದರ್ಶಿಸಿ, ಶ್ರೀಮತಿ ಇಂದಿರಾಗಾಂಧಿಯವರು ಕರ್ನಾಟಕಕ್ಕೆ ಬರುತ್ತಿದ್ದಾರೆ ಎನ್ನತಕ್ಕಂಥ ಸಂದರ್ಭದಲ್ಲಿ ಅವರ ವಿರುದ್ಧ ಪ್ರತಿಭಟನೆ ಮಾಡಬೇಕೆಂದು ಹೇಳಿ ಶಿವಮೊಗ್ಗದಲ್ಲಿ, ಚಿಕ್ಕಮಗಳೂರಿನಲ್ಲಿ ಅವರು ನಡೆಸಿದಂಥ ಹೋರಾಟ, ಸಂಡೂರಿನ ಸತ್ಯಾಗ್ರಹ, ತುರ್ತುಪರಿಸ್ಥಿತಿಯ ಹೋರಾಟವನ್ನು ಗಮನಿಸಬೇಕು. ಅದು ಜೆ.ಹೆಚ್. ಪಟೇಲರು ಲೋಹಿಯರವರ, ಜಯಪ್ರಕಾಶ್ ನಾರಾಯಣರವರ, ಅಶೋಕಮೆಹತಾರವರ, ಮಧುಲಿಮಯೇ ಅವರುಗಳ ಗರಡಿಯಲ್ಲಿ ಪಳಗಿದವರಾಗಿ ಚಿರಂತನವಾಗಿ ಒಂದು ಹೆಸರನ್ನು ಉಳಿಸಿಹೋಗಿದ್ದಾರೆ. ಅವರು ನಿಜಲಿಂಗಪ್ಪನವರ ಹತ್ತಿರದ ಸಂಬಂಧಿಗಳು. ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಕಾಂಗನೂರಿಗೆ ಹೋಗುತ್ತಾರೆ. ಆವತ್ತು ಸಮಾಜವಾದಿ ಪಾರ್ಟಿಯಲ್ಲಿದ್ದ ಮಾನ್ಯ ಜೆ.ಹೆಚ್. ಪಟೇಲರು ಒಂದು ತೀರ್ಮಾನ ಮಾಡಿದ್ದಾರೆ. ಅವರು ನನ್ನ ಸಂಬಂಧಿಕರು ಇರಬಹುದು, ರಾಜ್ಯದ ಮುಖ್ಯಮಂತ್ರಿಗಳು ಇರಬಹುದು. ಆದರೆ ಅವರಿಗೆ ನಮ್ಮ ಊರಿನಲ್ಲಿ ಪ್ರವೇಶ ಇಲ್ಲ. ನಾವು ಸಂಡೂರಿನ ಸತ್ಯಾಗ್ರಹ ಮಾಡುತ್ತಿದ್ದೇವೆ ಎಂದು ಹೇಳಿದರು. ಆದರೆ ನಿಜಲಿಂಗಪ್ಪನವರ ಬಗ್ಗೆ ಬಹಳ ಆತ್ಮೀಯವಾಗಿರತಕ್ಕಂಥ ವಿಶ್ವಾಸವನ್ನು ಇಟ್ಟುಕೊಂಡಿದ್ದರು. ಮೊನ್ನೆಮೊನ್ನೆವರೆಗೂ ಈಸೂರಿನ ಹಿರಿಯ ನಾಯಕರಾಗಿದ್ದಂಥ, ಸದಸ್ಯರಾಗಿರತಕ್ಕಂಥ ತಿಮ್ಮಪ್ಪನವರ ಬಗ್ಗೆ, ಬಂಗಾರಪ್ಪನವರ ಬಗ್ಗೆ, ಚಂದ್ರೇಗೌಡರ ಬಗ್ಗೆ ಏ ಚಂದ್ರಣ್ಣ, ಏ ತಿಮ್ಮಪ್ಪ, ಏ ಬಂಗಾರಪ್ಪ, ಎಂದು ಹೇಳಿ ಹೆಸರು ಹಿಡಿದು ಕರೆಯತಕ್ಕಂಥ ಸ್ನೇಹವನ್ನು ಪಟೇಲರು ತೋರಿಸುತ್ತಿದ್ದರು. ಸಾಹಿತ್ಯ, ಸಂಗೀತ, ಕಲೆ, ನಾಟಕ, ಸಿನೆಮಾ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಅವರಿಗೆ ಇದ್ದಂಥ ಆಳವಾದ ಜ್ಞಾನ ಬಹುಶಃ ಬಹಳಷ್ಟು ಕಡಿಮೆ ಜನಕ್ಕೆ ಇದೆಯೆಂದು ನಾನು ತಿಳಿದಿದ್ದೇನೆ. ಢಾಂಬಿಕತನದ ಅರಿವೇ ಇಲ್ಲ. ನೇರನುಡಿ, ಸ್ನೇಹಮಯಿ ಜೀವನ ಅವರದ್ದಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಎರಡನೇ ಸ್ಥಾನದ ಮಂತ್ರಿಗಳಿಗೆ ಕೊಟ್ಟಂಥ ಗೌರವ ಮತ್ತು ಅವರುನಮಗೆ ಕೊಡುತ್ತಿದ್ದಂಥ ಸ್ವಾತಂತ್ರ್ಯ ಕೂಡ ಬಹಳವಾಗಿತ್ತು. ಅವರು ಯಾವತ್ತೂ ಸಹಿತ ನಾನು, ನನ್ನ ಸರ್ಕಾರ ಮಾಡಿದ್ದೇವೆ ಎಂಬ ಮಾತನ್ನು ಹೇಳುತ್ತಿರಲಿಲ್ಲ." I believe in my team. It is the work of my team". ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದರು. ಮಾನ್ಯ ಅಧ್ಯಕ್ಷರೇ, ಕೊನೆಗಾಲದಲ್ಲಿ ಚೆನ್ನಗಿರಿ ಚುನಾವಣೆ ಸೋಲು ಸಹಿತ ಅವರ ನೊಂದ ಮನಸ್ಸಿನ

12.00 ಪಿ.ಎಂ.

ಮೇಲೆ ಪರಿಣಾಮ ಬೀರಿತ್ತು ಮತ್ತೆ ಅವರ ಮನೆಯಲ್ಲಿ ಆದಂಥ ದುರಂತ. ಅವರ ಮನೆಯಲ್ಲಿ ಹೆಣ್ಣುಮಕ್ಕಳಿಗೆ, ಮೊಮ್ಮಕ್ಕಳಾಗಿ ಹೆಣ್ಣುಮಕ್ಕಳು ಹುಟ್ಟಿರಲಿಲ್ಲ. ಮತ್ತು ಅವರಿಗೂ ಹೆಣ್ಣು ಮಕ್ಕಳು ಇರಲಿಲ್ಲ. ಅವರ ಒಬ್ಬಳೇ ಒಬ್ಬ ಮೊಮ್ಮಗಳು ಇದ್ದದ್ದು ಶಕ್ತಿ ಎಂದು. ಆ ಶಕ್ತಿಯನ್ನು ಕಳೆದುಕೊಂಡ ಮೇಲೆ ಮಾನ್ಯ ಪಟೇಲರು ಬಹಳ ಅತ್ತಿದ್ದರು. ಅವರು ಅತ್ತಿದ್ದ ಸಂದರ್ಭವನ್ನು ನಾವುಗಳು ನೋಡಿದ್ದು ಅದೊಂದೇ ಸಂದರ್ಭ. ಮಾನ್ಯ ಜೆ.ಹೆಚ್. ಪಟೇಲ್‌ರವರ ಕುಟುಂಬದಲ್ಲಿ ದುರಂತಗಳ ಸರಮಾಲೆ. ಅಂತಹ ಒಬ್ಬ ಮಹಾನ್ ನಾಯಕನನ್ನು ನಾವು ಕಳೆದುಕೊಂಡು ಇವತ್ತು ತಬ್ಬಲಿಗಳಾಗಿದ್ದೇವೆಂಬ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯವನ್ನು ಮಾಡುವಂತಾದ್ದು, ನಮ್ಮ ರಾಜ್ಯದಲ್ಲಿ ಮಾನ್ಯ ದೇವರಾಜ್ ಅರಸುರವರು ತಮ್ಮದೇ ಆದ ಕೆಲಸಗಳನ್ನು ಮಾಡಿಕೊಂಡು ಹೋಗಿದ್ದಾರೆ. ಅವರ

ಹೆಸರನ್ನು ಶಾಶ್ವತವಾಗಿ ನೆನಪಿಸಿಕೊಳ್ಳಬೇಕೆಂದು, ಹಿಂದುಳಿದ ವರ್ಗದ ಒಂದು ಸಂಸ್ಥೆಗೆ ಅವರ ಹೆಸರನ್ನು ಇಟ್ಟಿದ್ದೇವೆ. ಶ್ರೀಮಾನ್ ಸಜೀರ್‌ಸಾಬ್‌ರವರು ಗ್ರಾಮೀಣ ಅಭಿವೃದ್ಧಿ ಕೆಲಸಗಳನ್ನು ಮಾಡಿರತಕ್ಕಂಥ ವಿಚಾರಗಳಿಗೆ ಅವರ ಹೆಸರನ್ನೂ ಒಂದು ಸಂಸ್ಥೆಗೆ ಇಟ್ಟಿದ್ದೇವೆ. ಅದೇ ರೀತಿಯಲ್ಲಿ ಮಾನ್ಯ ಜೆ.ಹೆಚ್. ಪಟೇಲರ್ ಹೆಸರೂ ಶಾಶ್ವತವಾಗಿ ಉಳಿಯುವುದಕ್ಕೆ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆಗೆಮಾನ್ಯ ಜೆ. ಹೆಚ್. ಪಟೇಲರ್ ಹೆಸರನ್ನು ಇಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡುತ್ತೇನೆ. ಕೊನೆಯದಾಗಿ ಮತ್ತೊಂದು ಮಾತನ್ನು ಹೇಳಲಿಕ್ಕೆ ನಾನು ಬಯಸುತ್ತೇನೆ. ಸರ್ಕಾರದವರು ಜೆ.ಹೆಚ್. ಪಟೇಲರು ಸತ್ತಾಗ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಸಚಿವ ಸಂಪುಟದ ಸಹೋದ್ಯೋಗಿಗಳು ತೋರಿಸಿರತಕ್ಕಂಥ ಪ್ರೀತಿ - ವಿಶ್ವಾಸ ಮತ್ತು ಕಾಳಜಿ, ಸಕಲ ಸರ್ಕಾರಿ ಗೌರವ ಮರ್ಯಾದೆಗಳೊಡನೆ ಅವರ ದೇಹಕ್ಕೆ ಕೊಟ್ಟಂಥ ಗೌರವಕ್ಕೆ ನಾನು ಪಕ್ಷದ ವತಿಯಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಮತ್ತು ಮಣಿಪಾಲ್ ಆಸ್ಪತ್ರೆಯ ಸಿಬ್ಬಂದಿವರ್ಗದವರು ಮತ್ತು ಇತರ ಸರ್ಕಾರಿ ಸಿಬ್ಬಂದಿವರ್ಗದವರು ಮಾಡಿರತಕ್ಕಂಥ ಕೆಲಸವನ್ನು ಸಹಿತ ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ. ಆಮೇಲೆ ಮಾನ್ಯ ಲಕ್ಷ್ಮೀನರಸಿಂಹಯ್ಯನವರು ಎರಡೇ ಬಾರಿ ವಿಧಾನಸಭೆಗೆ ಆರಿಸಿ ಬಂದಿದ್ದರೂ ಸಹಿತ ಇಡೀ ತುಮಕೂರು ಜಿಲ್ಲೆಗೆ ಲಚಣ್ಣ ಎಂಬ ಹೆಸರನ್ನು ಗಳಿಸಿ, ಸ್ನೇಹಜೀವಿಯಾಗಿದ್ದಂಥ ಲಕ್ಷ್ಮೀನರಸಿಂಹಯ್ಯನವರು, ಸಿದ್ಧಗಂಗಾ ಕ್ಷೇತ್ರದ ಒಬ್ಬ ಪರಮಭಕ್ತನಾಗಿ, ತುರ್ತುಪರಿಸ್ಥಿತಿಯಲ್ಲಿ ಅವರು ಮಾಡಿದಂಥ ಹೋರಾಟ ಯಾರೂ ಸಹಿತ ಮರೆಯುಲಿಕ್ಕೆ ಆಗುವುದಿಲ್ಲ. ಆ ತುರ್ತುಪರಿಸ್ಥಿತಿಯ ನಂತರದ ದಿನಗಳಲ್ಲೂ ಸಹಿತ ಅವರನ್ನು ಕಾಡಿತ್ತು. ಆದರೂ ಸಹ ಅವರು ಎದೆಗುಂದದೆ ಪಕ್ಷಾಂತರವನ್ನು ಮಾಡದೇ ಒಬ್ಬ ನಿಷ್ಠಾವಂತರಾಗಿ ತುಮಕೂರು ಜಿಲ್ಲೆಯ ಅಭಿವೃದ್ಧಿಗೆ ದುಡಿದಂಥವರು. ಅದಾದನಂತರ ನಮ್ಮ ಒಡನಾಡಿ ಡಾಕ್ಟರ್ ಜೀವರಾಜ ಆಳ್ವರವರು. ಅವರು ವ್ಯಕ್ತಿತ್ವದ ಬಗ್ಗೆ ವಿಶೇಷವಾಗಿ ಅವರ ತಂದೆಯವರಾದ ಡಾ॥ ನಾಗಪ್ಪ ಆಳ್ವರವರು ಮತ್ತು ಅವರ ಕುಟುಂಬ ನಿಜಲಿಂಗಪ್ಪನವರ ಒಡನಾಡಿಗಳಾಗಿ ಶುದ್ಧ ಚಾರಿತ್ರ್ಯಕ್ಕೆ ಮತ್ತೊಂದು ಹೆಸರಾಗಿದ್ದರು ಡಾ॥ ನಾಗಪ್ಪ ಆಳ್ವರವರು ಡಾ॥ ಜೀವರಾಜ ಆಳ್ವರವರು ವಿದ್ಯಾರ್ಥಿ ದಿಸೆಯಿಂದಲೂ ಸಹಿತ ಈ ಸದನದ ಅನೇಕ ಜನ ಸದಸ್ಯರುಗಳು ಅವರನ್ನು ಸುಮಾರು 30-40 ವರ್ಷಗಳಿಂದ ಬಲ್ಲವರಾಗಿದ್ದೇವೆ. ಚಿಕ್ಕವಯಸ್ಸಿನಿಂದಲೂ ಸಹಿತ ನಾವು ಅವರನ್ನು ಬಲ್ಲವರಾಗಿದ್ದೇವೆ. ಅವರು ಜೆ.ಪಿ.ಚಳುವಳಿಯಲ್ಲಿ ನಡೆದಂಥ ಹೋರಾಟ, ತುರ್ತು ಪರಿಸ್ಥಿತಿಯಲ್ಲಿ ಭೂಗತ ಚಟುವಟಿಕೆಗಳಲ್ಲಿ ಅವರು ಭಾಗವಹಿಸಿ, ಮಾಡಿದಂಥ ಹೋರಾಟ ಮತ್ತು ವಿಶೇಷವಾಗಿ ಕರ್ನಾಟಕದಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು ಬರಬೇಕಾದರೆ, ಜೀವರಾಜ ಆಳ್ವರವರ ಕೊಡುಗೆಯನ್ನು ವಿರೋಧಪಕ್ಷದಲ್ಲಿರತಕ್ಕ ಕೆಲವು ಸ್ನೇಹಿತರುಗಳು ಮರೆಯುವುದಕ್ಕೆ ಸಾಧ್ಯವಿಲ್ಲ. ಅವರಿಗೆ, ಯುವಕರಲ್ಲಿ ಇದ್ದಂಥ ನಂಬಿಕೆ ಮತ್ತು ವಿಶ್ವಾಸ ಅಗಾಧವಾದದ್ದು ಬಹಳ ನೋವಾಗತಕ್ಕಂಥಾದ್ದು, ಅವರ ಸಾವು ಒಂದು ದೊಡ್ಡ ದುರಂತವಾಗಿರತಕ್ಕಂಥಾದ್ದು ನಮ್ಮೆಲ್ಲರಿಗೂ ಸಹಿತ ನೋವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂಬ ಕೋರಿಕೆಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಡಾ॥ ಜೀವರಾಜ ಆಳ್ವರವರು ನಿಜಕ್ಕೂ ಸಹಿತ ಹೋರಾಟಗಾರರು.

ಅವರ ಜೀವನದ ಒಂದು ದೊಡ್ಡ ಸಾಧನೆ ಎಂದರೆ ಹೆಗಡೆಯವರು ಮಾನ್ಯ ಮುಖ್ಯಮಂತ್ರಿಗಳಾಗಿ ಇದ್ದಂಥ ಸಂದರ್ಭದಲ್ಲಿ ತಾವು ಅಧ್ಯಕ್ಷರಾಗಿದ್ದೀರಿ. ರಾಷ್ಟ್ರಕವಿಗಳಾದ ಕುವೆಂಪುರವರು ನಾನು ಈ ಸಮಾವೇಶಕ್ಕೆ ಬರುವುದಿಲ್ಲ, ಯಾವುದೇ ಬಹಿರಂಗ ಸಭೆಗಳಿಗೆ ಬರುವುದಿಲ್ಲವೆಂಬ ನಿರ್ಧಾರವನ್ನು ತೆಗೆದುಕೊಂಡಿದ್ದರು. ಆ ನಿರ್ಧಾರವನ್ನು ಬದಲಾವಣೆ ಮಾಡುವುದರಲ್ಲಿ ಮತ್ತು ಆ ವಿಶ್ವ ಕನ್ನಡ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸುವುದರಲ್ಲಿ ಅವರು ಮಾಡಿದಂಥ ಕೆಲಸ ಅದ್ವಿತೀಯವಾದಂತಾದ್ದು ಎಂದು ನಾನು ಭಾವಿಸಿ, ಸಂಘಟನೆ ಮತ್ತೊಂದು ಹೆಸರಾಗಿರತಕ್ಕಂಥ, ಯುವಕರನ್ನು ಪ್ರೇರಣೆ ಮಾಡುತ್ತಿದ್ದಂಥ ಡಾ|| ಜೀವರಾಜ ಆಳ್ವರವರ ಸಾವು ಒಂದು ದುರಂತ; ಅಕಾಲದಲ್ಲಿ ಅವರು ಸತ್ತಿದ್ದಾರೆ. ಆದರೂ ಸಹಿತ ಬಹಳಷ್ಟು ದಿನಗಳ ಕಾಲ ಅವರನ್ನು ಮರೆಯುವುದಕ್ಕಾಗುವುದಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದಂಥ ಶ್ರೀ ಮತಿ ಟಿ.ಕೆಂಪಮ್ಮನವರು ಯಾವತ್ತೂ ಕೂಡ ನಿಷ್ಠಾವಂತ ಕಾಂಗ್ರೆಸ್ಸಿಗರು. ಆದರೆ, ನಾವು ಸರ್ಕಾರದಲ್ಲಿದ್ದಾಗ ಅವರು ವಿರೋಧ ಪಕ್ಷದಲ್ಲಿದ್ದರು. ನಮ್ಮನ್ನು ಟೀಕೆ ಮಾಡುತ್ತಿದ್ದಂಥ ರೀತಿ, ನಮ್ಮ ಜೊತೆಯಲ್ಲಿದ್ದಂಥ ನಡವಳಿಕೆಗಳು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗಗಳ ಬಗ್ಗೆ ಅವರಿಗೆ ಇದ್ದಂಥ ಅನುಕಂಪ; ಅವರು ದೊಡ್ಡ ಮನೆತನದ ಟಿ.ಚನ್ನಯ್ಯನವರ ಕುಟುಂಬದ ಸಂಬಂಧದವರು. ಅದರ ಬಗ್ಗೆ, ಅವರಿಗೆ ಭಾರಿ ಹೆಮ್ಮೆ ಇರುತ್ತಿತ್ತು. ಶ್ರೀಮತಿ ಕೆಂಪಮ್ಮನವರು, ಮಾನ್ಯ ಮುಖ್ಯಮಂತ್ರಿಗಳು ಹೇಳಿದಹಾಗೆ, ಅವಕಾಶ ಸಿಗಲಿಲ್ಲವೆಂಬ ಕೊರಗು ಸಹಿತ ಕೊನೇ ಘಳಿಗೆಯಲ್ಲಿ ಅವರಿಗೆ ಇತ್ತು. ಅವರನ್ನು ನಾವು ಕಳೆದುಕೊಂಡಿದ್ದೇವೆ. ಮತ್ತೆ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಶ್ರೀ ಮಾನ್ ಮೃತ್ಯುಂಜಯಪ್ಪನವರು ತೀರಿಕೊಂಡಿದ್ದಾರೆ. ಎಲೆಮರೆಯ ಕಾಯಿಯ ಹಾಗೆ ಅವರು ಆ ಕ್ಷೇತ್ರದ ರೈತರ ಬಗ್ಗೆ ಮಾಡಿರತಕ್ಕಂಥ ಕೆಲಸ ಅದ್ವಿತೀಯವಾದುದು ಎಂದು ಹೇಳಿ, ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ, ಎಂದು ಹೇಳುತ್ತಾ, ತಾವು ಮಂಡಿಸಿರತಕ್ಕ ನಿರ್ಣಯಕ್ಕೆ ಬೆಂಬಲವನ್ನು ವ್ಯಕ್ತಮಾಡಿ, ಇವತ್ತು ದಿವಂಗತ ಪಟೇಲ್‌ರವರು ಕೀರ್ತಿಶೇಷವಾಗಿ ಕರ್ನಾಟಕದ ಸಾಮಾಜಿಕ, ರಾಜಕೀಯ ರಂಗದಲ್ಲಿ ಬಹಳ ದೊಡ್ಡ ಹೆಜ್ಜೆಯನ್ನು ಇಟ್ಟು ಹೋಗಿದ್ದಾರೆ. ಅವರ ನೆನಪಿನಲ್ಲಿ ಈ ಸರ್ಕಾರ ಒಂದು ಸಂಸ್ಥೆಯನ್ನು ಸಾಮಾಜಿಕ ಬದಲಾವಣೆ ದೃಷ್ಟಿಯಿಂದ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ.ಎಂ. ಕೃಷ್ಣಮೂರ್ತಿ(ಕಡೂರು):- ಸನ್ಮಾನ್ಯ ಸಭಾಧ್ಯಕ್ಷರೇ, ಮುಖ್ಯ ಮಂತ್ರಿಯವರು ಮಂಡಿಸಿರತಕ್ಕಂಥ ಈ ಗುಜರಾತ್ ರಾಜ್ಯದ ಭೂಕಂಪ ವಾಸ್ತವವಾಗಿ ದೇಶದಲ್ಲೇ ಕಂಡರಿಯಂದಂಥ ಒಂದು ಅನಾಹುತ. ಗಣರಾಜ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಈ ಅನಾಹುತ ಸಂಭವಿಸಿ, ರಾಜ್ಯದಲ್ಲೇ ಒಂದು ಅಲ್ಲೋಲಕಲ್ಲೋಲವಾದ ಸಂದರ್ಭ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದರೆ, ಗುಜರಾತ್ ಅನಾಹುತ ಎಲ್ಲರ ಹೃದಯವನ್ನೂ ಕಲಕಿತು. ಎಲ್ಲರ ಮನಸ್ಸಿನಲ್ಲಿ ಈ ಮೊದಲನೇ ಶತಮಾನದ ದೊಡ್ಡ ಅನಾಹುತವೆಂದು ಹೇಳಿದರೆ, ತಪ್ಪಾಗಲಿಕ್ಕಿಲ್ಲ. ಇದರಲ್ಲಿ ನಾವೆಲ್ಲರೂ ಭಾಗಿಗಳಾಗಿ, ಶಾಸಕರು ಮತ್ತು ಮುಖ್ಯಮಂತ್ರಿಗಳು ನಮ್ಮ ರಾಜ್ಯದ ನೆರವಿನ ಹಸ್ತವನ್ನು ನೀಡಿದರು. ಹಾಗೆಯೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂಥ ಜೆ.ಹೆಚ್.ಪಟೇಲರ ಜೀವನ ಹುಟ್ಟು ಸಾವುಗಳ ಮಧ್ಯೆ ಒಂದು ವರ್ಣ ರಂಜಿತ ಜೀವನವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. , ಸಮಾಜವಾದಿಗಳು,

ಪ್ರಪ್ರಥಮವಾಗಿ ಲೋಕಸಭೆಯಲ್ಲಿ ಕನ್ನಡದಲ್ಲಿ ಮಾತನಾಡಿದಂಥ ಒಬ್ಬ ಕನ್ನಡಿಗ. ಈ ದೇಶದಲ್ಲಿ ಕನ್ನಡ ಭಾಷೆ ಇದೆ, ಕನ್ನಡದಲ್ಲಿ ಮಾತನಾಡುವುದಕ್ಕೆ ಲೋಕಸಭೆಯಲ್ಲಿ ನಮಗೆ ಅವಕಾಶ ನೀಡಬೇಕೆಂದು ಹೇಳಿ ಹೋರಾಟ ಮಾಡಿದಂಥ ಒಬ್ಬ ಧೀಮಂತ ವ್ಯಕ್ತಿ. ನಾನು ಕೂಡ ಕಳೆದ ಸಾರಿ ಶಾಸಕನಾಗಿ ಬಹಳ ಹತ್ತಿರದಿಂದ ಅವರನ್ನು ನೋಡಿದ್ದೆ. ಅವರಲ್ಲಿ ಯಾವುದೇ ಈರ್ಷೆ, ಕಾರಣಗಳು ಇರುತ್ತಿರಲಿಲ್ಲ. ಅವರು ಏನಾದರೂ ನಿಷ್ಠೂರವಾಗಿ ಹೇಳಿದರೂ ಕೂಡ, ಸ್ವಲ್ಪ ಹೊತ್ತಿನಲ್ಲೇ ನಮ್ಮನ್ನು ಸಮಾಧಾನ ಪಡಿಸುವಂಥ ಮತ್ತು ವಸ್ತುಸ್ಥಿತಿ ಹೀಗಿದೆ ಎಂದು ಹೇಳುವಂಥ ಬಹುದೊಡ್ಡ ವ್ಯಕ್ತಿತ್ವವನ್ನು ಪಡೆದಿದ್ದರು. ಅವರಿಗೆ ಹಿಂದುಳಿದ ವರ್ಗದವರ ಬಗ್ಗೆ ಕಳಕಳಿ ಇತ್ತು. ಅವರು ವಿಧಾನ ಸಭೆಯಲ್ಲಿ ಮಾತನಾಡುವಂಥ ಸಂದರ್ಭದಲ್ಲಿ ಹಾಸ್ಯಚಟಾಕಿಯನ್ನು ಹಾರಿಸುವುದರ ಮುಖಾಂತರ ವಿರೋಧಪಕ್ಷದವರನ್ನೂ ಕೂಡ ಒಂದೆರಡು ನಿಮಿಷ ಸ್ತಬ್ಧರನ್ನಾಗಿಸುವುದಕ್ಕೆ ಕಾರಣಕರ್ತರಾಗಿರುತ್ತಿದ್ದರು. ವಿಧಾನ ಸಭೆಯಲ್ಲಿ ಅವರ ಸರ್ಕಾರದ ಕಾರ್ಯಕ್ರಮಗಳನ್ನು ಬಹಳ ವಿವರವಾಗಿ ಶಾಸಕರಿಗೆ, ಸಚಿವರಿಗೆ, ವಿರೋಧಪಕ್ಷದವರಿಗೆ ತಿಳಿಸುವಂಥ ಒಳ್ಳೆಯ ವಾಗ್ಮಿಗಳಾಗಿದ್ದರು. ಅಂತಹ ಒಬ್ಬ ಧೀಮಂತ ವ್ಯಕ್ತಿ ಇವತ್ತು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅವರ ಕುಟುಂಬವರ್ಗದವರಿಗೆ ದೇವರು ಆಯಸ್ಸು, ಆರೋಗ್ಯವನ್ನು ಕೊಟ್ಟು ಕಾಪಾಡಲಿ ಅವರ ಕುಟುಂಬ ವರ್ಗದವರ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಆ ಪರಮಾತ್ಮ ನೀಡಲಿ; ಇವತ್ತು ಏನು ಮಾನ್ಯ ಸದಸ್ಯರಾದ ಪಿ.ಜಿ.ಆರ್.ಸಿಂಧ್ಯಾರವರು ಹೇಳಿದ್ದಾರೆ ಅದೇ ರೀತಿ ಅವರು ಸಮಾಜವಾದಿಗಳಾಗಿ, ತುರ್ತುಪರಿಸ್ಥಿತಿ ಕಾಲದಲ್ಲಿ ಶಿವಮೊಗ್ಗ ಜೈಲಿನಲ್ಲಿ ಅವರಿದ್ದರು. ನಾನು ಒಬ್ಬ ಯುವಕನಾಗಿ ಅವರ ಜೊತೆಯಲ್ಲಿದ್ದೆ. ಆ ಒಂದು ಹೆಮ್ಮೆ ನನಗಿದೆ. ಅವರು ಆ ಕಾಲದಲ್ಲಿ ಕಡೂರಿನ ಹತ್ತಿರ ಒಂದು ಸೇತುವೆಯನ್ನು ಸ್ಫೋಟನೆ ಮಾಡಿದರು. ಆದರೆ ಅವರು ಸ್ಫೋಟ ಮಾಡುವಷ್ಟರಲ್ಲಿ ಆ ರೈಲು ಹೋಗಿತ್ತು. ಅವರ ಉದ್ದೇಶ ದುರಂತವನ್ನು ಏರ್ಪಡಿಸಿಬೇಕೆನ್ನುವುದು ಅಲ್ಲ. ಈ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಜನ ವಿರೋಧಿಸುತ್ತಿದ್ದಾರೆ ಎನ್ನುವ ಒಂದು ಕಲ್ಪನೆಯನ್ನು ಮೂಡಿಸುವುದಕ್ಕೆ ಅವರ ಪ್ರಯತ್ನ ಅದಾಗಿತ್ತು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಎರಡನೆಯದಾಗಿ ಡಾಕ್ಟರ್ ಜೀವರಾಜ ಆಳ್ವರವರು, ಅವರಲ್ಲಿದ್ದಂತಹ ಕ್ರಿಯಾಶೀಲತೆ, ಚಾಕಚಕ್ಯತೆಯಿಂದ, ಎಂತಹ ವ್ಯಕ್ತಿಗಳನ್ನಾದರೂ ಕೂಡ ಆಕರ್ಷಣೆ ಮಾಡುತ್ತಿದ್ದರು. ಪಕ್ಷದ ಕಾರ್ಯಕರ್ತರ ಸಂಘಟನೆಯನ್ನು ಮಾಡುತ್ತಿದ್ದರು. ಪಕ್ಷವನ್ನು ಕಟ್ಟುತ್ತಿದ್ದರು. ಯುವಕರಲ್ಲಿ ಜಾಗೃತಿಯನ್ನು ಮೂಡಿಸುತ್ತಿದ್ದರು. ಅವರು ಬಹಳ ಚಿಕ್ಕ ವಯಸ್ಸಿನಲ್ಲಿಯೇ ನಮ್ಮನ್ನು ಬಿಟ್ಟು ಹೋಗಿದ್ದಾರೆ. ಅವರು ಈ ವಿಧಾನಸಭೆಯ ಶಾಸಕರಾಗಿ, ಸಚಿವರಾಗಿ, ಸಾಮಜ ಸೇವೆಯಲ್ಲಿ ತೊಡಗಿದ್ದರು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅವರು ಕರ್ನಾಟಕ ಚಿತ್ರಕಲಾ ಪರಿಷತ್ತು ಟ್ರಸ್ಟ್ ಮಾಡಿ ಅದನ್ನು ಉಳಿಸಿ ಹೋಗಿದ್ದಾರೆ. ಅಂತಹ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ .ಇದರಿಂದ ನಮ್ಮ ರಾಜ್ಯಕ್ಕೆ ತುಂಬಬಾರದ ನಷ್ಟವಾಗಿದೆ. ಮಾನ್ಯ ಲಕ್ಷ್ಮೀನರಸಿಂಹನವರು ಕೂಡ ಈ ರಾಜ್ಯದ ಇಂಧನ ಸಚಿವರಾಗಿ, ತೋಟಗಾರಿಕಾ ಸಚಿವರಾಗಿ, ಹಿಂದುಳಿದವರ್ಗಗಳ ಬಗ್ಗೆ ಬಹಳ ಕಳಕಳಿಯನ್ನು ಹೊಂದಿದ್ದರು. ಅವರು ತುಮಕೂರು ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾಗಿದ್ದರು ಎಂದರೆ ತಪ್ಪಾಗುವುದಿಲ್ಲ. ಅದೇ ರೀತಿಯಲ್ಲಿ ಶ್ರೀಮತಿ ಕೆಂಪಮ್ಮನವರು, ಮಾನ್ಯ ಮೃತ್ಯುಂಜಯಪ್ಪನವರು, ಶ್ರೀ ವೆಂಕಟರಾಮಯ್ಯನವರು ಕೂಡ ನಮ್ಮನ್ನು ಬಿಟ್ಟು

ಹೋಗಿದ್ದಾರೆ, ಅವರ ಆತ್ಮಕ್ಕೆ ಭಗವಂಥ ಚಿರಶಾಂಥಿಯನ್ನು ನೀಡಲಿ, ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸುವಂತಹ ಧೈರ್ಯವನ್ನು ನೀಡಲಿ ಅಂತ ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎ.ಎನ್. ಗುರುಸ್ವಾಮಿ: (ಚಾಮುಂಡೇಶ್ವರಿ) ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಜನ ನಮ್ಮ ಮಿತ್ರರು ಗುಜರಾತಿನಲ್ಲಿ ಏನು ಘಟನೆ ನಡೆಯಿತು ಅದರ ಬಗ್ಗೆ ಅನುಕಂಪದ ಮಾತುಗಳನ್ನು ಆಡಿದ್ದಾರೆ. ಅದೇ ರೀತಿಯಲ್ಲಿ ಅನೇಕ ಜನ ಈ ಸದನದ ಸದಸ್ಯರು ನಿದನರಾಗಿರತಕ್ಕಂಥ ಸಂದರ್ಭದಲ್ಲಿ ಅವರ ಆತ್ಮಕ್ಕೆ ಭಗವಂತ ಶಾಂತಿಯನ್ನು ನೀಡಲಿ ಎಂದು ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ನಾನಾದರೂ ಕೂಡ ಈ ಗುಜರಾತ್ ಬೂಕಂಪದಲ್ಲಿ ಸಾವಿರಾರು ಜನ ಮಾರಣಹೋಮ ಏನು ನಡೆಯಿತು, ಆ ಮಾರಣ ಹೋಮದಲ್ಲಿ, ಆ ದುಃಖ ದುಮ್ಮಾನದಲ್ಲಿ ನಮ್ಮ ಕರ್ನಾಟಕದ ಕನ್ನಡಿಗರು, ಕರ್ನಾಟಕ ಸರ್ಕಾರ, ನಮ್ಮ ಮುಖ್ಯಮಂತ್ರಿಗಳು ನಮ್ಮ ಸರ್ಕಾರಿ ನೌಕರರು, ನಾವು , ನೀವು, ಎಲ್ಲರೂ ಸಹ ಒಂದಾಗಿ, ಯಾವುದೇ ರೀತಿಯ ಭಿನ್ನಭಿಪ್ರಾಯ ಹೊಂದದೆ, ಎಲ್ಲಾ ರೀತಿಯ ಸೌಕರ್ಯಗಳನ್ನು ನಮ್ಮ ನಾಯಕರಾದ ಶ್ರಿ ಮಾನ್ ಕೃಷ್ಣರವರು ಒದಗಿಸಿಕೊಟ್ಟಿದ್ದಾರೆ. ಬರೇ ಹಣ ಕೊಟ್ಟ ಮಾತ್ರಕ್ಕೆ ಸಹಾಯ ಮಾಡಿದಂತೆ ಆಗಲಿಲ್ಲ. ನಮ್ಮ ಹೃದಯಾಂತರದಿಂದ ಬಂದಂತಹ ಜನ ಅಲ್ಲಿಗೆ ಹೋಗಿ ಅವರ ಕಷ್ಟ ಕಾರ್ಪಣ್ಯದಲ್ಲಿ ಪಾಲ್ಗೊಂಡು ಕೆಲಸ ಮಾಡಿದಂತಹವರು ಇದ್ದಾರೆ. ನನಗೆ ಗೊತ್ತಿರುವ ಹಾಗೆ ಈ ಸದನದ ಕೆಲವು ಸದಸ್ಯರು ಕಾರ್ಯಕರ್ತರನ್ನು ಕರೆದುಕೊಂಡು ಹೋಗಿ ಅವರ ಕಷ್ಟದಲ್ಲಿ ಪಾಲ್ಗೊಂಡು ನೆರವು ನೀಡಿ ಬಂದಿದ್ದಾರೆ. ಆ ಕಡೆ ಇದ್ದಾರೆ, ಈ ಕಡೆಯೂ ಇದ್ದಾರೆ, ಅದು ಎಂತಹ ದೊಡ್ಡತನ ! ಎಂತಃ ಮಾನವೀಯ ಧರ್ಮವನ್ನು ಅವರು ತೆಳೆದಿದ್ದಾರೆ. ನಮ್ಮ ಸದನದ ಸದಸ್ಯರಾದ ಶ್ರೀ ಯು.ಆರ್. ಸಭಾಪತಿಯವರು ನೂರು ಜನ ಕಾರ್ಯಕರ್ತರನ್ನು ಕರೆದುಕೊಂಡು ಗಜರಾತಿಗೆ ಹೋಗಿ ಅಲ್ಲಿ ಅವರ ಕಷ್ಟಕಾರ್ಪಣ್ಯದಲ್ಲಿ ಭಾಗಿಗಳಾಗಿ ಬಂದಿದ್ದಾರೆ. ಅವರು ಆ ಒಂದು ಪರಿಸ್ಥಿತಿಯಲ್ಲಿ ಬಹಳಷ್ಟು ಶ್ರಮ ಪಟ್ಟು ಬಂದಿದ್ದಾರೆ. ನನ್ನ ಬಲಗಡೆ ಕುಳಿತಿರತಕ್ಕಂಥ ಅನೇಕ ಜನ ಮಿತ್ರರು ಅವರು ಬಿ.ಜೆ.ಪಿ. ಪಕ್ಷದವರು ಇರಬಹುದು, ಬೇರೆ ಪಕ್ಷದವರು ಇರಬಹುದು, ಅವರೆಲ್ಲರೂ ಸಹ ತಮ್ಮ ಕೈಯಲ್ಲಿ ಆದಷ್ಟು ಸೇವೆಯನ್ನು ಸಲ್ಲಿಸಿ ಬಂದಿದ್ದಾರೆ. ಹಣಕ್ಕೆ ಬೆಲೆ ಇಲ್ಲ. ನಾವು ಹಣ, ಬಟ್ಟೆ, ಸಾಮಾನು ಕಳುಹಿಸಿದ್ದೇವೆ, ಅದು ಒಂದು ಕಡೆ ಇರಲಿ, ಅವರು ಅಲ್ಲಿಗೆ ಹೇಗೆ ಸ್ವತ ತಮ್ಮ ಕೈಯಾರೆ ಮಾಡಿರತಕ್ಕಂಥ ಸೇವೆ ಬಹಳ ಅದ್ಭುತವಾದಂತಹ ಕೆಲಸ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ಇದು ನಮ್ಮ ಕನ್ನಡಿಗರ ಒಂದು ದೊಡ್ಡ ಮನಸ್ಸು. ಇದು ನಮ್ಮ ಕನ್ನಡಿಗರ ಒಂದು ದೊಡ್ಡ ಗುಣ ಅಂತ ನಾನು ಹೇಳುವುದಕ್ಕೆ ಸಂತೋಷಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಗುಜರಾತ್ ಭೂಕಂಪ ಏನು ನಡೆಯಿತು, ಈ ಬೂಕಂಪದ ಹಿಂದೆ ಕೆಲವೊಂದು ಸಿಗ್ನಲ್ಸ್ ಸಹ ಹೊರಟಿದೆ ಎನ್ನತಕ್ಕಂಥಾದ್ದನ್ನು ನಾವು ಮರೆಯಬಾರದು. ಅಲ್ಲಿಂದ ಏನು ಸಿಗ್ನಲ್ಸ್ ಹೊರಟಿದೆ ಅಂದರೆ ಭೂಕಂಪವಾದಾಗ ಯಾವ ಧರ್ಮದ ದೇವಸ್ಥಾನಗಳನ್ನು ಬಿಟ್ಟಿಲ್ಲ. ದೇವಸ್ಥಾನ ಬಿಟ್ಟಿಲ್ಲ, ಚರ್ಚ್ ಬಿಟ್ಟಿಲ್ಲ, ಮಸೀದಿ ಬಿಟ್ಟಿಲ್ಲ, ಎಲ್ಲವನ್ನು ನೆಲಸಮವಾಗಿ ಭೂಮಿಯಲ್ಲಿ ನಿರ್ನಾಮವಾಗಿ ಹೋದವು. ಎಲ್ಲಾ ವರ್ಗದ ಜನರು ಹೋದರು. ಇಂತಹ ವಗರದ ಜನ ಅಂತ ಬಿಟ್ಟಿಲ್ಲ ಆ ಭೂಕಂಪ. ಎಲ್ಲಾ ವರ್ಗದ ಜನರನ್ನು ಬಲಿ ತೆಗೆದುಕೊಂಡು

ಹೋಗಿದೆ. ಅಂದರೆ ಭೂಮಿ ಒಳಗಡೆ ತೆಗೆದುಕೊಂಡು ಹೋಯಿತು. ಪ್ರಕೃತಿಗೆ ಒಂದು ರೀತಿಯ ಕೋಪ ಅದು. ಪ್ರಕೃತಿಯ ನಿಯಮಕ್ಕೆ ವಿರುದ್ಧವಾಗಿ ಮನುಷ್ಯ ನಡೆದುಕೊಳ್ಳುತ್ತಿದ್ದಾನಲ್ಲ, ಏನು ಮಾಡುವುದು, ಇವರಿಗೆ ಅರ್ಥವಾಗುವುದಿಲ್ಲವಲ್ಲ ಅಂತ ಹೇಳಿ, ಕೋಪವೋ ಶಾಪವೋ, ಏನಾದರೂ ತಿಳಿದುಕೊಳ್ಳಿ, ಪ್ರಕೃತಿಯ ಈ ಕಡೆಗಳಲ್ಲಿ ಭೂಕಂಪ ನಡೆಯುವಂತಹ ಪರಿಸ್ಥಿತಿ ಬಂದಿದೆ. ನಾವೆಲ್ಲರೂ ಒಟ್ಟಾರೆ ಭಗವಂತನಲ್ಲಿ ಪ್ರಾರ್ಥನೆ ಮಾಡಬೇಕಾಗಿದೆ, ಅಲ್ಲಿ ಸತ್ತಿರತಕ್ಕಂಥವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ, ಪ್ರಕೃತಿ ನಿಯಮಕ್ಕೆ ಬದ್ಧರಾಗಿ ನಾವು ನಡೆಯುತ್ತೇವೆ, ದೈವದತ್ತವಾಗಿ ಭಗವಂತ ಏನು ನಮಗೆ ಕೊಟ್ಟಿದ್ದಾನೆ, ಅದೆಲ್ಲದ್ದಕ್ಕೂ ನಾವು ರಕ್ಷಣೆಯನ್ನು ಕೊಡುತ್ತೇವೆ, ಎನ್ನುವಂತಹ ಒಂದು ಪ್ರತಿಜ್ಞೆಯನ್ನು ನಾವೆಲ್ಲ ಮಾಡ ಬೇಕಾಗುತ್ತದೆ. ಗುಜರಾತಿನ ಈ ಒಂದು ಘಟನೆ ನಡೆದಿರುವುದನ್ನು ನೋಡಿದಾಗ ನನಗೆ ಇದು ನೆನಪಿಗೆ ಬರುತ್ತದೆ. ಈ ಗುಜರಾತ್ ಭೂಕಂಪ ನಡೆದಾಗ ಮತ್ತೊಂದು ಸಿಗ್ನಲ್ ಏನು ಹೊರಟಿದೆ ಅಂದರೆ ನಮ್ಮ ಭಾರತ ದೇಶದಲ್ಲಿ, ಬೆರೆ ಬೇರೆ ಭಾಷೆ, ಬೇರೆ ಬೇರೆ ಧರ್ಮ ಬೇರೆ ಬೇರೆ ರೀಜನ್ ಅಂತ ಮಾಡಿಕೊಂಡಿದ್ದೇವೆ. ಇಷ್ಟೆಲ್ಲಾ ಮಾಡಿಕೊಂಡಿದ್ದರೂ ಸಹ ಈ ದೇಶಕ್ಕೆ ಕಷ್ಟ ಬಂದಾಗ ನಾವೆಲ್ಲ ಒಂದೇ ಎನ್ನತಕ್ಕಂಥಾದ್ದನ್ನು ಇದು ಎತ್ತಿ ತೋರಿಸುತ್ತದೆ. ಭೂಕಂಪಕ್ಕೆ ಹಣ, ಬಟ್ಟೆ, ಸಾಮಾನು ಕಳುಹಿಸಿಕೊಟ್ಟಿರುವವರು ಎಲ್ಲಾ ವರ್ಗದ ಜನ ಸಹಾಯ ಮಾಡಿದ್ದಾರೆ. ಎಲ್ಲಾ ವರ್ಗದ ಜನರು ಅನುಕಂಪ ತೋರಿಸಿದ್ದಾರೆ. ಎಲ್ಲಾ ವರ್ಗದ ಜನ ಅವರಿಗೋಸ್ಕರ ಹೋರಾಟ ಮಾಡಿದ್ದಾರೆ, ಇದರ ಅರ್ಥ ಏನು? ಜನ ಕಚ್ಚಾಟ ಮಾಡಿದ್ದರೂ ಸಹ ಈ ರಾಷ್ಟ್ರಕ್ಕೆ ಧಕ್ಕೆ ಬಂದಾಗ ಎಲ್ಲಾ ವರ್ಗದ ಜನ ತಮ್ಮ ಜೀವವನ್ನು ತ್ಯಾಗ ಮಾಡುತ್ತಾರೆ ಎನ್ನುವುದು ಇದರಿಂದ ಸಾಬೀತಾಗುತ್ತದೆ. ಇದನ್ನು ನಾವು ಇನ್ನು ಮುಂದೆಯೂ ಕೀಪ್-ಅಪ್ ಮಾಡುವುದು ಬಹಳ ಮುಖ್ಯ. ಅದಕ್ಕೆ ತಕ್ಕ ವಾತಾವರಣ ನಮ್ಮಲ್ಲಿ ನಿರ್ಮಾಣವಾಗಬೇಕು. ನಮ್ಮ ನಾಯಕರುಗಳು ಅದಕ್ಕೆ ಪೂರಕವಾಗಿ ನಮ್ಮ ದೇಶ ಯಾವುದರಲ್ಲಿಯೂ ಹಿಂದೆ ಬಿದ್ದಿಲ್ಲ ಎನ್ನುವುದನ್ನು ತೋರಿಸಿಕೊಡಬೇಕಾಗಿದೆ. 1947ನೇ ಇಸವಿಯಲ್ಲಿ ನಾನು ಚಿಕ್ಕವನಿದ್ದೆ. ಆಗ ಇಡೀ ರಾಷ್ಟ್ರದ ಎಲ್ಲಾ ಜನಾಂಗದವರು ಹೋರಾಟ ಮಾಡಿದರು. ಆ ಹೋರಾಟ ಮಾಡುವಂತಹ ಮನೋಭಾವವನ್ನು ಇವತ್ತು ಬೆಳೆಸುವಂತಾದ್ದು ಆಗಬೇಕಾಗುತ್ತದೆ ಎನ್ನುವಂತಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಅಲ್ಲಿ ಭೂಕಂಪದಲ್ಲಿ ಮಡಿದಿರುವಂತಹ ಎಲ್ಲರಿಗೂ ಕೂಡ, ಸಮಸ್ತ ಕನ್ನಡ ಕುಲಕೋಟಿಯ ಪರವಾಗಿ ಅವರ ಕುಟುಂಬವರ್ಗದವರಿಗೆ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಆ ಭಗವಂತ ಕೊಡಲಿ ಎಂದು ಪ್ರಾರ್ಥಿಸುತ್ತೇವೆ. ಈಗಾಗಲೇ ನಮ್ಮ ನಾಯಕರು ಮತ್ತು ಹಿರಿಯ ಮಿತ್ರ ಮಾನ್ಯ ಜೆ.ಎಚ್. ಪಟೇಲರು ಮತ್ತು ಇತರರು ಏನು ಮರಣ ಹೊಂದಿದ್ದಾರೆ ಅವರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಜೆ.ಎಚ್.ಪಟೇಲರು ಇಲ್ಲಿ ಸದಸ್ಯರಾಗಿದ್ದಾಗ ನಾನು ಇಲ್ಲಿ ಸದಸ್ಯನಾಗಿರಲಿಲ್ಲ. ಆದರೆ ನಾನು ಅವರನ್ನು ಬಲ್ಲೆ. ನಾನು ಹೇಗೆ ಬಲ್ಲೆ ಅಂದರೆ ಮೈಸೂರು ನಗರ ಒಂದು ಕಾಲದಲ್ಲಿ ಸೋಷಿಯಲಿಸ್ಟರ್ ಒಂದು ಠಾಣ ಇದ್ದಂತೆ ಇತ್ತು. ವೀರಪ್ಪನ್ ಕಾಡಿನಲ್ಲಿ ಠಾಣ ಮಾಡಿಕೊಳ್ಳುತ್ತಾನೆ ನೋಡಿ ಹಾಗೆ ನಮ್ಮ ಸೋಷಿಯಲಿಸ್ಟರ ಠಾಣ ನಮ್ಮ ಮೈಸೂರು ನಗರದಲ್ಲಿತ್ತು. ಮೈಸೂರಿನಲ್ಲಿ ಒಂದು 6-7ಜನ ಕಟ್ಟಾ ಸೋಷಿಯಲಿಸ್ಟರು ಇದ್ದರು. ಈಗ ನಮ್ಮ ನಾಯಕರು ಹೇಳಿದರಲ್ಲ ಅವರೊಬ್ಬರು, ಮಾನ್ಯ ಶರ್ಮರವರು, ಶ್ರೀ ಟಿ.ಎನ್. ನಾಗರಾಜ್

ಅಂತ ಅವರು ನನ್ನ ಸೀನಿಯರ್ ಅಡ್ವೋಕೇಟ್ ಅವರು ನಮ್ಮ ಆಫೀಸಿಗೆ ಬರುತ್ತಿದ್ದರು, ನಾನು ಆಗ ದೊಡ್ಡ ಲಾಯರ ಏನೂ ಆಗಿರಲಿಲ್ಲ. ನಾನು ಜೂನಿಯರ್ ಲಾಯರ್ ಆಗಿದ್ದೆ. ನನ್ನ ಸೀನಿಯರ್ ಲಾಯರ್ ಆಗಿದ್ದ ಶ್ರೀ ಟಿ.ಎನ್.ನಾಗರಾಜ್ ಅಂತ ಅವರು ಹುಟ್ಟಿನಿಂದಲೂ ಸೋಷಿಯಲಿಸ್ಟ್‌ರು. ಅವರು ಈಗ ತೀರಿಹೋಗಿದ್ದಾರೆ. ಈ ಸೋಷಿಯಲಿಸ್ಟರು ನಮ್ಮ ಆಫೀಸಿಗೆ ಬರುತ್ತಿದ್ದರು ನಮ್ಮ ಕಾಗೋಡು ತಿಮ್ಮಪ್ಪನವರು, ಬಂಗಾರಪ್ಪನವರು, ಅನೇಕ ಜನ ಸೋಷಿಯಲಿಸ್ಟರು ಬರುತ್ತಿದ್ದರು. ಆ ಸಂದರ್ಭಗಳಲ್ಲಿ ನಮ್ಮ ಜೆ.ಹೆಚ್. ಪಟೇಲ್‌ರವರು ಕೂಡ ತುಂಬಾ ಆಕ್ಟೀವ್ ಆಗಿ ನಮ್ಮ ಕಚೇರಿಗೆ ಬಂದಂಥ ಸಂದರ್ಭಗಳಲ್ಲಿ ಅದು ಊಟ, ಪಾರ್ಟಿ, ಚರ್ಚೆಯ ಸಭೆಗಳು ಮುಂತಾಗಿ ಇದ್ದಿರಬಹುದು; ಆ ಸಂದರ್ಭಗಳಲ್ಲಿ ನಾವು ಅವರೊಂದಿಗೆ, ಅವರು ನಮ್ಮೊಂದಿಗೆ ಎಷ್ಟು ಬಿಚ್ಚು ಮನಸ್ಸಿನ ಮಾತುಕತೆಗಳನ್ನು ಆಡುತ್ತಿದ್ದೆವು ಮತ್ತು ಚರ್ಚಿಸುತ್ತಿದ್ದೆವು ಎಂಬುದು ನಮ್ಮ ನೆನಪಿನಂಗಳದಲ್ಲಿದೆ. ಅವರು ಇತರರಿಗೆ ಎಷ್ಟು ಪ್ರೋತ್ಸಾಹವನ್ನು ಕೊಡುತ್ತಿದ್ದರು ಮತ್ತು ಪ್ರೀತಿ ವಿಶ್ವಾಸಗಳಿಂದ ನೋಡುತ್ತಿದ್ದರು ಎಂಬುದನ್ನು ನಾನು ತುಂಬಾ ಹತ್ತಿರದಿಂದ ನೋಡಿದವನಾಗಿದ್ದೆ. ಅವರು ಮುಖ್ಯಮಂತ್ರಿಯವರಾಗಿದ್ದಾಗಲೂ ನಾವು ನೋಡಿದ್ದೇವೆ ಮತ್ತು ಪತ್ರಿಕೆಗಳ ಮೂಲಕ ತಿಳಿದುಕೊಂಡಿದ್ದೇವೆ. ಆರ್ಟಿಕಲ್- 14ರ ಅನ್ವಯ ಕಾನೂನಿನ ಎದುರು ಎಲ್ಲಾರೂ ಸಮಾನರು ಎನ್ನುವುದು ಪಟೇಲ್‌ರವರ ಸಹಪಾಟಿಗಳು ಮತ್ತು ಶಾಸಕರುಗಳಿಗೆ ಗೊತ್ತಿದೆ. ರೈಟ್-ಟು-ಫ್ರೀಡಂ ಎನ್ನುವ ಒಂದು ಆರ್ಟಿಕಲ್ ಕೂಡ ಇದೆ. ಅವರ ಕಾಲದಲ್ಲಿ ಅಂಥ ರೈಟ್-ಟು-ಫ್ರೀಡಂನ್ನು ಎಂಜಾಯ್ ಮಾಡಿದವರು ಬಹಳಷ್ಟು ಜನರು ಈಗಲು ಇದ್ದಾರೆ ಶಾಸಕರುಗಳಿಗೆ ಅಷ್ಟು ಫ್ರೀಡಂನ್ನು ಬೇರೆ ಯಾರೂ ಕೊಟ್ಟಿರಲಾರರು ಅನ್ನಿಸುತ್ತದೆ. ಮಾನ್ಯ ಜೆ.ಹೆಚ್.ಪಟೇಲ್‌ರವರು ಅಂಥ ಒಬ್ಬ ಮಹಾನ್ ವ್ಯಕ್ತಿಯಾಗಿದ್ದರು.

ಮಾನ್ಯ ಜೆ.ಹೆಚ್.ಪಟೇಲ್‌ರವರ ಬಗ್ಗೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಆ ಬಗ್ಗೆ ಸ್ವಲ್ಪ ಗಮನಹರಿಸಬೇಕಾಗಿ ವಿಜ್ಞಾಪನೆಗಳು. ನಮ್ಮ ಮೈಸೂರಿನಲ್ಲಿ ಮಹಾರಾಜರುಗಳ ಮೆರವಣಿಗೆಯು ನಡೆಯುತ್ತಿತ್ತು. ವರ್ಷಕ್ಕೊಮ್ಮೆ ಆನೆಗಳ ಮೇಲೆ ಕುಳಿತುಕೊಂಡು ಅವರ ಪಾಡಿಗೆ ಅವರು ಹೋಗುತ್ತಿದ್ದರು. ಅದು ರಾಜರ ವೈಭವದ ಮೆರವಣಿಗೆ. ಆ ಸಂದರ್ಭಗಳಲ್ಲಿ ದಿವಂಗತ ಶಾಂತವೇರಿ ಗೋಪಾಲಗೌಡರವರು ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಂತಾಗಿ ಆರೇಳು ಜನರು ಸೇರಿ ಮೆರವಣಿಯ ಕಾಲದಲ್ಲಿ ಕಪ್ಪುಬಾವುಟವನ್ನು ಪ್ರತೀ ವರ್ಷವೂ ಹಾರಿಸುವುದನ್ನು ಮಾಡುತ್ತಿದ್ದರು. ಇಂಥ ಪ್ರತಿಭಟನೆಯಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಕೂಡ ಇರುತ್ತಿದ್ದರೆಂದು ಕಾಣುತ್ತದೆ. ಹೀಗೆ ಸೋಷಿಯಾಲಿಸ್ಟ್‌ಗಳೇ ಒಂದು ಶಾಖಾವನ್ನು ಮೈಸೂರಿನಲ್ಲಿ ಮಾಡಿಕೊಂಡಿದ್ದರು. ಅಂಥ ಒಂದು ಸೋಷಿಯಾಲಿಸ್ಟ್‌ರ ಬ್ರಾಂಚ್‌ಗೆ ಪಟೇಲ್‌ರವರು ಪ್ರಮುಖರಾಗಿದ್ದರು. ಅವರು ಕಪ್ಪು ಬಾವುಟ ಹಾರಿಸುವುದನ್ನು ಪ್ರತಿವರ್ಷವೂ ಒಂದು ಮಾಮೂಲು ಕಾರ್ಯಕ್ರಮದಂತೆ ಮಾಡಿಕೊಂಡಿದ್ದರು. ಆಗ ನಾನೊಮ್ಮೆ ನೀವು ಆರೇಳು ಜನರು ಬಂದು ಕಪ್ಪು ಬಾವುಟದ ಪ್ರತಿಭಟನೆ ಮಾಡಿ ಬಾಯಿಬಡಿದುಕೊಂಡರೆ ರಾಜರ ಮೆರವಣಿಗೆಯು ನಿಂತು ಹೋಗುತ್ತದೆಯೇ? ಎಂದು ಕೇಳಿದೆ. ಅದಕ್ಕೆ ಉತ್ತರಿಸಿದ ಅವರು, ಹಾಗಲ್ಲ ಗುರುಸ್ವಾಮಿ, ಇದು ರಾಜಶಾಹಿ ಹೇಗೆ ಮೆರೆಯುತ್ತದೆ? ರಾಜ ಆನೆ ಮೇಲೆ ಹೇಗೆ ಹೋಗಲು ಸಾಧ್ಯ? ಅವರೂ

ನಾವೆಲ್ಲರೂ ಸಮಾನರೇ. ನಮ್ಮ ಸಂವಿಧಾನ ಮತ್ತು ಅದರಲ್ಲಿ ನೀಡಲಾದ ಹಕ್ಕುಗಳು ಎಲ್ಲರಿಗೂ ಒಂದೇ ಸಮಾನವಾಗಿರುತ್ತದೆ. ನೀನು ಇಂಥ ವ್ಯತ್ಯಾಸವನ್ನು ಗಮನಿಸಿಲ್ಲವೇ? ಎಂದು ಪಟೇಲ್‌ರವರು ನಮಗೆ ಹೇಳುತ್ತಿದ್ದರು. ಇಂಥ ಒಂದು ತತ್ವವಾದವನ್ನು ಬಹುತೇಕ ಜನರು ಒಪ್ಪದೇ ಇರತಕ್ಕಂಥ ಕಾಲದಲ್ಲಿ ಕೆಚ್ಚೆದೆಯಿಂದ ಪಟೇಲ್‌ರವರು ಪ್ರತಿಪಾದಿಸುತ್ತಿದ್ದರು, ಅಂಥ ಶಕ್ತಿ ಮತ್ತು ಧೈರ್ಯ ಎಷ್ಟು ಜನರಿಗಿದೆ ಹೇಳಿ? ಎಲ್ಲರೂ ಆಗ ಇಂಥ ವಿಚಾರದಲ್ಲಿ ಕಾಂಪ್ರಮೈಸ್ ಮಾಡಿಕೊಂಡಿದ್ದರು. ಆದರೆ ಮಹಾರಾಜರ ಮೆರವಣಿಗೆ ಕಾಲದಲ್ಲಿ ಅದನ್ನು ಇವರುಗಳು ಸೇರಿ ಪ್ರತಿಭಟಿಸುತ್ತಿದ್ದರು. ಅದನ್ನು ನಾನು ತುಂಬಾ ಮೆಚ್ಚಿಕೊಂಡಿದ್ದೇನೆ ಅವರಲ್ಲಿನ ಕರೇಜ್ ಆಫ್ ಕನೆಕ್ಷನ್ ಮತ್ತು ಅವರಲ್ಲಿನ ಇನ್ನರ್ ಸಬ್‌ಕಾನೇಶೀಯಸ್ ಏನಿದೆ ಅದರ ಪ್ರಕಾರ ನಡೆಯುವಂಥಾದ್ದು ಎಷ್ಟು ಜನರಲ್ಲಿ ನಾವು ಇವೊತ್ತು ಕಾಣಬಹುದು? ಅಂಥವರನ್ನು ಕಾಣಬೇಕೆಂದರೆ ಅವರೊಬ್ಬವರೆ ಎಂದು ಹೇಳಬಹುದು. ಅವರೇ ಮಾನ್ಯ ಜೆ.ಹೆಚ್.ಪಟೇಲ್‌ರವರು. ನಾನು ಅವರನ್ನು ಬೆಂಗಳೂರಿಗೆ ಬಂದ ಅನೇಕ ಸಂದರ್ಭಗಳಲ್ಲಿ ಹತ್ತಿರದಿಂದ ನೋಡಿದ್ದೇನೆ. ದಿವಂಗತ ವೀರೇಂದ್ರ ಪಾಟೀಲ್‌ರವರು ಅನಾರೋಗ್ಯರಾಗಿದ್ದಂಥ ಕಾಲದಲ್ಲಿ ನಾನು ಅವರನ್ನು ನೋಡಲು ಹೋಗಿದ್ದಾಗ ಜೆ.ಹೆಚ್. ಪಟೇಲ್‌ರವರೂ ಸಹ ಬಂದಿದ್ದರು. ಆಗ ನಾವಿಬ್ಬರೂ ಕುಳಿತು ಮಾತನಾಡಿಸಿದ್ದೆವು. ಆರೋಗ್ಯ ಇತ್ಯಾದಿಗಳು ಚೆನ್ನಾಗಿದ್ದಾವೆಯೇ ಎಂದು ನಾನು ಕೇಳಿದೆ, ಅವರು ನನ್ನ ಬಗ್ಗೆ ಕೇಳಿದ್ದರು. ಮಾನ್ಯ ವೀರೇಂದ್ರ ಪಾಟೀಲರ ಆರೋಗ್ಯವನ್ನು ಅವರು ವಿಚಾರಿಸಿದಾಗ ಆರೋಗ್ಯ ಸ್ವಲ್ಪ ಚೆನ್ನಾಗಿಲ್ಲವೆಂದಾಗ ಪಟೇಲ್‌ರವರು ಏನು ಹೇಳಬೇಕು? ''ಪಾಟೇಲ್‌ರವರೇ, ನಿಮಗೆ ಏನಾದರೂ ದುರಭ್ಯಾಸಗಳಿವೆಯೇ? ಖಂಡಿತಾ ಇಲ್ಲ; ಹಾಗಾಗಿ ಬೇಗನೆ ನಿಮಗೆ ಖಾಯಿಲೆ ಬಂತು'' ಎಂದು ಹೇಳಿದರು. ಹೀಗೆ ಯಾವಾಗಲೂ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾ ದುಗುಡಮಯ ಜೀವನವನ್ನು ಬಹಳ ತಿಳಿಯಾಗಿ ತೆಗೆದುಕೊಂಡು ಹೋಗುವ ಪ್ರವೃತ್ತಿಯನ್ನು ಪಟೇಲ್‌ರವರು ಚೆನ್ನಾಗಿ ಬೆಳೆಸಿಕೊಂಡಿದ್ದರು. ಅವರು ಇವೊತ್ತು ನಮ್ಮೆಲ್ಲರನ್ನೂ ಅಗಲಿ ಸ್ವರ್ಗವಾಸಿಗಳಾಗಿದ್ದಾರೆ. ಬಹುಶಃ ಅವರು ಅಲ್ಲಿಂದ ನಮ್ಮನ್ನು ನೋಡುತ್ತಿರಬಹುದೋ ಏನೋ? ಅದು ನನಗೆ ಗೊತ್ತಿಲ್ಲ. ನನ್ನ ಹಾಗೆ ಯಾರಾದರೂ ಹಾಸ್ಯಚಟಾಕಿಗಳನ್ನು ಹಾರಿಸುತ್ತಿದ್ದಾರೋ ಎಂದು ನೋಡುತ್ತಿರುವರೋ? ಏನೋ? ಅಂತೂ ಪೊಲಿಟಿಕಲ್ ಲೈಫ್‌ನಲ್ಲಿ ಅಂತಹ ಅಂತಹ ಪ್ರವೃತ್ತಿಯು ಬೇಕೇ ಬೇಕು. ತಮ್ಮದೇ ಆದಂತಹ ಹ್ಯೂಮರಸ್ ಸ್ಟೈಲನ್ನು ಪಟೇಲ್‌ರವರು ಕರಗತ ಮಾಡಿಕೊಂಡು ಅದನ್ನು ನಡೆಸಿಕೊಂಡು ಬಂದಿರುವುದು ಎಲ್ಲರೂ ಮೆಚ್ಚುವಂಥಾಗಿತ್ತು. ನಾನು ಅವರನ್ನು ಇಂಥಾ ವಿಚಾರಗಳಲ್ಲಿ ಬಹಳ ಮೆಚ್ಚಿ ಕೊಂಡವನು. ಇವೆಲ್ಲಕ್ಕಿಂತಲೂ ಪ್ರಮುಖವಾಗಿ ಅವರು ಯಾವ ತತ್ವಾಂಶಗಳನ್ನು ನಂಬಿದ್ದರೋ ಅದಕ್ಕೆ ತಕ್ಕ ಹಾಗೆ ನಡೆದುಕೊಂಡಿದ್ದರು. ಇವೊತ್ತು ನಮ್ಮಲ್ಲಿ ಎಷ್ಟು ಜನರಿಗೆ ಅಂಥ ಒಂದು ಸಾಮರ್ಥ್ಯ ಇದ್ದೀತು? ಏನು ಮಾಡಿದರೋ ಕೂಡ ಮಾಡಿದಂತೆ ಅದನ್ನು ಅವರು ಹೇಳಿಬಿಡುತ್ತಿದ್ದರು. ಯಾವುದನ್ನೂ ಮುಚ್ಚಿಡಲಾರದ ಒಬ್ಬ ಧೈರ್ಯವಂತರಾಗಿದ್ದರು. ಅಂಥ ಒಂದು ನಿಷ್ಕಲ್ಮಶ ಭಾವನೆ ಮತ್ತು ನಡವಳಿಕೆಗಳು ನನ್ನನ್ನೂ ಸೇರಿದಂತೆ ಎಷ್ಟು ಜನರಲ್ಲಿದೆ? ನಾನು ಒಬ್ಬ ಸಾಚಾ ವ್ಯಕ್ತಿ ಬೇರೆಯವರೆಲ್ಲರೂ ಕೆಟ್ಟವರು ಎಂಬ ಭಾವನೆಯಿಂದ ನಾನು ಹೇಳುತ್ತಿಲ್ಲ. ಅದಕ್ಕೋಸ್ಕರ ನನ್ನನ್ನೂ

ಸೇರಿದಂತೆ ಎಂದು ನಾನು ಹೇಳಿಕೊಂಡಿದ್ದೇನೆ. ಅಂಥ ಒಬ್ಬ ಧೀಮಂತ ಜೆ.ಹೆಚ್.ಪಟೇಲ್‌ರವರ ಕನ್‌ವಿಕ್ಷನ್‌ನನ್ನು ನಾವೆಲ್ಲರೂ ಒಪ್ಪುವಂತಹಾ ವಿಚಾರವಾಗಿದೆ. ಅವರು ಅಧಿಕಾರ ಇರಲಿ, ಇಲ್ಲದಿರಲಿ, ಒಂದೇ ತರಹನಾಗಿರುತ್ತಿದ್ದರು. ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಹೇಗಿರುತ್ತಿದ್ದರೋ ಹಾಗೆಯೇ ಅಧಿಕಾರವಿಲ್ಲದ್ದಾಗಲೂ ಅದೇ ಲೈಫ್‌ಸ್ಟೈಲ್, ಅದೇ ಹ್ಯಾಬಿಟ್ಸ್, ಅದೇ ಹಸ್ಯಪ್ರವೃತ್ತಿ, ಅದೇ ಥಿಂಕಿಂಗ್‌ಸ್ಟೈಲ್, ಎಲ್ಲವೂ ಫ್ರೀಡಂ ಆಗಿರುತ್ತಿದ್ದವು. ಮಾನ್ಯ ಜೆ.ಹೆಚ್. ಪಟೇಲ್‌ರವರು ಯಾರ ವರ್ಚಸ್ಸಿನಿಂದಲೂ ಇಲ್ಲಿಗೆ ಗೆದ್ದು ಬಂದಿರಲಿಲ್ಲ. ಕೆಲವು ಮಾತುಗಳನ್ನು ನಾನು ಸದನದಲ್ಲಿ ಹೇಳಬಾರದೆಂದು ಕಾಣುತ್ತದೆ. ಅನೇಕ ಸಂದರ್ಭಗಳಲ್ಲಿ ಮರ್ಜಿಗಳು, ಅದು, ಇದು, ಸಿಂಬಲ್ ಎಂದೇನಲ್ಲಾ ಬರುತ್ತಿರುತ್ತದೆ; ಆದರೆ ಪಟೇಲ್‌ರವರು ಯಾವ ಆಧಾರದ ಮೇಲೆ ಗೆದ್ದು ಬರುತ್ತಿದ್ದರು? ಅವರು ತಮ್ಮ ವರ್ಚಸ್ಸಿನ ಮೇಲೆಯೆ ಜನರಿಂದ ಆರಿಸಿ ಗೆದ್ದು ಬರುತ್ತಿದ್ದರು. ದಿವಂಗತ ಗೋಪಾಲಗೌಡರು ಯಾವ ತತ್ವಾದರ್ಶನಗಳನ್ನು ಸ್ಥಾಪನೆ ಮಾಡಿಹೋದರು, ಆ ಒಂದು ಹೋರಾಟದ ನಿಲುವಿನ ಅಡಿಯಲ್ಲಿ ತನ್ನದೇ ಆದಂಥ ವ್ಯಕ್ತಿತ್ವದ ವರ್ಚಸ್ಸನ್ನು, ನಿಷ್ಠುರವನ್ನು ಕಟ್ಟಿಕೊಂಡು ಮುನ್ನಡೆದರು. ಇವೊತ್ತು ಯಾವ ವಿಚಾರದಲ್ಲಿಯೂ ನಿಷ್ಠೂರವನ್ನು ಕಟ್ಟಿಕೊಳ್ಳಲು ನಾವುಗಳು ತಯಾರಾಗಿಲ್ಲ. ನಾವು ಆ ಒಂದು ವಾತಾವರಣಕ್ಕೆ ಹೊಂದಿಕೊಂಡಿದ್ದೇವೆ. ಈ ವ್ಯವಸ್ಥೆಯೊಂದಿಗೆ ನಾವು ಹೊಂದಾಣಿಕೆ ಮಾಡಿಕೊಂಡಿದ್ದೇವೆ. ಅಂಥ ಒಂದು ವರ್ಚಸ್ಸಿನಿಂದ ತನ್ನ ಮರ್ಜಿಯಿದಲೇ ಗೆಲ್ಲುತ್ತಿದ್ದ ವ್ಯಕ್ತಿಯೆಂದರೆ ಜೆ.ಹೆಚ್.ಪಟೇಲ್‌ರವರು. ಈ ಸಂದರ್ಭದಲ್ಲಿ ಅವರ ನೇರನುಡಿಯ ವ್ಯಕ್ತಿತ್ವ, ಅವರಲ್ಲಿನ ಎಕ್ಸ್‌ಟ್ರಾವರ್ಟ್ ಕ್ಯಾರೆಕ್ಟರ್ ಏನಿತ್ತು ಅದನ್ನು ಸಾವುಗಳು ಮೆಚ್ಚುವಂಥಾದ್ದಾಗಿತ್ತು ಎಂದು ನಾನು ಹೇಳಬಯಸುತ್ತೇನೆ.

ಇವೊತ್ತು ಜಗತ್ತನ್ನು ಕೇವಲ ಆರ್ಮ್ಸ್‌ಗಳಿಂದ ಆಳುತ್ತಾ ಇಲ್ಲ; ಬುದ್ಧಿಶಕ್ತಿಯಿಂದಲೂ ಆಳುತ್ತಿದ್ದಾರೆ. ಇವೊತ್ತು ಬೆಳಿಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ರೈತರಿಗಾಗಿ ವೆಬ್‌ಸೈಟ್‌ವೊಂದನ್ನು ಉದ್ಘಾಟನೆ ಮಾಡಿದರು. ವೆಬ್‌ಸೈಟ್‌ನಲ್ಲಿ ಎಷ್ಟು ಬುದ್ಧಿವಂತಿಕೆ ಇದೆಯೆಂದರೆ ರೈತರಿಗಾಗಿ ಆಳುವಂತಹ ಶಕ್ತಿ ಅಂದರೆ ಬುದ್ಧಿಶಕ್ತಿಯೇ ಸರಿ. ಶಸ್ತ್ರಾಸ್ತ್ರಗಳು, ಹಣ, ಮುಂತಾದ ಶಕ್ತಿಗಳು ಜಗತ್ತನ್ನು ಆಳಲಾರವು. ಅಂಥ ಬುದ್ಧಿ ಶಕ್ತಿಯನ್ನು ಹೊಂದಿದ್ದ ಸದಾ ಚಿಂತಕರಾಗಿದ್ದಂಥ ಶ್ರೀ ಮಾನ್ ಜೆ.ಹೆಚ್.ಪಟೇಲ್‌ರವರು ಏನಾದರೂ ಹೊಸ ವಿಚಾರಗಳನ್ನು ತಿಳಿಯುವುದರಲ್ಲಿ, ಅದನ್ನು ಮತ್ತೊಬ್ಬರಿಗೆ ಹೇಳುವುದರಲ್ಲಿ ಯಾವ ಹಿಂಜರಿಕೆಯೂ ಅವರಲ್ಲಿರಲ್ಲ. ಬಹಳಷ್ಟು ಜನರು ತಮಗೆ ತಿಳಿದಿರುವ ವಿಚಾರಗಳನ್ನು ಇನ್ನೊಬ್ಬರು ತಿಳಿದುಕೊಂಡಾರೆಂದು ಇತರರೊಂದಿಗೆ ಡಿಸ್‌ಕಸ್ ಕೂಡ ಮಾಡುವುದಿಲ್ಲ. ಆದರೆ ಪಟೇಲ್‌ರವರು ಯಾವುದೇ ವಿಚಾರ ಇನ್ನೊಬ್ಬರೊಂದಿಗೆ ವಿಚಾರವಿನಿಮಯನ್ನು ಮುಚ್ಚಿಡದೇ ಮಾಡುತ್ತಿದ್ದರು ಅಂದರೆ ಅದು ಅವರಲ್ಲಿದ್ದ ದೊಡ್ಡತನವೆಂದು ಶ್ಲಾಘಿಸಬೇಕಾಗುತ್ತದೆ. ಅವರು ತತ್ವಗಳೊಂದಿಗೆ ರಾಜಿಯನ್ನು ಯಾವಾಗಲೂ ಮಾಡಿಕೊಂಡವರಲ್ಲ. ಬಹುಶಃ ನಾನು ಅವರ ಕುಟುಂಬಸ್ಥರನ್ನು ಅಪ್ರಿಶಿಯೇಟ್ ಮಾಡಬೇಕಾಗುತ್ತದೆ; ಏಕೆಂದರೆ ಪಟೇಲ್‌ರವರು ಯಾವಾಗಲೂ ಕಾಂಪ್ರಮೈಸ್ ಮಾಡಿಕೊಳ್ಳುವವರಲ್ಲ. ಇಂಥ ಒಬ್ಬ ವ್ಯಕ್ತಿ ಅವರ ಕುಟುಂಬದವರೊಂದಿಗೆ ಎಷ್ಟು ಚೆನ್ನಾಗಿ

ಸಮನ್ವಯ ಮಾಡಿಕೊಂಡಿದ್ದರು ಎಂದು ಅವರುಗಳನ್ನೇ ಕೇಳಬೇಕು. ನಾವು ಅದನ್ನು ಹೇಳಲು ಬರುವುದಿಲ್ಲ. ಈ ಒಂದು ಸಂದರ್ಭದಲ್ಲಿ ನಮ್ಮಲ್ಲಿ ಸೈಕಲಜಿಕಲ್ ಆಗಿ ಒಂದು ಸಿದ್ಧಾಂತ ಇರುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ವ್ಯಕ್ತಿತ್ವ ಪರ್ಸನಾಲಿಟಿ ಇರುತ್ತದೆಂಬುದನ್ನು ನಾವು ಕೇಳಿದ್ದೇವೆ. ಅಂಥ ಗುಣವಿಶೇಷಗಳನ್ನು ಹೊಂದಿದ್ದವರು ಜೆ.ಹೆಚ್.ಪಟೇಲ್‌ರವರು. ಇವೊತ್ತು ಅವರಿದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ನಮ್ಮ ಮಾನ್ಯ ಲಕ್ಷ್ಮೀನರಸಿಂಹಯ್ಯರವರು, ಮಾನ್ಯ ಜಿ.ಎಸ್.ಬಸವರಾಜ್‌ರವರು, ಮಾನ್ಯ ಬಸಪ್ಪನವರು ಮತ್ತು ಮಾನ್ಯ ಎ.ರಾಮಣ್ಣನವರುಗಳು ಒಳ್ಳೆಯ ನಾಯಕರು, ಜನಸಾಮಾನ್ಯರ ಸೇವೆಯನ್ನು ಮಾಡಿ ಹೆಸರು ಗಳಿಸಿದ್ದವರು, ಅವರುಗಳು ತಮ್ಮನ್ನು ತಾವೇ ಸಮಾಜಕ್ಕೆ ಅರ್ಪಣೆ ಮಾಡಿಕೊಂಡಂತವರಾಗಿದ್ದರು ಎಂದು ನಾವು ಕೇಳಿದ್ದೇವೆ; ಇವರೆಲ್ಲರ ಆತ್ಮಗಳಿಗೂ ಭಗವಂತನು ಶಾಂತಿಯನ್ನು ನೀಡಲಿ ಮತ್ತು ಅವರ ಕುಟುಂಬ ವರ್ಗದವರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ಹೇಳುತ್ತೇವೆ ಇನ್ನು ಡಾ|| ಜೆವರಾಜ್ ಆಳ್ವರವರ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಅವರು ನಮ್ಮೆಲ್ಲರ ಸ್ಪಿರಿಟೆಡ್ ಲೀಡರ ಆಗಿದ್ದರು. ಅವರು ಆಯಾಸಗೊಂದ ಸಂದರ್ಭವನ್ನೇ ನಾನು ನೋಡಿಲ್ಲ. ಅವರು ಯಾವುದೇ ಪಕ್ಷದಲ್ಲಿದ್ದರೂ ಕೂಡ ಅವರಲ್ಲಿನ ಸ್ಪಿರಿಟೆಡ್ ಪರ್ಸನಾಲಿಟಿ ಏನಿತ್ತು ಅದರ ಮೂಲಕ ಅವರು ಯಾವಾಗಲೂ ನಗುತ್ತಲೇ ಇದ್ದರು. ಅವರು ಕೊರಗಿದ್ದನ್ನು ನಾವು ಕಂಡಿಲ್ಲ. ನಾವು ಗಳು ಆಗಾಗ ಕೊರಗುವ, ಆಯಾಸ, ನಿರಾಶೆಗೊಳ್ಳುವ ಪ್ರವೃತ್ತಿಯವರು. ಆದರೆ ಜೀವರಾಜ್ ಆಳ್ವರವರು ಸದಾ ಉತ್ಸಾಹದ ಚಿಲುಮೆಯಾಗಿ ಇರುತ್ತಿದ್ದರು. ಅಂಥವರು ಇಂದು ನಮ್ಮನ್ನು ಅಗಲಿದ್ದಾರೆ. ಚಿಕ್ಕವಯಸ್ಸಿನ ಅವರು ಇನ್ನಷ್ಟು ವರ್ಷಗಳ ಕಾಲ ನಮ್ಮೊಂದಿಗಿದ್ದಿದ್ದಲ್ಲಿ ಚೆನ್ನಾಗಿರುತ್ತಿತ್ತು ಎಂಬುದು ನಮ್ಮ ಆಶೇಯಾಗಿತ್ತು. ಹಾಗೆಯೇ ಶ್ರೀಮತಿ ಕೆಂಪಮ್ಮನವರು; ಅವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯಲ್ಲಿ ನಮ್ಮ ಜೊತೆಗೆ ಸದಸ್ಯರಾಗಿ ಕೆಲಸ ಮಾಡುತ್ತಿದ್ದರು. ಕೆಂಪಮ್ಮನವರು ಹೆಣ್ಣುಮಕ್ಕಳ ಬಗ್ಗೆ, ಶೋಷಿತವರ್ಗದ ಬಗ್ಗೆ, ಬಾಲಕಾರ್ಮಿಕವರ್ಗದ ಬಗ್ಗೆ ತುಂಬಾ ನ್ಯಾಯ ಒದಗಿಸುವಲ್ಲಿ ತತ್ಪರರಾಗಿರುತ್ತಿದ್ದರು. ಯಾರಿಗೇ ಅನ್ಯಾಯವಾದರೂ ಅವರು ಸಹಿಸುತ್ತಿರಲಿಲ್ಲ. ದಲಿತ ವರ್ಗಕ್ಕೆ ಆಗುವ ಅನ್ಯಾಯದ ಬಗ್ಗೆ ಬಾಲಕಾರ್ಮಿಕವರ್ಗದ ಬಗ್ಗೆ ತುಂಬಾ ನ್ಯಾಯ ಒದಗಿಸುವಲ್ಲಿ ತತ್ಪರರಾಗಿರುತ್ತಿದ್ದರು. ಯಾರಿಗೇ ಅನ್ಯಾಯವಾದರೂ ಅವರು ಸಹಿಸುತ್ತಿರಲಿಲ್ಲ. ದಲಿತ ವರ್ಗಕ್ಕೆ ಆಗುವ ಅನ್ಯಾಯದ ಬಗ್ಗೆ ಪ್ರತಿಭಟಿಸುತ್ತಿದ್ದರು. ಅಂಥ ವಿಚಾರದಲ್ಲಿ ಯಾವಾಗಲೂ ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ಕೆಲವು ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಹೆಣ್ಣುಮಕ್ಕಳ ಸ್ಥಿತಿಗತಿ ಬಗ್ಗೆ ಅವರು ಕಾಳಜಿ ಹೊಂದಿದ್ದರು. ಅವರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸುವಲ್ಲಿ ಹೋರಾಟ ಮಾಡುತ್ತಿದ್ದರು. ಅವರು ಇಂದು ಕೈಲಾಸವಾಸಿಗಳಾಗಿದ್ದಾರೆ. ಅವರ ಆತ್ಮಕ್ಕೆ ಭಗವಂತನು ಶಾಂತಿ ನೀಡಲಿ ಹಾಗೂ ಸ್ವರ್ಗಸ್ಥರೆಲ್ಲರ ಆತ್ಮಕ್ಕೆ ಶಾಂತಿ ನೀಡಲಿ ಎಂದು ನಾನು ಪ್ರಾರ್ಥಿಸಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ, ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ. ಭೈರೇಗೌಡ (ವೇಮಗಲ್) :- ಮಾನ್ಯ ಸಭಾಧ್ಯಕ್ಷರೇ, ಈ ದಿವಸ ತಾವು ಗುಜರಾತಿನಲ್ಲಿ ನಡೆದ ಭೀಕರ ಭೂಕಂಪದ ಬಗ್ಗೆ ಮತ್ತು ಉಳಿದ ಸ್ವರ್ಗಸ್ಥ ನಯಕರುಗಳ ಬಗ್ಗೆ ಮಂಡಿಸಿರತಕ್ಕಂಥ ಪ್ರಸ್ತಾವನೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

ಭೂಕಂಪದ ಬಗ್ಗೆ ಹೇಳುವಾಗ ಮುಂದೆ ಅಂದರೆ ಕಾಲಗರ್ಭದಲ್ಲಿ ಏನು ಅಡಗಿದೆಯೋ ಅದು ಯಾರಿಗೂ ಗೊತ್ತಿಲ್ಲ; ಅದನ್ನು ತಿಳಿದುಕೊಳ್ಳಲೂ ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಭೂಗರ್ಭದಲ್ಲಿ ಮುಂದೆ ಏನಾಗುತ್ತದೆ ಎಂಬುದನ್ನು ಕೂಡ ತಿಳಿದುಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಪ್ರಕೃತಿ ತನ್ನದೇ ಆದ ರೀತಿನೀತಿಗಳನ್ನು ಅನುಸರಿಸುತ್ತದೆ. ಅಗ ನಡೆಯುವ ಘಟನೆಗಳು ಯಾರನ್ನೂ ಲೆಕ್ಕಿಸದೆ ತನ್ನದೇ ಆದ ಜಾಡಿನಲ್ಲಿ ಜರುಗುತ್ತವೆ. ಇದಾಗುವಾಗ ಭೂಮೇಲ್ಮೈ ಮೇಲೆ ಆಗುವ ಅನಾಹುತಗಳು ಅಪಾರ. ಇಂತಹ ಘಟನೆಗಳೇನೂ ಈ ಪ್ರಪಂಚದಲ್ಲಿ ಮೊದಲನೇ ಸಲ ನಡೆಯುತ್ತಿಲ್ಲ. ಹಿಂದೆ ಅನೇಕ ಸಾರಿ ನಡೆದಿವೆ. ಹಿಂದೆ ಒಂದು ಸಾರಿ ಪ್ರಳಯ ಆಗಿತ್ತು. ಆಗ ಜೀವಜಾಲವೆಲ್ಲ ನಾಶವಾಗಿತ್ತು; ಆದಾದಮೇಲೆ ಜೀವಜಾಲ ಮತ್ತೆ ಭೂಮಂಡಲದಲ್ಲಿ ಉತ್ಪತ್ತಿಯಾಗಿ ಮನುಷ್ಯನಾಗಿ ಪುನಃ ವಿಕಾಸವಾಯಿತೆಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ಈಗ ನಮ್ಮ ಕಣ್ಣೆದುರು ನಡೆದ ಘಟನಾವಳಿಗಳನ್ನು ತಡೆಯುವ ಶಕ್ತಿ ಯಾರಿಗೂ ಇಲ್ಲ. ಅದರಿಂದಾಗಿ ಇಷ್ಟೆಲ್ಲಾ ಅಪಾರ ಅನಾಹುತಗಳು ನಡೆದಿವೆ 10-15 ವರ್ಷಗಳ ಹಿಂದೆ ಆಂಧ್ರಪ್ರದೇಶದಲ್ಲಿ ಪ್ರಚಂಡ ಬಿರುಗಾಳಿ ಬೀಸಿ ಸಾವಿರಾರು ಜನರು ಸತ್ತರು. ಮತ್ತೆ ಅದು ಒರಿಸ್ಸಾದಲ್ಲಿ ಆಯಿತು. ಹೀಗೆ ಪ್ರತಿ ಪಕ್ಷ ಈ ಪ್ರದೇಶಗಳು ಪ್ರಕೃತಿ ವಿಕೋಪಕ್ಕೆ ತುತ್ತಾಗುತ್ತವೆ. ದುರಾದೃಷ್ಟವಶಾತ್ ನಮ್ಮ ದೇಶದ ಗುಜರಾತಿನಲ್ಲಿ ಭೂಕಂಪವಾಗಿದೆ. ಅದು ಆರ್ಥಿಕವಾಗಿ ಅತ್ಯಂತ ಮುಂದುವರೆದ ಪ್ರದೇಶ. ಭೂಕಂಪಗಳಲ್ಲಿ ಇಡೀ ಪ್ರಪಂಚದಲ್ಲಿ ಲಕ್ಷಾಂತರ ಜನ ಸತ್ತಿರುವುದುಂಟು. ಅಂತಹುದೇ ಭೂಕಂಪ ಗುಜರಾತಿನಲ್ಲಾಗಿದೆ. ಆದರೆ ಇಲ್ಲಿ ನಾವು ಯೋಚಿಸಬೇಕಾಗಿರುವುದೇನೆಂದರೆ, ಇಂತಹ ಪ್ರಕೃತಿ ವಿಕೋಪ ನಡೆದಂತಹ ಸಂದರ್ಭದಲ್ಲಿ ನಮ್ಮ ವ್ಯವಸ್ಥೆ ಯಾವ ರೀತಿ ಸ್ಪಂದಿಸುತ್ತದೆ? ಎಂಬುದು. ಜಪಾನು, ಅಮೆರಾಕಗಳಲ್ಲೂ ಭೂಕಂಪ ಆಗುತ್ತವೆ. ಅದಾದ ಕೆಲವೇ ನಿಮಿಷಗಳಲ್ಲಿ ಪ್ರಪಂಚದಾದ್ಯಂತ ಅವರು ಸುದ್ದಿ ಕೊಡುತ್ತಾರೆ. ಒಳಗೆ ಸಿಕ್ಕಿಕೊಂಡಿರುವವರು ಹೇಗೆ ಆಚೆಗೆ ಬರಬೇಕೆಂದು ಸೂಚನೆ ಕೊಡುವ ವ್ಯವಸ್ಥೆಯೂ ಅಲ್ಲಿದೆ. ಅಂತಹ ಸಂದರ್ಭದಲ್ಲಿ ರಕ್ಷಣೆ ಮಾಡಬೇಕಾದುದು ಬಹಳ ಮುಖ್ಯ. ಕೆಲವೇ ನಿಮಿಷಗಳಲ್ಲಿ ವ್ಯವಸ್ಥೆ ತನ್ನಷ್ಟಕ್ಕೆ ತಾನೇ ಚಾಲು ಆಗುತ್ತದೆ, ರಕ್ಷಣಾ ಕೆಲಸ ಶರವೇಗದಲ್ಲಿ ನಡೆಯುತ್ತದೆ. ದುರದೃಷ್ಟವಶಾತ್ ಅಂತಹ ಪ್ರಕ್ರಿಯೆ ನಮ್ಮ ದೇಶದಲ್ಲಿ ನಡೆಯಲಿಲ್ಲ. ಗುಜರಾತ್‌ದಲ್ಲಂತೂ ಸಾವಿರಾರು ಜನರ ಪ್ರಾಣ ರಕ್ಷಿಸಲು ಅವಕಾಶವಿದ್ದರೂ ಈಗಿನ ವ್ಯವಸ್ಥೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ಈ ವ್ಯವಸ್ಥೆಯ ವೈಫಲ್ಯತೆಯಿಂದ ಸಾವು ನೋವು ಗಳು ಜಾಸ್ತಿಯಾಗಿದೆ. ರಾಜ್ಯ ಕೇಂದ್ರ ಸರ್ಕಾರಗಳು ಈಗ ಪಾಠ ಕಲಿಯದಿದ್ದರೆ, ಮುಂದಿನ ದಿನಗಳಲ್ಲಿ ಪ್ರಕೃತಿ ವಿಕೋಪಗಳಿಂದ ಜನತೆಗೆ ಯಾವರೀತಿ ರಕ್ಷಣೆ ಕೊಡಬೇಕೆಂಬ ಬಗ್ಗೆ ಎಷ್ಟೋ ಹಣ ಖರ್ಚಾದರೂ ಚಿಂತೆ ಇಲ್ಲ. ಮನುಷ್ಯರ ಜೀವ ಅಮೂಲ್ಯವಾದುದು. ಅದನ್ನು ಉಳಿಸಲು ನಾವು ಸಿದ್ಧತೆ ನಡೆಸಬೇಕಾದುದು ಬಹಳ ಮುಖ್ಯ. ಈ ಸಾರಿ ಅದರ ವೈಫಲ್ಯತೆ ಎದ್ದು ಕಾಣುತ್ತಿದೆ. ಒಳಗೆ ಸಿಕ್ಕಿಹಾಕಿಕೊಂಡಿದ್ದವರನ್ನು ಉಳಿಸಲು ಎಷ್ಟು ಶೀಘ್ರವಾಗಿ ಕಾರ್ಯ ಆಗಬೇಕಾಗಿತ್ತೋ ಹಾಗೆ ಆಗಲಿಲ್ಲ. ಈ ವೈಫಲ್ಯತೆಯನ್ನು ನಾವು ಅರಿತು ಪಾಠ ಕಲಿತು ಸಿದ್ಧರಾಗಿರಬೇಕುತ್ತದೆಂದು

ಹೇಳುತ್ತೇನೆ. ಅಲ್ಲಿನ ಹಾಗೇ ಕರ್ನಾಟಕ, ಬೆಂಗಳೂರು ನಡುಗಿದವು. ಅಂದು ಬೆಳಿಗ್ಗೆ ನಾನು ಮನೆಯಲ್ಲಿ ಪತ್ರಿಕೆ ಓದುತ್ತಿದ್ದೆ: ಇದ್ದಕ್ಕಿದ್ದ ಹಾಗೆ ಮನೆಯೆಲ್ಲ ನಡುಗಾಡಿತು, ಇದೇನು ಹೀಗಾಯಿತು ಎಂದು ನಾನು ಹೊರಗೆ ಹೋಗಿ ಎಲ್ಲರನ್ನೂ ಆಚೆಗೆ ಕರೆದ ಸಂದರ್ಭ ಬಂತು. ಹೀಗೇ ಏನಾಗುತ್ತದೋ ಗೊತ್ತಿಲ್ಲ. ವಿಜ್ಞಾನದಲ್ಲಿ ಹೇಳಿರುವ ಪ್ರಕಾರ ಈ ದಖ್ಖನ್‌ಪ್ಲೇಟೋ ಬಹಳ ಸ್ಟೇಬಲಾದ್ದದರ ಮೇಲೆ ಕೂತಿದೆ, ಇಲ್ಲಿ ಭೂಕಂಪ ಆಗುವುದಿಲ್ಲವೆಂದು ನಾವು ಓದಿದ್ದೇವೆ. ಅದಕ್ಕೆ ತದ್ವಿರುದ್ಧವಾಗಿ ಇಲ್ಲಿ ಕಂಪನವಾದಾಗ ಯಾವಾಗ ಎಂತಹ ವಿಕೋಪ ಜರುಗುವುದೋ ಎಂಬ ಭಯ ನನ್ನನ್ನು ಕಾಡುತ್ತಿದೆ. ಮೊದಲನೆಯದಾಗಿ ವಿಧಾನಸೌಧ ನಿರ್ಮಿಸುವ ಹಂತದಲ್ಲಿ ಭೂಕಂಪವಾದಾಗ ಅದನ್ನು ಹೇಗೆ ನಿಯಂತ್ರಿಸಬೇಕೆಂಬ ಚಿಂತನೆ ನಡೆಯಿತೋ ಇಲ್ಲವೋ ನನಗೆ ಗೊತ್ತಿಲ್ಲ. ರಾಜ್ಯ ಸರ್ಕಾರ ಇದರ ಬಗ್ಗೆ ತೀವ್ರವಾಗಿ ಯೋಚಿಸಬೇಕು. ವಿಧಾನಸೌಧದ ರಕ್ಷಣೆ ಬಹಳ ಮುಖ್ಯವಾದ ಕಾರಯ; ಇದರ ಬಗ್ಗೆ ಕಣ್ತೆರೆದು ನೋಡುವುದು ಬಹಳ ಮುಖ್ಯ, ರಾಜ್ಯ ಸರ್ಕಾರ ಇದಕ್ಕೆ ಮುಂದಾಗಬೇಕು. ಇವತ್ತಿನ ಗುಜರಾತ್ ಭೂಕಂಪದ ವಿಚಾರದಲ್ಲಿ ಕರ್ನಾಟಕ ಜನತೆ ಅಪಾರವಾಗಿ ಭಾಗಿಯಾಗಿದ್ದಾರೆ ; ಅವರ ತನುಮನಧನದಿಂದ ಸಹಕರಿಸಿದ್ದಾರೆ. ಅವರಿಗೆಲ್ಲರಿಗೂ ಕೃತಜ್ಞತೆ ಅರ್ಪಿಸಬೇಕಾಗಿರುವುದು ಈ ಸದನಕ್ಕೆ ಕರ್ತವ್ಯವೆಂದು ನಾನು ಭಾವಿಸುತ್ತೇನೆ.

ಮಾನ್ಯ ಅಧ್ಯಕ್ಷರೆ ನಮ್ಮ ಪಕ್ಷಕ್ಕೆ 2000ದ ಇಸವಿ ಒಂದು ದುರಂತ ವರ್ಷ. ನಮಗೆಲ್ಲರಿಗೂ ಹಿಮಾಲಯ ಪರ್ವತದಂತಿದ್ದ ಮಾನ್ಯ ಜೆ. ಎಚ್. ಪಟೇಲರು ಕಣ್ಮರೆಯಾಗಿದ್ದಾರೆ. ಆ ದುಃಖವನ್ನು ಯಾವ ಮಾತುಗಳಲ್ಲಿ ಹೇಳಿ, ಹೇಗೆ ಭರಿಸಬೆಕೋ ಎಂದು ನನಗೆ ಗೊತ್ತಾಗುತ್ತಿಲ್ಲ. ಸಮಾಜವಾದಿಗಳಾಗಿದ್ದ ಪಟೇಲರು ಸಮಾಜವಾದಿ ಪಕ್ಷದಲ್ಲಿದ್ದ ಕಾಗೋಡು ತಿಮ್ಮಪ್ಪ ಇರಬಹುದು, ಗೋಪಾಲಗೌಡರು ಇರಬಹುದು ಪರಮೇಶ್ವರಪ್ಪ ಇರಬಹುದು- ಹೀಗೆ ಇಂತಹವರ ದೊಡ್ಡ ಸೈನ್ಯವೇ ಇದೆ. ಇವರೆಲ್ಲ ಸೇರಿ ಅಂದು ನಮ್ಮ ರಾಜ್ಯದಲಿ ಭೂ ಸಂಬಂಧ ಇದ್ದ ಕ್ರೂರಪದ್ಧತಿ ವಿರುದ್ಧ ಶೋಷಣೆ ವಿರುದ್ಧ ಸೆಟೆದು ನಿಂತರು. ಅದಕ್ಕೆ ಲೋಹಿಯಾರವರ ಮುಖಂಡತ್ವ ಮತ್ತು ಕಟ್ಟಾ ಸಮಾಜವಾದಿ ಗೋಪಾಲಗೌಡರ ಮಾರ್ಗದರ್ಶನ ಸಿಕ್ಕಿ ಅದರ ಪ್ರತಿಫಲವಾಗಿ ಇವತ್ತು ರಾಜ್ಯದಲ್ಲಿ ಭೂಸಂಬಂಧಗಳು ಕಾನೂನು ಮೂಲಕ ಬದಲಾಗಿವೆ. ಅದರಿಂದ ಸಾಮಾಜಿಕ ಬದಲಾವಣೆಯೂ ಆಗಿದೆ, ಆರ್ಥಿಕ ಬದಲಾವಣೆಯೂ ಆಗಿದೆ. ಕ್ರೂರ ಜಮೀಂದಾರಿ ಪದ್ಧತಿ ವಿರುದ್ಧ ಹೋರಾಟ ನಡೆಸಿ ಲಕ್ಷಾಂತರ ಗೇಣದಾರರು ಭೂಮಾಲೀಕರಾದರು, ಅವರ ಶ್ರಮಕ್ಕೆ ಅವರೇ ಒಡೆಯ ಎಂಬ ಪದ್ಧತಿ ಜಾರಿಗೆ ಬಂತು. ಅದೇ ರೀತಿ ಕರ್ನಾಟಕದ ಪಶ್ಚಿಮ ಭಾಗದಲ್ಲಿ ಇಂತಹ ಚಳುವಳಿ ನಡೆದಾಗ ಪೂರ್ವಭಾಗದಲ್ಲೂ ರೈತಸಂಘಟನೆ ಕಟ್ಟಿ ಕಮ್ಯುನಿಷ್ಟ್ ಸಿದ್ಧಾಂತಿಗಳು ಕೋಲಾರ ಜಿಲ್ಲೆಯಲ್ಲೂ ಹೋರಾಟ ಮಾಡಿ ಅಲ್ಲಿದ್ದ ಜೋಡಿ ಪದ್ಧತಿಯನ್ನು ನಿರ್ಮೂಲ ಮಾಡಿ, ಜೋಡಿ ಗ್ರಾಮದಲ್ಲಿದ್ದವರಿಗೆ ಹಕ್ಕು ಕೊಡುವುದು, ಹೀಗೆ ಭೂಸಂಬಂಧಗಳನ್ನು ಪರಿವರ್ತಿಸುವ ದೊಡ್ಡ ಹೊರಾಟ ನಡೆಯಿತು. ಇವುಗಳಿಂದಾಗಿ ಭೂಸಂಬಂಧಗಳು ಕಾನೂನು ಮೂಲಕ ಬದಲಾವಣೆಯಾಗಿ ಉಳುವವನೇ ಭೂ ಒಡೆಯನೆಂಬುದು ಜಾರಿಯಾಗಿರುವುದನ್ನು ಕಂಡಾಗ ಎಂಥವರು, ಕೂಡ ಹೆಮ್ಮೆ ಪಡಬೇಕಾಗಿರತಕ್ಕ ವಿಚಾರವಿದು. ಈ ಹೋರಾಟದ ಮೂಂಚೂಣಿಯಲ್ಲಿ ಮಾನ್ಯ ಜೆ.ಹೆಚ್. ಪಟೇಲರು ಇದ್ದರು. ಅವರ ಜೊತೆಯಲ್ಲಿ ಇನ್ನೂ ಅನೇಕ ಸ್ನೇಹಿತರು ಇದ್ದರು ಎನ್ನುವುದನ್ನು

ಅವರು ಸ್ಮರಿಸಬೇಕಾಗಿರತಕ್ಕಂಥಾದ್ದು. ಈ ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ; ಈ ಹೋರಾಟದ ಪ್ರತಿಫಲವಾಗಿ ಯಾರಿಗಾದರೂ ಕೂಡ ಅದು ಹೆಚ್ಚಿಗೆ ಪ್ರತಿಫಲ ಸಿಕ್ಕಿದ್ದರೆ ಅದು ನನಗೆ ಮತ್ತು ನನ್ನ ಕುಟುಂಬಕ್ಕೆ ಸಿಕ್ಕಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಡೀ ರಾಜ್ಯದಲ್ಲಿ ಯಾರಾದರೂ ಕೂಡ ಹೆಚ್ಚಿಗೆ ಜಮೀನಿಗೆ ಗೇಣಿದಾರರಾಗಿದ್ದರು ಎಂದರೆ ನಾವೇ. ಸುಮಾರು ಮೂರು-ನೂರು ಎಕರೆ ಜಮೀನು ನಮಗೆ ಈ ಹೋರಾಟದ ಪ್ರತಿಫಲವಾಗಿ ಸಿಕ್ಕಿರುವುದು; ಅದೇ ಜಮೀನನ್ನು ಈ ಭಸುಧಾರಣೆ ಕಾನೂನು ಬಂದಾಗಲೂ ಕೂಡ ಆ ಮಿತಿಯನ್ನು ಮೀರಿರತಕ್ಕ ಜಮೀನನ್ನು ಸಹಾ ಸರ್ಕಾರಕ್ಕೆ ಬಿಟ್ಟಿರುವುದೂ ಉಂಟು. ಈ ರೀತಿಯಾದಂಥ ಒಂದು ಹೋರಾಟದಲ್ಲಿ ನಮಗೆ ಅವರು ಮಾರ್ಗದರ್ಶನವನ್ನು ತೋರಿಸಿದರು. ಮಾನ್ಯ ಗೋಪಾಲಗೌಡರು, ನಾನು ಚಿಕ್ಕವನಿದ್ದಾಗಲೇ, ಅವರ ಸಂಪರ್ಕ ಇತ್ತು ಮತ್ತು ಜೆ.ಹೆಚ್.ಪಟೇಲರ ಸಂಪರ್ಕ ನಾನು ವಿದ್ಯಾರ್ಥಿಯಾಗಿದ್ದಗಲೂ ಸಹಾ ಇತ್ತು. ಇವರುಗಳ ಮಾರ್ಗದರ್ಶನದಲ್ಲಿ, ಈ ಹೋರಾಟದ ಪ್ರತಿಫಲವಾಗಿ, ಇಂದು ಅನೇಕ ಕುಟುಂಬಕ್ಕೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮತ್ತು ಸಮಾಜದಲ್ಲಿ ಈ ವರ್ಗ ಶಕ್ತಿಯುತವಾಗಿ ಬೆಳೆಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಕೀರ್ತಿ ಜೆ.ಹೆಚ್.ಪಟೇಲರವರದು ಈ ಅವರು ಹೋರಾಟದ ಮುಂಚೂಣಿಯಲ್ಲಿದ್ದರು ಎಂದು ನಾನು ಈಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸದನದಲ್ಲಿ ಜೆ.ಹೆಚ್.ಪಟೇಲರು ಮಾತನಾಡುತ್ತಾರೆಂದು, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ, ಎಲ್ಲರೂ ಕೂಡ ಅವರ ಮಾತನ್ನು ಆಲಿಸುತ್ತಿದ್ದರು. ನಮ್ಮ ಎದುರುಗಡೆ ಕುಳಿತಿರುವ, ಸ್ನೇಹಿತರಾಗಿರುವ ಮಾನ್ಯ ಖರ್ಗೆಯವರು ಅವರ ಮಾತಿನಿಂದ ಬಹಳ ಚುಚ್ಚಿಸಿಕೊಂಡಿದ್ದಾರೆ. ಇವರು ಕೂಡ ಅನೇಕ ಸಂದರ್ಭದಲ್ಲಿ ಪಟೇಲರನ್ನು ಚುಚ್ಚಿರುವುದೂ ಉಂಟು. ಇವರು ಬಿಟ್ಟ ಬಾಣಗಳನ್ನು ಪಟೇಲರು ತಮ್ಮ ವಾಕ್‌ಚಾತುರ್ಯದಿಂದ ಅವರು ಬುಲೆಟ್ ಅಲ್ಲ, ರಾಕೆಟ್ ಆಗಿ ಬಿಡುತ್ತಿದ್ದರು. ಇದನ್ನು ನಾವು ಶ್ಲಾಘಿಸಿಕೊಳ್ಳಬೇಕಾದ್ದು ಬಹಳ ಅವಶ್ಯಕತೆ ಇದೆ. ಒಬ್ಬ ವಿಶ್ವಸುಂದರಿಯನ್ನು ನೀವು ವಿಶ್ವಸುಂದರಿಯನ್ನಾಗಿ ನೋಡಬೇಕೇ ವಿನಃ ನೀವು ಎಕ್ಸ್‌ರೇಯಲ್ಲಿ ನೋಡಬಾರದು ಎನ್ನುವ ಮಾತನ್ನು ಮಾತನ್ನು ಮಾನ್ಯ ಖರ್ಗೆಯವರಿಗೆ ಹೇಳಿದ್ದು ಸಹಾ ಈ ಕಡತದಲ್ಲಿ ಇದೆ. ವಿದ್ಯುದೀಕರಣದ ಬಗ್ಗೆ ಒಂದು ಸಾರಿ ಇಲ್ಲಿ ಒಂದು ಪ್ರಶ್ನೆ ಬರುತ್ತದೆ. ಆ ಪ್ರಶ್ನೆ ಏನಿತ್ತು ಎಂದರೆ, ರಾಜ್ಯದಲ್ಲಿರುವ ಹಳ್ಳಿಗಳನ್ನೆಲ್ಲಾ ಯಾವ ತಾರೀಖಿನೊಳಗಾಗಿ ವಿದ್ಯುದೀಕರಣಗೊಳಿಸುತ್ತೀರಿ ಎಂದು. ನಮ್ಮ ಸ್ನೇಹಿತರಾದವರು ಒಬ್ಬರು ಒಂದು ಸಲಹೆಯನ್ನು ಕೊಟ್ಟರು. ಮಾನ್ಯ ಪಟೇಲರಿಗೆ ಒಂದು ಉಪಪ್ರಶ್ನೆಯನ್ನು ಹಾಕುತ್ತಾರೆ. ಆ ಉಪಪ್ರಶ್ನೆಗೆ ಅವರು ಉತ್ತರವನ್ನೂ ಕೊಟ್ಟರು. ಆ ಉಪಪ್ರಶ್ನೆ ಏನೆಂದರೆ, ನಿಮಗೆ ಲಂಬಾಣಿಗಳನ್ನು ಕಂಡರೆ ಬಹಳ ವಿಶ್ವಾಸ, ಪ್ರೀತಿ ಇದೆ. ನಿಮ್ಮ ಕಾಲದಲ್ಲಾದರೂ ಕೂಡ ಎಲ್ಲಾ ಲಂಬಾಣಿ ತಾಂಡಾಗಳಿಗೆ ವಿದ್ಯುದೀಕರಣವನ್ನು ಮಾಡುತ್ತೀರಾ ಎನ್ನುವ ಪ್ರಶ್ನೆ ಇಲ್ಲಿ ಬಂದಾಗ ಅವರು ಬಹಳ ಕರಾರುವಾಕ್ಕಾಗಿ ಉತ್ತರವನ್ನು ಕೊಟ್ಟರು.

ಹೌದು. ಇಷ್ಟು ತಾರೀಖಿನೊಳಗಾಗಿ ವಿದ್ಯುದೀಕರಣವನ್ನೂ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿ ಕೊನೆಗೆ ಅವರು ಈ ಉಪಪ್ರಶ್ನೆಯನ್ನು ಏತಕ್ಕೆ ಕೇಳುತ್ತಿದ್ದೀರಿ ಎಂದು ಅರ್ಥ ಮಾಡಿಕೊಂಡು ಹೌದು, ನನಗೆ ಲಂಬಾಣಿಗಳನ್ನು ಕಂಡರೆ ಅತ್ಯಂತ ಪ್ರೇಮ, ವಿಶ್ವಾಸ ಇದೆ ಎನ್ನುವ ಮಾತನ್ನು ಹೇಳಿರುವುದು ಕಡತದಲ್ಲಿ ಇದೆ. ಆ ರೀತಿಯಾಗಿ ನೇರವಾಗಿ ಹೇಳತಕ್ಕವರು

ಮತ್ತು ಇಲ್ಲಿ ಬೆಂಗಳೂರಿನಲ್ಲಿ ವಿಶ್ವಸುಂದರಿ ಸ್ಪರ್ಧೆ ನಡೆದ ಕಾಲದಲ್ಲಿ ನಡೆದ ಗಲಾಟೆಗೆ ಮತ್ತು ಟಿವಿ ಚಾನಲ್‌ನವರು ಕೇಳಿದ ಪ್ರಶ್ನೆಗೆ ಬಹುಶಃ ಪ್ರಪಂಚದ ಯಾವುದೇ ಮೂಲೆಯಲ್ಲಿ ಕೂಡ ಅಷ್ಟು ನೇರವಾದ ಉತ್ತರವನ್ನು ಕೊಡುವುದಕ್ಕೆ ಯಾರಿಂದಲು ಕೂಡ ಸಾಧ್ಯವಾಗಿಲ್ಲ. ಅವರು ಎಲ್ಲಾ ಸಂದರ್ಭಗಳಲ್ಲೂ ಕೂಡ ಹಾಸ್ಯಪ್ರಜ್ಞೆಯ ಜೊತೆಗೆ ನಿಜವನ್ನು ಹೇಳುತ್ತಿದ್ದರು. ಸತ್ಯವನ್ನೂ ಹೇಳುತ್ತಿದ್ದರು. ಬರೀ ಹಾಸ್ಯವನ್ನೆ ಮಾಡುತ್ತಿರಲಿಲ್ಲ. ಈ ರೀತಿ ಸಾವಿರಾರು ಉದಾಹರಣೆಗಳು ಇವೆ. ನಮ್ಮ ಸ್ನೇಹಿತರು ಹೇಳಿದರು, ವೀರೇಂದ್ರಪಾಟೀಲರನ್ನು ನೋಡುವುದಕ್ಕೆ ಹೋದಕಾಲದಲ್ಲಿ ಅವರು ಇವರನ್ನು ಕಂಡತಕ್ಷಣ ಅವರ ಕಣ್ಣಿನಲ್ಲಿ ಗಳಗಳನೆ ಬರುತ್ತದೆ; ಇವರನ್ನು ಏನಾದರೂ ಮಾಡಿ ತಾಜಾ ಮಾಡಬೇಕು, ಅವರನ್ನು ಸಂತೋಷಪಡಿಸಬೇಕೆಂದು ಹೇಳಿ ಪಟೇಲರು ಅವರಿಗೆ ಒಂದು ಪ್ರಶ್ನೆಯನ್ನು ಕೇಳುತ್ತಾರೆ, ಹೇಗಿದ್ದೀರಿ ಎಂದು ಅಂದತಕ್ಷಣದಲ್ಲಿಯೇ ವೀರೇಂದ್ರಪಾಟೀಲರ ಕಣ್ಣಿನಲ್ಲಿ ನೀರು ಬರುತ್ತದೆ. ಆಮೇಲೆ ವೀರೇಂದ್ರಪಾಟೀಲರಿಗೆ ಕೇಳುತ್ತಾರೆ, ನೀವು ಯಾವಾಗಲಾದರೂ ಸಿಗರೇಟ್ ಸೇದಿದ್ದೀರಾ ಎಂದಿದ್ದಕ್ಕೆ ಇಲ್ಲ ಎಂದು ಹೇಳುತ್ತಾರೆ. ಮತ್ತೊಂದು ಎಂದು ಕೇಳುತ್ತಾರೆ. ಹಾಗೆ ಅಂದತಕ್ಷಣ ವೀರೇಂದ್ರಪಾಟೀಲರ ಕಣ್ಣಿನಲ್ಲಿ ನೀರು ಬರುತ್ತಿದ್ದರೂ ನಗುತ್ತಾರೆ. ಅಂಥ ಸಂದರ್ಭದಲ್ಲೂ ಸಹಾ, ಅವರ ಆವಾಕ್‌ಚಾತುರ್ಯ ಅವರಲ್ಲಿದ್ದುದನ್ನು ನಾನಂತೂ ಕಂಡಿದ್ದೇನೆ. ಅನೇಕ ಸಂದರ್ಭಗಳಲ್ಲಿ ನಿರ್ಣಾಯಕವಾದ ಅವರಿಗೆ ಇಲ್ಲದಂಥ ಕಿರುಕುಳ ನೀಡಿದಂಥ ಸಂದರ್ಭದಲ್ಲೂ ಕೂಡ ಅವರ ಜೊತೆಯಲ್ಲಿ ಇದ್ದು ಅವರಿಗೆ ಒಬ್ಬ ಬೆಂಬಲಿಗರಾಗಿ ಕೆಲಸ ಮಾಡುವ ಅವಕಾಶ ಕೂಡ ನನಗೆ ಬಂದದ್ದು ನನ್ನ ಸೌಭಾಗ್ಯ ಎಂದು ನಾನಂತೂ ಕೂಡ ಭಾವಿಸಿದ್ದೇನೆ. ಅವರು ಯಾವತ್ತೂ ಕೂಡ ಈ ಅಧಿಕಾರದ ಮೇಲೆ ಆಸೆಯನ್ನು ಇಟ್ಟುಕೊಂಡು ಅವರು ಆಡಳಿತವನ್ನು ನಡೆಸತಕ್ಕವರಾಗಿರಲಿಲ್ಲ. ಅವರನ್ನು ಮಂತ್ರಿಮಂಡಲದಿಂದ ಮತ್ತು ಮುಖ್ಯಮಂತ್ರಿ ಪದವಿಯಿಂದ ಇಳಿಸಬೇಕೆಂದು ಹೇಳಿ ನಡೆದ ಘಟನೆ ಸಂದರ್ಭದಲ್ಲಿ ಕೂಡ, ಅಧಿಕಾರ ಹೋಗುತ್ತದಾ, ಹೋಗಲಿ, ಎಂದು ಹೇಳಿದವರು, ಅದರ ಬಗ್ಗೆ ಯಾವತ್ತೂ ಕೂಡ ಚಿಂತಿಸಿದವರಲ್ಲ ಮತ್ತು ಯಾರ ಜೊತೆಯಲ್ಲಾದರೂ ಕೂಡ ಮಾತನಾಡಿ ಚಿತಾವಣೆ ಮಾಡುವ ಕೆಲಸವನ್ನು ಕೂಡ ಮಾಡತಕ್ಕವರಲ್ಲ. ಇದೆಲ್ಲವನ್ನೂ ಕೂಡ ಬಹಳ ಹತ್ತಿರದಿಂದ ಮತ್ತು ನಾನು ಕೂಡ ಆಡಳಿತದಲ್ಲಿ ಸಹಭಾಗಿಯಾಗಿ ನೋಡುವ ಒಂದು ಅವಕಾಶ ಒದಗಿ ಬಂದಿತ್ತು. ಮಾನ್ಯ ಸದಸ್ಯರಲ್ಲಿ ತಮ್ಮ ಮೂಲಕ ಏನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ, ಅವರು ಈ ಪಾನನಿರೋಧದ ಬಗ್ಗೆ ಸದನದಲ್ಲಿ ಮಾತನಾಡಿದ್ದಾರೆ. ಸದನದ ಸದಸ್ಯರಾಗಿದ್ದ ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಖಾಸಗಿ ನಿರ್ಣಯವನ್ನು ಈಸದನದಲ್ಲಿ ತರುತ್ತಾರೆ; ಅದರ ಮೇಲೆ ಮಾತನಾಡಿರುವ ಭಾಷಣ ಬಹುಶಃ ಇಡೀ ವಿಧಾನಸಭೆಯ ಚರಿತ್ರೆಯಲ್ಲೇ ಅತಿ ಉತ್ತಮವಾದ ಭಾಷಣಗಳಲ್ಲಿ ಅದೂ ಕೂಡ ಒಂದು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ, ನಾವೆಲ್ಲರೂ ಕೂಡ ಆ ಭಾಷಣವನ್ನು ಓದಬೇಕಾದಂತಹ ಅವಶ್ಯಕತೆ ಇದೆ ಎಂದು ನಾನು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ವಿಷಯದ ಮೇಲೆ ಮಾತನಾಡಿದರೂ ಅವರ ಆಳವಾದ ಅಧ್ಯಯನ ಮತ್ತು ಆಳವಾದ ಆಲೋಚನೆ ಎಷ್ಟರಮಟ್ಟಿಗೆ ಇರುತ್ತಿತ್ತು ಎಂದು ಸದನದ ಕಾರ್ಯಕಲಾಪಗಳನ್ನು ನಾವು ನೋಡಿದಾಗ ನಮಗೆ ಅರ್ಥವಾಗುತ್ತದೆ. ಅವರು ಇವತ್ತು ಅಗಲಿರುವುದು ವೈಯಕ್ತಿಕವಾಗಿ ನನಗೆ ಬಹಳ ಮನಸ್ಸಿನ ಮೇಲೆ, ಕೊನೆಯ ದಿವಸದವರೆಗೂ ಅವರ ಜೊತೆಯಲ್ಲಿ ಇದ್ದಂಥ ನನ್ನ ಮನಸ್ಸಿನ ಮೇಲೆ ಬಹಳ

ದುಃಖದ ಪರಿಣಾಮವನ್ನು ಉಂಟುಮಾಡಿದೆ ಎನ್ನುವ ಮಾತನ್ನೂ ಸಹಾ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಲಕ್ಷ್ಮೀನರಸಿಂಹಯ್ಯನವರು, ನಮ್ಮ ಪಕ್ಷದ ಮುಖಂಡರಾಗಿದ್ದವರಲ್ಲಿ ಒಬ್ಬರು. ತುಮಕೂರ ಜಿಲ್ಲೆಯಲ್ಲಿ ನಮ್ಮ ಪಕ್ಷದ ಆಧಾರ ಸ್ತಂಭವಾಗಿದ್ದವರು; ಅವರು ಸಹಾ ಕಣ್ಮರೆಯಾಗಿದ್ದಾರೆ. ಮತ್ತೆ ಜೀವರಾಜ ಆಳ್ವರವರ ಬಗ್ಗೆ ನಮ್ಮ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಆಳ್ವ ಅವರು ಯಾವುದಾದರೂ ಒಂದು ವಿಚಾರದಲ್ಲಿ ಸಂಘಟನೆ ಮಾಡ ಬೇಕು, ಸಭೆ ಸಮಾರಂಭ ನಡೆಸಬೇಕು ಎಂದರೆ ಪ್ರತಿಯೊಂದನ್ನೂ ಕೂಡ ತಾನೇ ಖುದ್ದಾಗಿ ನೋಡಿ ಅದನ್ನು ಅಷ್ಟೇ ಅಚ್ಚುಕಟ್ಟಾಗಿ ಎಲ್ಲರ ಮೆಚ್ಚುಗೆಯನ್ನು ಪಡೆಯತಕ್ಕ ರೀತಿಯಲ್ಲಿ ಸಭೆ ಸಮಾರಂಭಗಳನ್ನು ವ್ಯವಸ್ಥೆ ಮಾಡುತ್ತಿದ್ದುದು ಅಲ್ಲದೆ ಯುವಕರನ್ನು ಸೂಜಿಗಲ್ಲನಂತೆ ತಮ್ಮ ಕಡೆಗೆ ಸೆಳೆಯತಕ್ಕ ಶಕ್ತಿ ಇದ್ದುದು ಜೀವರಾಜ ಆಳ್ವರಿಗೆ ಮಾತ್ರ. ಅವರು ಇವತ್ತಿನದಿವಸ ನಮ್ಮ ಕಣ್ಮುಂದೆ ಇಲ್ಲ. ಅದೇ ರೀತಿಯಲ್ಲಿ ಶ್ರೀಮತಿ ಕೆಂಪಮ್ಮನವರು ನಮ್ಮನ್ನು ಅಗಲಿದ್ದಾರೆ. ಅನೇಕ ಸ್ನೇಹಿತರು ಅವರ ಬಗ್ಗೆ ಮಾತನಾಡಿದ್ದಾರೆ. ಹಾಗೆಯೆ ಮಾನ್ಯ ಮೃತ್ಯುಂಜಯಪ್ಪ ಅವರ ಮೂರ್ತಿ ಚಿಕ್ಕದಾದರೂ ಕೂಡ ಅವರ ಕೀರ್ತಿ ದೊಡ್ಡದು ಎನ್ನುವ ಹಾಗೆ ಅವರು ಇದ್ದರು. ಅವರು ಶಾರೀರಿಕವಾಗಿ ಸಣ್ಣದಾಗೇ ಕಾಣುತ್ತಿದ್ದರು. ಆದರೆ ಅವರು ಅಪಾರವಾದ ಶಕ್ತಿಯನ್ನು ಹೊಂದಿರತಕ್ಕವರು ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಕ್ಷೇತ್ರದಿಂದ ಈ ಸಭೆಗೆ ಗೆದ್ದು ಬಂದಿರತಕ್ಕವನು. ನಾನು ಆಗಲೇ ಜೆ.ಹೆಚ್. ಪಟೇಲರ ಬಗ್ಗೆ ಮಾತನಾಡತಕ್ಕಂತಹ ಸಂದರ್ಭದಲ್ಲಿ ಈ ಭೂ ಹೋರಾಟ ಯಾವರೀತಿ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಾಗ ಪಟೇಲರು ಮತ್ತು ಗೋಪಾಲಗೌಡರು ಮುಂದೆ ಇದ್ದರೋ ಅದೇ ರೀತಿಯಲ್ಲಿ ಆರ್.ವೆಂಕಟರಾಮಯ್ಯನವರು ಮತ್ತೆ ಪಿ.ವೆಂಕಟಗಿರಿಯಪ್ಪನವರು ಈ ಸದನದಲ್ಲಿ ಸದಸ್ಯರುಗಳಾಗಿದ್ದರು. ಅವರುಗಳು ನಡೆಸಿದ ಹೋರಾಟ ಮರೆಯಲು ಸಾಧ್ಯವಿಲ್ಲ. ಅದೇ ರೀತಯಲ್ಲಿ ಇನ್ನೂ ಅನೇಕರಿದ್ದಾರೆ. ಕೆಜಿಎಫ್ ಎಂದರೆ ಆಗಿನ ಕಾಲದಲ್ಲಿ 'ರೆಡ್ ಫೋರ್ಟ್' ಎಂದು ಕರೆಯತಕ್ಕ ಕಾಲ; ಅಲ್ಲಿ ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಒಳಪಟ್ಟಿರುವವರು ಅಲ್ಲಿ ಹೂಡಿದಂಥ ಠಾಣೆ ಅದರ ಪ್ರಭಾವದಿಂದ ಆರ್.ವೆಂಕಟರಾಮಯ್ಯನವರು, ವೆಂಕಟಗಿರಿಯಪ್ಪನವರು, ವಾಸನ್ ಅವರು ಇರಬಹುದು, ಗೋವಿಂದನ್ ಅವರಿರಬಹುದು ಮತ್ತೆ ಭೈರಾರೆಡ್ಡಿಯವರಿರಬಹುದು, ಗಂಗಿರೆಡ್ಡಿಯವರು ಇರಬಹುದು, ಇವರೂ ಎಲ್ಲರ ಪ್ರಭಾವದಿಂದ ನಾನು ಆಗಲೇ ಹೇಳಿದಹಾಗೆ ಈ ಭೂದಾಖಲೆಗಳು, ಭೂಸಂಬಂಧಗಳು ಬದಲಾವಣೆ ಆಗಿರತಯಕ್ಕಂಥಾದ್ದರಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸಿರತಕ್ಕವರು ಆರ್.ವೆಂಕಟರಾಮಯ್ಯನವರು. ಏನಾದರೂ ಒಂದು ಚಳುವಳಿ ಜಿಲ್ಲೆಯಲ್ಲಿ ಇರುತ್ತದೆ ಎಂದರೆ ಅಲ್ಲಿ ವೆಂಕಟರಾಮಯ್ಯನವರು ಇಲ್ಲದೇ ಯಾವುದೇ ಚಳುವಳಿ ನಡೆಯುವುದಕ್ಕೆ ಸಾಧ್ಯವೇ ಇಲ್ಲ; ಇಂತಹ ಒಂದು ರೀತಿಯಲ್ಲಿ ಜನ ಸಾಮಾನ್ಯರಲ್ಲಿ ಒಬ್ಬರಾಗಿ, ಜನರ ಏಳಿಗೆಗಾಗಿ ದುಡಿದಿರತಕ್ಕವರು. ಕೋಲಾರ ಜಿಲ್ಲೆಯಲ್ಲಿ ಪ್ರಮುಖರಾಗಿರತಕ್ಕವರು ವೆಂಕಟರಾಮಯ್ಯನವರು; ಅವರು ನಮ್ಮ ಕಣ್ಣು ಮುಂದೆ ಇಲ್ಲ ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿಯಲ್ಲಿ ಬಸವರಾಜ್ ಅವರು ಮತ್ತೆ ಎಸ್.ಪಾಟೀಲ್‌ರವರು, ಎನ್.ಬಸಪ್ಪನವರು ಇವರೆಲ್ಲರೂ ಕೂಡ ನಮ್ಮನ್ನು ಅಗಲಿ ಹೋಗಿದ್ದಾರೆ. ಈ ರಾಜ್ಯಕ್ಕೆ ಅಪಾರವಾದಂತಹ ಸೇವೆಯನ್ನು ಸಲ್ಲಿಸಿ ಹೋಗಿದ್ದಾರೆ.

ಇವರೆಲ್ಲರನ್ನೂ ಕೂಡ ಸ್ಮರಿಸಬೇಕಗಿರತಕ್ಕಂಥದ್ದು ಮತ್ತು ಅವರೆಲ್ಲರಗೂ ಕೂಡ ನಮ್ಮ ಭಾಷ್ಪಾಂಜಲಿಯನ್ನು ಅರ್ಪಿಸಬೇಕಾಗಿರತಕ್ಕದ್ದು ನಮ್ಮ ಕರ್ತವ್ಯ. ಆ ಕರ್ತವ್ಯದಲ್ಲಿ ತಾವು ಮಂಡಿಸಿರತಕ್ಕಂಥ ಗೊತ್ತುವಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸಿ, ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಅಧ್ಯಕ್ಷರು:- ನಮ್ಮ ಮುಂದೆ ಇನ್ನೂ ಸುಮಾರು 8 ಜನರು ಮಾತನಾಡುವವರು ಇದ್ದಾರೆ. ಮುಂದೆ ಮಾತನಾಡುವವರು ಸ್ವಲ್ಪ ಸಂಕ್ಷಪ್ತವಾಗಿ ಮಾತನಾಡಿದರೆ ಉತ್ತಮ ಎಂದು ಹೇಳಿ ಅವರಲ್ಲಿ ನನ್ನ ಪ್ರಾರ್ಥನೆ.

+ ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು):- ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದನದಲ್ಲಿ ಮಂಡಿಸಲ್ಪಟ್ಟಂತಹ ಸಂತಾಪ ಸೂಚನೆಯನ್ನು ಅನುಮೋದಿಸುತ್ತಾ, ಗುಜರಾತಿನಲ್ಲಿ ಸಂಭವಿಸಿದಂತಹ ಅತ್ಯಂತ ಭೀಕರವಾದಂತಹ ಭೂಕಂಪದಿಂದ ಸಾವಿರಾರು ಜನ ಮನೆ- ಮಠವನ್ನು ಕಳೆದುಕೊಂಡಿದ್ದಾರೆ. ಸಾವಿರಾರು ಜನ ತಮ್ಮ ಒಂದು ದುಃಖ- ದುಮ್ಮಾನಗಳನ್ನು ಎಲ್ಲರ ಜೊತೆ ಹಂಚಿಕೊಳ್ಳುವಂತಹ ಕೆಲಸ ಈಗಾಗಲೆ ಪ್ರಾರಂಭ ಆಗಿದೆ. ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಈ ಒಂದು ಪ್ರಕ್ರಿಯೆಗೆ ಅತ್ಯಂತ ಉತ್ತಮ ಚಾಲನೆಯನ್ನು ಕೊಡುವುದರ ಜೊತೆಯಲ್ಲಿ ರಾಜ್ಯದ ಪತಿಯಿಂದ, ಯಾರು ಭೂಕಂಪದಲ್ಲಿ ಮೃತಪಟ್ಟಿದ್ದಾರೆ., ಅವರಿಗೆ ನಮ್ಮ ಶೋಕ, ಸಂತಾಪಗಳನ್ನು ಸೂಚನೆ ಮಾಡುವುದನ್ನು ಕೂಡ ಮಾಡಿದ್ದೇವೆ. ಪ್ರಾಯಶಃ ನಮ್ಮ ಕರ್ತವ್ಯ ಇಲ್ಲಿಗೆ ಮುಗಿಯಲಿಲ್ಲ ಎಂದು ನನಗೆ ಅನಿಸುತ್ತದೆ. ಒಂದು ರೀತಿಯಲ್ಲಿ ಇಡೀ ಗುಜರಾತ್ ರಾಜ್ಯವೇ ತತ್ತರಿಸಿ ಹೋದಂತಹ ಸಂದರ್ಭದಲ್ಲಿ, ನಾವು ಈ ಒಂದು ಕ್ಷೇತ್ರದಲ್ಲಿ ಎಲ್ಲ ನಿರ್ವಸಿತರಿಗೆ ಮತ್ತೆ ಪುನರ್ವಸತಿ ಕಲ್ಪನೆ ಆಗುವವರೆಗೆ ಈ ಒಂದು ರಾಜ್ಯದ ಎಲ್ಲ ದುಃಖಿತ ವ್ಯಕ್ತಿಗಳ ಜೊತೆ ನಮ್ಮೆಲ್ಲ ಕೆಲಸ ಕಾರ್ಯಗಳನ್ನು ಎದೆಗುಂದಿಸಿಕೊಳ್ಳದೇ ಮಾಡಬೇಕಾದ್ದು ನಮ್ಮ ಕರ್ತವ್ಯ ಎಂದು ಭಾವಿಸುತ್ತೇನೆ. ಅಲ್ಲಿ ಮೃತಪಟ್ಟವರ ಆತ್ಮಕ್ಕೆ ಶಾಂತಿ ದೊರಕಲಿ; ಯಾರು ಈಗಾಗಲೇ ಮನೆ, ಮಠಗಳನ್ನು ಕಳೆದುಕೊಂಡು ದುಃಖ ದುಮ್ಮಾನದಲ್ಲಿರುವವರಿಗೆ ನಮ್ಮೆಲ್ಲರ ಸಹಾನುಭೂತಿಗಳನ್ನು ತೋರಿಸಿಕೊಳ್ಳೋಣ ಎಂದು ಹೇಳುತ್ತೇನೆ. ಇನ್ನು ಬಹುಶಃ ಜೆ.ಎಚ್.ಪಟೇಲ್ ಅವರ ಬಗ್ಗೆ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಲು ಇಚ್ಛೆಪಡುತ್ತಿದ್ದೇನೆ. ಕಳೆದ ಅಧಿವೇಶನದಲ್ಲಿ ಜೆ.ಎಚ್.ಪಟೇಲ್ ಅವರ ಜೊತೆ ನಾವು ಉಪಸ್ಥಿತರಿದ್ದಂತಹ ಸಂದರ್ಭದಲ್ಲಿ ಅವರಲ್ಲಿ ಕಂಡುಕೊಂಡಂತಹ ಎರಡು ಮೂರು ಮುಖ್ಯ ವಿಚಾರಗಳನ್ನು ಹೇಳುತ್ತೇನೆ. ಪ್ರಾಯಶಃ ರಾಜಕಾರಣದಲ್ಲಿ ನಾನು ಕಂಡಂತಹ ಅತ್ಯಂತ ಅಪರೂಪದ ಒಂದು ಮೇರು ವ್ಯಕ್ತಿತ್ವ. ಬಹುಶಃ ಸಾಧಾರಣವಾಗಿ ಯಾರಾದರೂ ಜೆ.ಎಚ್. ಪಟೇಲ್ ಅವರಲ್ಲಿ ಕುಸ್ತಿ ಮಾಡಲು ತಯಾರಾಗಿ ಬಂದರೂ ಸಹ ಅವರು ಕುಸ್ತಿಮಾಡಲಿಕ್ಕೆ ಹೋಗದೇ ಅವರ ಮಾತಿನಿಂದಲೇ ಅವರನ್ನು ಸದೆಬಡಿಯಬಲ್ಲಂತಹ ವ್ಯಕ್ತಿತ್ವ ಅವರಲ್ಲಿ ಇತ್ತು. ಎಷ್ಟೋ ಸಂದರ್ಭದಲ್ಲಿ ಅತ್ಯಂತ ಗಂಭೀರವಾದಂತಹ ವಿಚಾರಗಳವು ಚರ್ಚೆ ಆದಾಗಲೂ ಕೂಡ ಕೇವಲ ಒಂದೆರಡು ಶಬ್ದಗಳಲ್ಲಿ ಅವರ ಚರ್ಚೆಯನ್ನು ನಿಲ್ಲಿಸುವಂತಹ ಕೆಲಸ ಅವರಿಂದ ಆಗುತ್ತಿತ್ತು. ಟೀಕಾಕಾರರಿಗೆ ಭಾರೀ ಛಡೀ ಏಟಿನಂತಹ ಒಂದು ಶಬ್ದವನ್ನು ಕೊಡುತ್ತಿದ್ದರು. ಒಂದು ಬಾರಿ ನಮ್ಮ ಹಿರಿಯರಾದಂತಹ

ಮಾನ್ಯ ಖರ್ಗೆಯವರು ಈ ಭಾಗದಿಂದ ಒಂದು ವಿಷಯ ಪ್ರಸ್ತಾಪ ಮಾಡುತ್ತಿದ್ದರು. ಏನೋ ನಿಮ್ಮ ಪಕ್ಷದಲ್ಲಿ ಆಂತರಿಕ ಜಗಳ ಜಾಸ್ತಿ ಆಗಿದೆ, ಉಪಮುಖ್ಯಂತ್ರಿಯವರು ಮನೆಯಲ್ಲಿ ನಿನ್ನೆಯಲ್ಲಾ ಸೇರಿದ್ದಾರಂತೆ, ಯಾವಾಗ ಈ ಸ್ಥಾನಪಲ್ಲಟಗಳು ಆಗುತ್ತದೆ ಎಂದು ಹೇಳಿದಾಗ ಅವರು ತಾವೇಕೆ ಈ ಮೂಲ ಶೋಧನೆ ಮಾಡಲಿಕ್ಕೆ ಹೋಗುತ್ತಿದ್ದೀರಿ ಎಂದು ಹೇಳಿದರು. ಮತ್ತು ಮುಲ ಶೋಧನೆ ಅತ್ಯಂತ ಒಳ್ಳೆಯ ಕೆಲಸ ಅಲ್ಲ ಎಂದು ಹೇಳುತ್ತಾ ರಾಜಕೀಯ ವಿಶ್ಲೇಷಣೆಯನ್ನು ಅವರು ಮಾಡಿದರು. ಅವರು ಹೇಳಿದರು, ಈ ದೇಶದಲ್ಲಿ ಬೇಕಾದಷ್ಟು ಮೂಲ ಇರುವಂತಹ ರಾಜಕೀಯ ಪಾರ್ಟಿಗಳು ಇವೆ. ನಿಮ್ಮದೇ ತೆಗೆದುಕೊಂಡರೆ, ಕಾಂಗ್ರೆಸ ಪಕ್ಷ ಎಂದರೆ ಧನಮೂಲ. ಧನಮೂಲದಿಂದ ಬಂದ್ದಿರು ಕಾಂಗ್ರೆಸ್ ಪಕ್ಷ ಎಂಬಂತಹ ಛಡಿ ಏಟನ್ನು ಕೊಟ್ಟರು. ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್ ಇದೆ. ಅದೇ ರೀತಿ ನಮ್ಮದು ರಣಮೂಲ. ಯಾವಗಲೂ ನಮ್ಮಲ್ಲಿ ಸಂಘರ್ಷ ಇದ್ದೇ ಇದೆ. ನಮ್ಮೊಳಗೆ ಸಂಘರ್ಷ ಇದೆ ಎಂದು ಹೇಳುವುದನ್ನು ಒಪ್ಪಿಕೊಂಡು, ಬಿಜೆಪಿಯವರು ಸ್ವಲ್ಪ ಋಣ ಮೂಲದವರು ಎಂದು ಆ ಸಂದರ್ಭದಲ್ಲಿ ಹೇಳಿದ್ದಂತದನ್ನು ನಾವು ಜ್ಞಾಪಿಸಿಕೊಳ್ಳಬೇಕಾಗಿದೆ ಪ್ರಾಯಶಃ ಆ ಮೂಲ ಹುಡುಕುವಂತಹ ಕೆಲಸ, ಅಲ್ಲಿಗೇ ನಿಲ್ಲಿಸುವಂತಹದು ಆಯಿತು, ಬಹುಶಃ ಅವರ ಒಂದೇ ಮಾತಿನಿಂದ. ಹಣ ಮೂಲ ಎಂದು ಹೇಳುವುದರ ಮುಖಾಂತರ ಒಮ್ಮೆಲೇ ಆ ಮಾತಿಗೆ ಇತಿಶ್ರೀ ಹಾಕುವಂತಹ ಕೆಲಸವನನು ಮಾಡಿದರು. ನಮಗೆ ಗೊತ್ತಿದ್ದ ಹಾಗೆ ಅವರ ಹಾಸ್ಯ ಪ್ರವೃತ್ತಿ ಹಾಕುವಂತಹ ಕೆಲಸವನ್ನು ಮಾಡಿದರು. ನಮಗೆ ಗೊತ್ತಿದ್ದ ಹಾಗೆ ಅವರ ಹಾಸ್ಯ ಪ್ರವೃತ್ತಿ ಎಷ್ಟು ಇತ್ತು ಎಂದರೆ ಸದನದಲ್ಲಿ ಗಂಟೆಗಟ್ಟಲೆ ಕಾಲ ನಾವು ಚರ್ಚೆ ಮಾಡಿದರೂ ಕೂಡ ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹಾಸ್ಯ ಚಟಾಕಿಯಿಂದಲೇ ಅದನ್ನು ಪ್ರಾರಂಭ ಮಾಡುತ್ತಿದ್ದರು ತಕ್ಷಣ ಬಾಕಿ ಎಲ್ಲ ಕಡೆಗೆ ಇರುವಂತಹ ಗಮನ ಪ್ರತಿಪಕ್ಷದಿಂದ ಕಡಿಮೆ ಆಗುತ್ತಿತ್ತು. ಎಲ್ಲವನ್ನೂ ನಿಲ್ಲಿಸುವಂತಹ ಕೆಲಸಗಳು ಕೂಡ ಆಗುತ್ತಿತ್ತು. ಒಂದು ಸಂದರ್ಭದಲ್ಲಿ ಒಂದು ಅತ್ಯಂತ ಗಂಭಿರವಾದಂತಹ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುವಂತಹ ಅವಕಾಶ ನನಗೆ ಬಂತು. ಅದೂ ಕೂಡ ವರ್ಗಾವಣೆಯ ವಿಚಾರದಲ್ಲಿ ಬಂತು. ವಿಧಾನ ಮಂಡಲದ ಸುತ್ತಮುತ್ತ ಹಾಗೂ ನಮ್ಮ ಶಾಸಕರ ಭವನದಲ್ಲಿ ಆ ಒಂದು ಜನಗಳ ಜಾತ್ರೆ ಆಗುತ್ತಿತ್ತು. ಅಧಿಕಾರಿಗಳು, ಏಜೆಂಟರುಗಳು, ಬಾಕಿಯವರು; ಆಡಳಿತಪಕ್ಷದ ಶಾಸಕರ ಕೊಠಡಿಯಲ್ಲಿ ತುಂಬಿದಂತಹ ಜನರು, ಈ ರೀತಿಯ ಒಂದು ಅವ್ಯವಸ್ಥೆಯ ಆಗರವಾದಂತಹ ಸಂದರ್ಭದಲ್ಲಿ ವರ್ಗಾವಣೆಯ ಬಗ್ಗೆ ತನ್ನ ಸ್ಪಷ್ಟ ನೀತಿ ಏನು ಎಂದು ಈ ಸದನದಲ್ಲಿ ಪ್ರಶ್ನೆ ಮಾಡುವಂತಹ ಸಂದರ್ಭ ಬಂದಾಗ ಜೆ. ಎಚ್. ಪಟೇಲ್ ಅವರು ನೇರವಾಗಿ ಹೇಳಿದರು. ಬಹುಶಃ ಹಿಂದಿನಿಂದ ನಡೆದು ಬಂದುದಕ್ಕೆ ತಕ್ಷಣ ಎಲ್ಲಿಯೂ ಬ್ರೇಕ್ ಹಾಕಲಿಕ್ಕೆ ಆಗುವುದಿಲ್ಲ; ತಕ್ಕಣ ಬ್ರೇಕ್ ಹಾಕಿದರೆ ಹಿಂದಿನಿಂದ ಬಂದಂತಹ ಯಾವುದಾದರೂ ಒಂದು ವಾಹನಕ್ಕೆ ಅಪಘಾತ ಆಗುತ್ತದೆ ಎನ್ನುವಂತಹ ಮಾತನ್ನು ತಕ್ಷಣ ಹೇಳಿಬಿಟ್ಟರು. ಈ ರೀತಿಯಲ್ಲಿ ಒಂದು ವಿಚಾರದ ಬಗ್ಗೆ ಯಾವುದೇ ಸಂದರ್ಭದಲ್ಲಿ ಕೂಡ ನೇರವಾದಂತಹ ವಿಚಾರವನ್ನು ಪ್ರಸ್ತಾಪ ಮಾಡುವಂತಹ ಒಂದು ಕೆಲಸವನ್ನು ಮಾಡುವಂತಹ ಒಬ್ಬರು ವ್ಯಕ್ತಿ, ಅವರು ಮನಸ್ಸಿಗೆ ಬಂದಂತಹದನ್ನು ನಿಷ್ಠೂರವಾಗಿ ಹೇಳುತ್ತಿದ್ದರು. ಅವರು ಅದರಲ್ಲಿ ಏನೂ ದಾಕ್ಷಿಣ್ಯ ಮಾಡುತ್ತಿರಲಿಲ್ಲ. ಅದಕ್ಕಿಂತಲೂ ಮುಖ್ಯವಾಗಿ ಅವರ ವಿಶಾಲ ಹೃದಯ ಎಂದು ಹೇಳಿದರೆ, ಅವರ ತಪ್ಪನ್ನು

ಯಾವುದೇ ಸಂದರ್ಭದಲ್ಲಿ ಈ ರೀತಿ ನಮ್ಮ ಕಡೆ ತಪ್ಪಾಗಿದೆ ಎಂದರೆ, ಅದನ್ನು ಒಪ್ಪಿಕೊಳ್ಳಬಲ್ಲಂತಹ ಒಂದು ವಿಶಾಲ ಹೃದಯ ಅವರಲ್ಲಿ ಇತ್ತು. ಇಂತಹ ಒಂದು ಅಪರೂಪದ ರಾಜಕಾರಣಿ ನಿಜವಾಗಿ ನಮಗೆಲ್ಲರಿಗೂ ಮಾರ್ಗದರ್ಶಕರಾಗಿದ್ದರು. ಯಾವುದೇ, ಸಂದರ್ಭದಲ್ಲಿ ಇವತ್ತು ಟೀಕೆಗಳು, ಆರೋಪಗಳು ಬಂದಾಗ ಅದನ್ನು ಸಮಾಧಾನದಿಂದ ಆಲಿಸಬೇಕು ಎಂದು ಹೇಳುವಂತಹ ಒಂದು ವ್ಯವಸ್ಥೆಯನ್ನು ಮಾಡಿದಂತಹ ವ್ಯಕ್ತಿಗಳಲ್ಲಿ ಸನ್ಮಾನ್ಯ ಜೆ.ಎಚ್.ಪಟೇಲ್ ಅವರೊಬ್ಬರು. ಅವರು ಇವತ್ತು ನಮ್ಮ ಜೊತೆಗೆ ಇಲ್ಲ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳುವಂತಹ ಪ್ರಾರ್ಥನೆಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಇನ್ನೊಬ್ಬರು ಸನ್ಮಾನ್ಯ ಡಾ॥ ಜೀವರಾಜ್ ಆಳ್ವರವರು. ಸ್ವಲ್ಪ ಸಮಯ ನಮ್ಮ ಪಕ್ಷದಲ್ಲಿ , ನಮ್ಮ ಜೊತೆಯಲ್ಲಿ ಇದ್ದವರು. ಪ್ರಾಯಶಃ ನಾನು ಈ ಒಂದು ಸದಸ್ಯನಾಗಿ ಇಲ್ಲಿಗೆ ಬರಬೇಕಿದ್ದರೆ ಆ ಚುನಾವಣೆಯ ಪೂರ್ವ ತಯಾರಿಗೆ ಅವರು ಪುತ್ತೂರಿಗೆ ಬಂದ್ದಿರು. ದಕ್ಷಿಣ ಕನ್ನಡ ಜಿಲ್ಲೆಯ ಮೂಲದವರಾಗಿದ್ದಂತಹವರು ಅಲ್ಲಿಗೆ ಬಂದಿದ್ದರು. ಹಾಗೆ ಬಂದು ಒಂದು ಸ್ವಲ್ಪ ಸಾರ್ವಜನಿಕ ಸಮಾರಂಭದಲ್ಲಿ ಭಾಗವಹಿಸಿ ಒಂದು ರೀತಿಯ ರಾಜಕೀಯ ವೇದಿಕೆಯನ್ನು ನಿರ್ಮಾಣ ಮಾಡುವಂತಹ ಕೆಲಸ ಮಾಡಿದರು. ನಮ್ಮ ಪಕ್ಷದ ವತಿಯ ರಾಜಕೀಯ ವೇದಿಕೆಯನ್ನು ನಿರ್ಮಾಣ ಮಾಡುವಂತಹ ಕೆಲಸಗಳನ್ನು ಕೂಡ ಅವರು ಮಾಡಿದರು. ಕೊನೆಗೆ ಅವರು ಬರುವಾಗ ನನಗೆ ಒಂದು ಮಾತನ್ನು ಹೇಳಿದರು. ನೋಡಿ, ರಾಜಕಾರಣದಲ್ಲಿ ಯಾರೂ ಶಾಶ್ವತವಾಗಿ ಶತ್ರುಗಳೂ ಅಲ್ಲ, ಯಾರೂ ಶಾಶ್ವತವಾಗಿ ಮಿತ್ರರೂ ಅಲ್ಲ. ಆದಕಾರಣ ಯಾವುದೇ ಸಂದರ್ಭದಲ್ಲಿ ನಿಮಗೆ ಶತ್ರುಗಳು ಇದ್ದರೂ ಕೂಡ ಚುನಾವಣೆ ಬಂದ ಸಂದರ್ಭದಲ್ಲಿ ಮಿತ್ರರನ್ನಾಗಿ ಪರಿವರ್ತನೆ ಮಾಡಿಕೊಳ್ಳಿ ಎನ್ನುವ ಮಾತನ್ನು ಅವರು ಹೇಳಿದರು. ಅವರನ್ನು ನೋಡಿ ಮಾತನಾಡಿ ತಮ್ಮ ಪಕ್ಷದ ಕಡೆಗೆ ಒಲಿಸಿಕೊಳ್ಳುವಂತಹ ಕೆಲಸಗಳನ್ನು ಮಾಡಿ, ಆ ಕೆಲಸಗಳನ್ನು ಮಾಡಿದರೆ ಮಾತ್ರ ಒಂದು ರಾಜಕೀಯದಲ್ಲಿ ತಮ್ಮ ಎಲ್ಲ ಕೆಲಸಕಾರ್ಯಗಳನ್ನು ಸುಲಲಿತವಾಗಿ ಮಾಡಬಹುದು ಎಂದು ಹೇಳಿದಂತಹ ಒಬ್ಬ ವ್ಯಕ್ತಿ ಬಹುಶಃ ಈ ಸದನದಲ್ಲಿ ನಾನು ಸದಸ್ಯನಾಗಿ ಬರಲಿಕ್ಕೆ ಅವರ ಕೊಡುಗೆ ಕೂಡಾ ಇದೆ ಎಂದು ಭಾವಿಸುತ್ತೇನೆ. ಇವತ್ತು ಅವರು ನಮ್ಮೊಟ್ಟಿಗೆ ಇಲ್ಲ. ಯುವಕರನ್ನು ಸಂಘಟನೆ ಮಾಡುವುದರಲ್ಲಿ ಒಬ್ಬ ಅತ್ಯಂತ, ಧೀಮಂತ ರಾಜಕಾರಣಿ ಎಂದು ಈಗಾಗಲೇ ಉಲ್ಲೇಖ ಮಾಡಿದ್ದಾರೆ. ಅವರ ಆತ್ಮಕ್ಕೆ ಕೂಡ ಶಾಂತಿಯನ್ನು ಕೋರುತ್ತಾ, ಇತರ ಹಲವಾರು ಗಣ್ಯರು ಈಗಾಗಲೇ ನಮ್ಮನ್ನು ಅಗಲಿದ್ದಾರೆ. ಅವರು ಇಲ್ಲಿ ಬಿಟ್ಟು ಹೋದಂತಹ ಹಲವಾರು ವಿಚಾರಗಳು ನಮ್ಮ ಮುಂದಿನ ಎಲ್ಲ ರಾಜಕಾರಣದಲ್ಲಿ ಅಳವಡಿಸಿಕೊಳ್ಳುವಂತಹ ಪ್ರಯತ್ನವನ್ನು ನಾವೆಲ್ಲರೂ ಸೇರಿ ಮಾಡೋಣ. ಅವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ ದೇವರಲ್ಲಿ ಪ್ರಾರ್ಥನೆ ಮಾಡುತ್ತಾ ತಾವು ಮಾತನಾಡುವುದಕ್ಕೆ ಕೊಟ್ಟ ಅವಕಾಶಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವೈ.ಕೆ.ರಾಮಯ್ಯ (ಹುಲಿಯೂರುದುರ್ಗ):- ಮಾನ್ಯ ಅಧ್ಯಕ್ಷರೇ, ಗುಜರಾತಿನ ಭೂಕಂಪದಲ್ಲಿ ಪ್ರಾಣ ಮತ್ತು ಆಸ್ತಿಯನ್ನು ಕಳೆದುಕೊಂಡಂತಹ ಜನತೆಗೆ ಸಾಂತ್ವಾನವನ್ನು ಕೋರಿರುವಂತಹ ನನ್ನ ಎಲ್ಲಾ ಸ್ನೇಹಿತರ ಧ್ವನಿಗೆ ನನ್ನ ಧ್ವನಿಯನ್ನೂ ಕೂಡಿಸುತ್ತೇನೆ. ಅದರ ಜೊತೆಗೆ ನಮ್ಮ ಅಗಲಿದಂತಹ, ನಮ್ಮ ಜೊತೆಗೆ ಈ ಸದನದಲ್ಲಿ ಮತ್ತು ಬದುಕಿನಲ್ಲಿ ಬಾಳಿದಂತಹ ಅನೇಕ ಜನರ ಸಾವಿನಿಂದಾಗಿ ಅವರ ಹೃದಯಕ್ಕೆ ಶಾಂತಿ ಸಿಕ್ಕಲಿ ಎನ್ನುವ ವಿಷಯಕ್ಕೂ ಕೂಡ ನಾನು ನನ್ನ

ಸ್ನೇಹಿತರ ಜೊತೆಯಲ್ಲಿ ಸೇರಿಕೊಳ್ಳುತ್ತೇನೆ. ಮೊದಲನೆಯದಾಗಿ ಮಾನ್ಯ ಜೆ.ಎಚ್. ಪಟೇಲ್ ಅವರ ಬಗ್ಗೆ. ಅವರ ಗುಣಗಾನ, ಅವರ ಒಳಿತು-ಕೆಡಕನ್ನು ಎಲ್ಲಾ ಸ್ನೆಹಿತರೂ ನಮ್ಮ ಮುಂದೆ ಇಟ್ಟಿದ್ದಾರೆ. ನನಗೆ 20 ವರ್ಷದ ಅವರ ಜೊತೆ ಒಡನಾಟ ಇದೆ. ಆ ರಾಜಕೀಯ ಒಡನಾಟದ ನೆನಪಿನ ಅಂಗಳದಿಂದ ಕೆಲವು ಸಂದರ್ಭಗಳನ್ನು ಉದಾಹರಿಸಿದರೆ ತಪ್ಪಾಗಲಾರದು ಎಂದು ನನ್ನ ಭಾವನೆ ಜೆ.ಎಚ್. ಪಟೇಲ್ ಅವರು ಕೂಡ ಒಬ್ಬ ರಾಜಕಾರಣಿ. ಆದರೆ ನನಗೆ ತಿಳಿದಮಟ್ಟಿಗೆ ಅವರು ಅದಕ್ಕಿಂತ ಹೆಚ್ಚಾಗಿ ಒಬ್ಬರು ಮನುಷ್ಯರು. ಎಲ್ಲರೂ ಮನುಷ್ಯರು ಎಂದು ನಾನು ಒಪ್ಪಿಕೊಳ್ಳುವುದಿಲ್ಲ. ಆದರೆ ಜೆ.ಎಚ್.ಪಟೇಲ್ ಅವರನ್ನು ನಾನು ಮನುಷ್ಯರು ಎಂದು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಅವರಿಗೆ ಮನುಷ್ಯತ್ವ ಇತ್ತು. ಅವರು ಹೃದಯವಂತರು. ಎಲ್ಲರಲ್ಲೂ ಹೃದಯ ಇದೆ ಎಂದು ನಾನು ಭಾವಿಸಿಕೊಳ್ಳುವುದಿಲ್ಲ. ಅವರಲ್ಲಿ ಹೃದಯ ಇತ್ತು. ಆದ್ದರಿಂದ ಅವರು ಹೃದಯವಂತರು.

1.00 ಪಿ.ಎಂ.

ನಮ್ಮಲ್ಲಿ ಅನೇಕ ಜನರಿಗೆ ಪಾರದರ್ಶಕತೆ ಎಂಬ ಮಾತು ಕೇವಲ ಭಾಷಣದ ವಸ್ತುವಾಗಿದೆ. ಆದರೆ ಜೆ. ಹೆಚ್.ಪಟೇಲರಿಗೆ ಪಾರದರ್ಶಕತೆ ಎಂಬುದು ಜೀವನದ ಅವಿಭಾಜ್ಯ ಅಂಗವಾಗಿತ್ತು. ಸ್ವಂತ ಜೀವನದಲ್ಲಿ ಮತ್ತು ಸಾರ್ವಜನಿಕ ಜೀವನದಲ್ಲಿ ಅಷ್ಟೊಂದು ಪಾರದರ್ಶಕವಾಗಿ ಬದುಕಿದ್ದ ಮತ್ತೊಬ್ಬ ರಾಜಕಾರಣಿಯನ್ನು ನಾನು ಕಂಡಿಲ್ಲ, ಇದು ನಾನು ಅವರಲ್ಲಿ ಕಂಡಂತಹ ಅತ್ಯಂತ ಪ್ರಮುಖವಾದ ಗುಣಗಳು. ಒಂದು ಸಲ ಎಂ.ಎಲ್.ಸಿ. ಚುನಾವಣೆಯಲ್ಲಿ ನಾನು ಮತವನ್ನು ಹಾಕಬೇಕಾಗಿರತ್ತು. ಆಗ ಅವರ ಮನೆಗೆ ಊಟಕ್ಕೆ ಎಲ್ಲಾ ಶಾಸಕರನ್ನು ಕರೆದಿದ್ದರು. ಊಟ ನಡೆಯುತ್ತಿತ್ತು ನಾನು ಸ್ವಲ್ಪ ತಡವಾಗಿ ಊಟಕ್ಕೆ ಹೋದೆ, ಮಾನ್ಯ ಪಟೇಲರು ಬರುವಷ್ಟರಲ್ಲಿ ನಾನು ಮಜ್ಜಿಗೆ ಅನ್ನವನ್ನು ಊಟ ಮಾಡುತ್ತಿದ್ದೆ, ಅವರು ಬಂದು ನೋಡಿ, ಏನೋ ಆಗಿಲೇ ಜನ, ಗಣ, ಮನ, ಹೇಳುತ್ತಿದ್ದೀಯಲ್ಲ ಎಂದು ಹೇಳಿದರು, ಏಕೆಂದರೆ ಬೇರೆಯವರು ಇನ್ನೂ ಊಟವನ್ನೇ ಪ್ರಾರಂಭ ಮಾಡಿರಲಿಲ್ಲ, ಆದರೆ ನಾನು ಆಗಲೇ ಮಜ್ಜಿಗೆ ಅನ್ನ ಊಟ ಮಾಡುತ್ತಿದ್ದೆ. 'ಅಯ್ಯೋ, ನಾನು ಇನ್ನೇನು ಊಟ ಮಾಡುತ್ತೇನೆ, ಇಷ್ಟೇ ಸಾಕು' ಎಂದು ನಾನು ಹೇಳಿದೆ. ಆಗ ನನ್ನ ಪಕ್ಕದಲ್ಲಿದ್ದ ಇನ್ನೊಬ್ಬ ಸದಸ್ಯರು, ಅವರು ಈಗಲೂ ಇದೇ ಸದನದಲ್ಲಿ ಇದ್ದಾರೆ, ಆದರೆ ಅವರ ಹೆಸರನ್ನು ಹೇಳುವುದಿಲ್ಲ, ಅವರು, ' ಅಯ್ಯೋ, ರಾಮಯ್ಯನವರಿಗೆ ಬೇರೆ ಏನೂ ಇಲ್ಲದೆಯೇ ಸಭೆಗಳಲ್ಲಿ ಅವರನ್ನು ತಡೆಯಲು ಆಗುವುದಿಲ್ಲ, ಇನ್ನು ಅದನ್ನೂ ಏನಾದರೂ ಇವರಿಗೆ ಅಭ್ಯಾಸ ಮಾಡಿಸಿದರೆ ಸಭೆಗಳಲ್ಲಿ ಯಾರೂ ಉಳಿಯಲು ಆಗುವುದಿಲ್ಲ, ಆದ್ದರಿಂದ ಇವರಿಗೆ ಅಂಥಾಗುಣ ಯಾವುದನ್ನು ಕಲಿಸುವುದು ಬೇಡ, ಸುಮ್ಮನಿರಿ ಎಂದು ಹೇಳಿದರು. ಆಗ ಆ ಸದಸ್ಯರನ್ನು ಕರೆದು ಮಾನ್ಯ ಪಟೇಲರು 'Do you know the best way of being intoxicated?' ಎಂದು ಪ್ರಶ್ನೆ ಕೇಳಿದರು. ಆಗ ಅವರು ರಮ್, ಜಿಮ್ಮು, ಬೀರು ಜಗತ್ತಿನಲ್ಲಿ ಏನೆಲ್ಲಾ ಹೆಸರುಗಳಿದ್ದಾವೆಯೋ ಅವರಿಗೆ ತಿಳಿದಿದ್ದ ಎಲ್ಲವನ್ನೂ ಹೇಳಿದರು. ಆಗ ಅದಕ್ಕೆ ಮಾನ್ಯ ಪಟೇಲರು 'You are an idiot.' ಎಂದು ಹೇಳಿದರು. ಆಗ ನಾನು ಅವರನ್ನೇಕೆ ಬೈಯ್ಯುತ್ತೀರಾ? ಅದೇನು ಎಂಬುದನ್ನು ನೀವೇ ಹೇಳಿ ಎಂದು ಹೇಳಿದಾಗ, 'The best way of being intoxicated is by ideas.' ಎಂದು ಮಾನ್ಯ ಪಟೇಲರು ಹೇಳಿದ್ದರು. ಅವರಿಗೆ ಎಷ್ಟು

ಆಳವಾದಂಥ ಆಲೋಚನೆ ಇತ್ತು! ಆ ಸಮಯ ಪ್ರಜ್ಞೆ ನನಗೆ ಬಹಳ ಆಶ್ಚರ್ಯವನ್ನು ಉಂಟು ಮಾಡಿತ್ತು. 'ರಾಮಯ್ಯ, ಅವನ ತಲೆಯೊಳಗೆ ನೂರೆಂಟು ಆಲೋಚನೆಗಳನ್ನು ತುಂಬಿಕೊಂಡಿರುವಾಗ ಅವನಿಗೆ ಕುಡಿಸಿ ಹುಚ್ಚು ಏಕೆ ಹಿಡಿಸುತ್ತೀರಿ ಎಂದು ಹೇಳಿದರು. ಈ ರೀತಿಯ ನೂರು ಸಂದರ್ಭಗಳನ್ನು ನಾನು ಅವರ ಬಗ್ಗೆ ಹೇಳಬಲ್ಲೆ. ಮಾನ್ಯ ಬೊಮ್ಮಾಯಿಯವರು ಎಂ.ಎಸ್.ರಾಯ್‌ರವರ ಭಕ್ತರು. ಅವರ ಹೆಸರಿನಲ್ಲಿ ಸೆಂಟೆನರಿ ಸೆಲಬರೇಷನ್ ಮಾಡಬೇಕೆಂದು ಸರ್ಕಾರದವರು ಒಂದು ಸಮಿತಿ ಮಾಡಿದ್ದರು. ಅದರಲ್ಲಿ ಶ್ರೀ ಮತಿ ನಾಗರತ್ನಮ್ಮ ನವರು, ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತು ಶ್ರೀ ಎಸ್. ಆರ್. ಬೊಮ್ಮಾಯಿಯವರು ಹಾಗೂ ನಾನು ಸದಸ್ಯರುಗಳಾಗಿದ್ದೆವು. ಆಗ ಹಿಂದು-ಮುಸ್ಲಿಂ ಗಲಾಟೆ ನಡೆಯುತ್ತಿತ್ತು. ಆಗ ಹೆಗಡೆಯವರು, ಇದೇನಿದು ಜಾತಿ ಮತದ ಹೆಸರಿನಲ್ಲಿ ಹೀಗೆ ಕಿತ್ತಾಡುತ್ತಾರೆ? ನಾನು ಹರಿಜನರ ಜೊತೆ ಇರುವಾಗ ಹರಿಜನರು ಎಂಬ ಭಾವನೆಯೇ ಬರುವುದಿಲ್ಲ; ಮುಸ್ಲಿಂ ಜೊತೆ ಇದ್ದಾಗ ಮುಸ್ಲಿಂ ಎಂಬ ಭಾವನೆಯೇ ನನಗೆ ಬರುವುದಿಲ್ಲ. ಆದರೆ ಜನರು ಇದೇಕೆ ಹೀಗೆ ಕಿತ್ತಾಡುತ್ತಾರೋ ನನಗೆ ಅರ್ಥವಾಗುವುದಿಲ್ಲವೆಂದು ಹೇಳಿದರು. ಆಗ ಪಟೇಲರು, ಹೆಗಡೆಯವರ ಕಿವಿಯ ಹತ್ತಿರ ಹೋಗಿ ಮೆಲ್ಲಗೆ, ''ನೀನು ಹೆಣ್ಣು ಮಕ್ಕಳ ಜೊತೆ ಇದ್ದಾಗಲೂ ಏನೂ ಅನ್ನಿಸುವುದಿಲ್ಲವೇ? ಎಂದು ಕೇಳಿದರು. ಹೀಗೆ ಒಂದಲ್ಲ ಹಲವಾರು ಸಂದರ್ಭಗಳಲ್ಲಿ ಅವರ ಮಾತಿನಲ್ಲಿ ಹಾಸ್ಯಮಯವಾದ ವಾಕ್ ಚಾತುರ್ಯ ಅಡಗಿರುತ್ತಿತ್ತು. 1980 ದಶಕದಲ್ಲಿ ಅವರು ಕೆ.ಇ.ಬಿ.ಯ ಸಚಿವರಾಗಿದ್ದಾಗ ಭ್ರಷ್ಟಾಚಾರದ ವಿಚಾರದಲ್ಲಿ ಒಂದು ವಿಚಾರ ಬಂತು. ನಾನು ವಿದ್ಯುತ್ ಸಚಿವ, ಹರಿಜನ ಅಧಿಕಾರಿಗಳೆಲ್ಲ ಬಂದು ಸವರ್ಣೀಯ ಅಧಿಕಾರಿಗಳೆಲ್ಲಾ ಕಂಬಾ, ವೈರನ್ನೆಲ್ಲ ತಿಂದು ಹಾಕುತ್ತಾರೆಂದು ದೂರು ಹೇಳಿದರು, ಅವರಿಗೆ ಆಯಿತು ಹೋಗಿ ಎಂದು ಹೇಳಿ ಕಳಿಸಿಕೊಟ್ಟೆ; ಅನಂತರ ಸವರ್ಣೀಯ ಅಧಿಕಾರಿಗಳೆಲ್ಲ ಬಂದು, ಹರಿಜನರೆಲ್ಲ ಒಬ್ಬರಿಗೂ ಗೊತ್ತಿಲ್ಲದಂತೆ ಕಂಬಕ್ಕೆ ಹಾಕುವ ನೆಟ್ಟು, ಬೋಲ್ಟ್ ಅವೆಲ್ಲವನ್ನು ತಿಂದು ಹಾಕುತ್ತಾರೆಂದು ಹೇಳಿದರು, ಅವರು ಯಾರಿಗೂ ಗೊತ್ತಿಲ್ಲದಂತೆ ತಿಂದುಹಾಕುತ್ತಾರೆ, ಅವರ ಬಗ್ಗೆ ಮಾತ್ರ ನೀವು ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರು; ಆಗ ಮಾನ್ಯ ಪಟೇಲರು, ಅಯೋಗ್ಯರಿರಾ, ಅವರಂತೆ ನೀವೂ ಯಾರಿಗೂ ಗೊತ್ತಿಲ್ಲದಂತೆ ತಿನ್ನುವುದನ್ನು ಕಲಿತುಕೊಳ್ಳಿ, ಇಲ್ಲದಿದ್ದರೆ ತಿನ್ನುವುದನ್ನು ಬಿಟ್ಟುಬಿಡಿ, ಎಂದು ಹೇಳಿದರು. ನಮಗೆ ಇದು ಎಷ್ಟು ವಿಚಿತ್ರವಾಗಿ ಕಂಡರೂ ಅವರ ಆಳವಾದ ಅನುಭವ, ಆಲೋಚನೆ ಅವರ ನುಡಿಯಲ್ಲಿ ಇತ್ತು ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನಂತರ ಭ್ರಷ್ಟಾಚಾರದ ಬಗ್ಗೆ, ಅವರು ವಿರೋಧಪಕ್ಷದ ಸಾಲಿನಲ್ಲಿ ಕುಳಿತು ಆಡಳಿತ ಪಕ್ಷದವರ ಕಡೆಗೆ, ನಾವೆಲ್ಲರೂ ಅಂದರೆ ಈಗಿನ ರಾಜಕಾರಣಿಗಳು ನೆಹರೂರವರು ಬದುಕಿದಂತೆ ಬದುಕಬಹುದೇ ಹೊರತು ಮಹಾತ್ಮಗಾಂಧಿಯವರು ಬದುಕಿದಂತೆ ಬದುಕಲು ಸಾಧ್ಯವಿಲ್ಲವೆಂಬ ಮಾತನ್ನು ಹೇಳಿದರು. ಇಂದಿನ ಪರಿಸ್ಥಿತಿಯಲ್ಲಿ ಅದು ಸಂಪೂರ್ಣ ಸತ್ಯ. ಇದು ಅವರ ಜೀವನದಲ್ಲಿ ಇಟ್ಟುಕೊಂಡಿದ್ದ ಬದ್ಧತೆ. ಅವರ ಧೈರ್ಯದ ಬಗ್ಗೆ ಅನೇಕ ಸದಸ್ಯರು ಹೇಳಿದ್ದಾರೆ. ನನ್ನಂಥ ಹೇಡಿಗಳು ಹೇಳಲು ಸಾಧ್ಯವಿಲ್ಲದಂಥ ಅನೇಕ ವಿಚಾರಗಳನ್ನು ಸಾರ್ವಜನಿಕವಾಗಿ ಹೇಳಿ ಅರಗಿಸಿಕೊಂಡಂಥ ಒಬ್ಬ ಗಂಡಸು ಅವರಾಗಿದ್ದರು. xxx ಅವರ ಪ್ರೇಮ ಮತ್ತು ಆಸಕ್ತಿಯನ್ನು ಸಾರೋದ್ಧಾರವಾಗಿ

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ

ಸಾರಿದರು. ಇಡೀ ಪ್ರಪಂಚದ ಸಾರಸ್ವತ ಲೋಕ ಅವರ ಮೇಲೆ ತಿರುಗಿಬಿದ್ದಾಗ "Yes, I have said." ಎಂದು ಹೇಳಿದರು. ಎಷ್ಟು ಜನರಿಗೆ ಈ ರೀತಿ ಧೈರ್ಯವಿದೆ? ಇದರ ಬಗ್ಗೆ ಅವತ್ತು ಪತ್ರಿಕೆಗಳಲ್ಲಿ ಬಂದಂಥ ದೊಡ್ಡ ದೊಡ್ಡ ಲೇಖನಗಳನ್ನು ನಾವು ನೋಡಿದ್ದೇವೆ. ಅವರ ಧೈರ್ಯದ ಬಗ್ಗೆ ಇನ್ನೂ ಹೇಳುವುದಾಗಿದ್ದರೆ, ದಾರಿ ಚೆನ್ನಾಗಿಲ್ಲದಿದ್ದರೆ ಕುದುರೆಯ ಮೇಲೆ ಹೋಗಯ್ಯ, ದೀಪ ಇಲ್ಲವೆಂದರೆ ಸೀಮೆ ಎಣ್ಣೆ ದೀಪವನ್ನು ಇಟ್ಟುಕೊಂಡು ಓದಯ್ಯ, ರಾಜ್‌ಕುಮಾರವರನ್ನು ಹಿಡಿದುಕೊಂಡು ಹೋಗಿದ್ದರೆ ಹೋಗಿ ಬಿಡಿಸಿಕೊಂಡು ಬಾರಯ್ಯ ಎಂದು ಹೇಳುತ್ತಿದ್ದರು. ಏಕೆಂದರೆ ಒಬ್ಬ ರಾಜಕಾರಣಿ, ಮುಖ್ಯಮಂತ್ರಿ ಸರ್ವಗುಣ ಸಂಪನ್ನನಲ್ಲ, ಸರ್ವ ಸಮಸ್ಯೆಗಳ ಸಂಜೀವಿನಿಯೂ ಅಲ್ಲ; ಹೌದು ರಸ್ತೆ ಕೆಟ್ಟಿದೆ, ಆದರೆ ಅದನ್ನೆಲ್ಲ ಒಂದೇ ದಿನದಲ್ಲಿ ಮುಖ್ಯಮಂತ್ರಿ ಸರಿಪಡಿಸಲು ಆಗುತ್ತದೆಯೆ? ಎಂಬ ಮಾತನ್ನು ಸ್ಪಷ್ಟವಾಗಿ, ನೇರವಾಗಿ ಬೇರೆ ಯಾರೇ ಮುಖ್ಯಮಂತ್ರಿಗಳು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಮಾನ್ಯ ಪಟೇಲರು ಅವರ ಭಾಷೆಯಲ್ಲೇ ನಾನು ಸೂರ್ಯ ವಂಶದವರು ಎಂದು ಹೇಳುತ್ತಿದ್ದರು. ಆದರೆ ಸೂರ್ಯ ಹುಟ್ಟುವ ಮೊದಲೇ ನಾನು ಯಾವತ್ತೂ ಏಳುವುದಿಲ್ಲವೆಂದು ಹೇಳುತ್ತಿದ್ದರು ಅವರ ಎಲ್ಲಾ ಪ್ಲಸ್‌ಗಳಲ್ಲೂ ಈ ಸೋಮಾರಿತನವೆಂಬ ಮೈನಸ್ ಸಹ ಅವರಲ್ಲಿ ಇತ್ತು. ಈ ಸೋಮಾರಿತನವು ಸಾರ್ವಜನಿಕ ಜೀವನದಲ್ಲಿ ಒಳ್ಳೆಯದ್ದೇ ಅಥವಾ ಕೆಟ್ಟದ್ದೇ ಎಂಬುದನ್ನು ಅವರಿಗೇ ಬಿಡೋಣ. ಆದರೆ ಎಷ್ಟು ಕಾಲವನ್ನು ಸಾರ್ವಜನಿಕ ಕೆಲಸಕ್ಕಾಗಿ ಸೀಮಿತ ಮಾಡಬೇಕಾಗಿತ್ತೋ ಅಷ್ಟನ್ನು ಅವರು ಮಾಡಲು ಸಾಧ್ಯತೆ ಇರಲಿಲ್ಲ. ನಾನು ಅವರ ಬದುಕಿನಲ್ಲಿ ಕಂಡ ಕೊರತೆ ಇದೊಂದೇ ಒಂದು. ಅವರ ಹೃದಯವಂತಿಕೆ ಮತ್ತು ಮಾನವೀಯ ಗುಣಗಳ ಬಗ್ಗೆ ಎರಡು ಘಟನೆಗಳನ್ನು ಹೇಳಿದರೆ ಅದು ವೈಯಕ್ತಿಕವಾಗಲಾರದು ಎಂದು ನನ್ನ ಭಾವನೆ. ನಾನು ಅವರನ್ನು ಎರಡು ಸಲ ಅಗಲಿದೆ. ಒಂದು ನಾನು ಆ ಪಕ್ಷದಿಂದ ಬಿಟ್ಟು ಬಂದಾಗ, ಮತ್ತೊಂದು ಸಲ ಅವರು ಪ್ರಪಂಚವನ್ನೇ ಬಿಟ್ಟು ಹೋಗುವ ಕೆಲವೇ ದಿವಸಗಳ ಮೊದಲು. ನಾನು ಅವರು ನಗುವುದನ್ನು, ಹಾಸ್ಯ ಮಾಡುವುದನ್ನು ನೋಡಿದ್ದೆ., ಆದರೆ ಅಳುವುದನ್ನು ಎಂದೂ ನೋಡಿರಲಿಲ್ಲ. ನಾನು ಅವರ ಪಕ್ಷವನ್ನು ಬಿಡುವ ದಿವಸ ಅವರು ನನ್ನ ಕೈಯನ್ನು ಹಿಡಿದುಕೊಂಡು ಕಣ್ಣಿನಲ್ಲಿ ನೀರು ತುಂಬಿಕೊಂಡು "I am sorry to lose a valuable friend like you."

ನಿನಗೆ ದೇವರು ಒಳ್ಳೆಯದನ್ನು ಮಾಡಲಿ ಎಂದು ಹೇಳಿ ಕಳಿಸಿದರು. ಆದರೆ ಆಗ ಕಾಂಗ್ರೆಸ್ ಪಕ್ಷವನ್ನು ಸೇರಿಕೊಳ್ಳಬೇಡ ಎಂಬ ಬುದ್ಧಿವಾದ ಹೇಳಿದ್ದರು ಆದರೆ ಅದರಂತೆ ನಡೆಯಲು ನನಗೆ ಸಾಧ್ಯವಾಗಲಿಲ್ಲ. ಅವರ ಪ್ರಪಂಚವನ್ನೇ ಬಿಟ್ಟು ಹೋಗುವುದಕ್ಕೂ ಮೊದಲು ದೆಹಲಿಯಲ್ಲಿ ಶುಶ್ರೂಷೆ ಪಡೆಯುತ್ತಿದ್ದ ಸಮಯದಲ್ಲಿ ನಾನು ಹೋದಾಗ ನನ್ನ ಜೊತೆ ತುಂಬ ಸಮಯ ಮಾತನಾಡಿದರು, ಆಗ ನಾನು ಡಾಕ್ಟರ್‌ರವರು ನಿಮಗೆ ಹೇಗಾವಾರು ಸಲಹೆಗಳನ್ನು ನೀಡಿರುತ್ತಾರೆ. ಹೆಚ್ಚು ಮಾತನಾಡಬೇಡಿ ಎಂದು ಹೇಳಿಲ್ಲವೆ ಎಂದು ಕೇಳಿದೆ, ಆಗ ಅವರು ನಿನ್ನಂಥ ಒಳ್ಳೆಯ ಸ್ನೇಹಿತರು ಬಂದಾಗ ಮಾತನಾಡಲೂ ಸಾಧ್ಯವಿಲ್ಲವೆನ್ನುವುದಾದರೆ ಈ ಬದುಕು ಏಕೆ ಎಂದು ಅವರು ತಮಾಷೆಗಾದರೂ ಬಹಳ ನೋವಿನಿಂದ ಹೇಳಿದರು. ಅವರೇನಾದರೂ ರಾಜಕರಾಣಕ್ಕೆ ಬಾರದಿದ್ದರೆ ಬಹುಶಃ ಅವರು ದೊಡ್ಡ ತತ್ವಜ್ಞಾನಿಯಾಗುತ್ತಿದ್ದರೊ, ಚಿಂತಕರಾಗುತ್ತಿದ್ದರೋ ಎಂದು ಯೋಚಿಸಬೇಕಾಗುತ್ತದೆ. ಅಂಥ ಸಂದರ್ಭದಲ್ಲೂ ಅಡುಗೆಯವನನ್ನು ಕರೆದು ರಾಗಿ ಮುದ್ದೆ ಮಾಡಿಸಿ, ಕೋಳಿ ಸಾರು ಮಾಡಿಸಿ, ನನಗೆ ಊಟ ಮಾಡಿಸಿ, ನನ್ನ ಬೆನ್ನು ತಟ್ಟಿ ಕಳಿಸಿಕೊಟ್ಟರು.

ಅದೇ ಕೊನೆ ನಾನು ಅವರನ್ನು ಭೇಟಿ ಮಾಡಿದ್ದು. ನನಗೆ ಋಣವಿಲ್ಲವೆಂದು ಕಾಣುತ್ತದೆ, ಅವರು ಸತ್ತ ದಿವಸ ಅವರ ಮುಖವನ್ನೂ ನೋಡಲು ಆಗಲಿಲ್ಲ. ಹೀಗೆ ಪಟೇಲರನ್ನು ಮತ್ತೊಂದು ಸಲ ನಾನು ಪಕ್ಷವನ್ನು ಬಿಟ್ಟುಹೋಗಬೇಕಾದಂಥ ಸಂದರ್ಭ ಬಂದಾಗ ನಾಡಿನ ಒಂದು ಪತ್ರಿಕೆಯಲ್ಲಿ ನನ್ನ ಬಗ್ಗೆ 'ಒಂಟಿಯಾದ ನಿಷ್ಠುರವಾದಿ' ಎಂಬ ಶೀರ್ಷಿಯೆಯಡಿ ಒಂದು ಸಣ್ಣ ಲೇಖನ ಪ್ರಕಟವಾಯಿತು. ಈ ಲೇಖನವನ್ನು ಪಟೇಲ್‌ರವರು ಓದಿ, ನನಗೆ ದೂರವಾಣಿ ಕರೆ ಮಾಡಿ 'ಬಾ, ಇಲ್ಲಿ' ಎಂದು ಏಕವಚನದಲ್ಲಿ ಮಾತನಾಡಿಸಿ ನನ್ನನ್ನು ಕರೆಸಿಕೊಂಡು 'ನಿನ್ನ ಜೊತೆಯಲ್ಲಿ ದೈಹಿಕವಾಗಿ ನಾವು ಇಲ್ಲ, ಆದರೆ, ಮಾನಸಿಕವಾಗಿ ನಿನ್ನ ಜೊತೆಯಲ್ಲಿ ನಾವು ಇಲ್ಲವೇ? ನಾವೇನು ಸತ್ತು ಹೋಗಿದ್ದೇವೆಯೇ? ಈ ಚಿಂತೆ ನಿನ್ನ ತಲೆಯಲ್ಲೇಕೆ ಬಂತು?' ಎಂದಾಗ ಈ ರೀತಿ ನಾನು ಹೇಳಿಲ್ಲವೆಂದೂ, ಇದನ್ನು ಪತ್ರಿಕೆಯವರು ಬರೆದಿದ್ದಾರೆಂದೂ 'ನಾನೀಗ ಒಂಟಿಯಲ್ಲ, ಇಡೀಪ್ರಪಂಚವೆ ನನ್ನ ಜೊತೆಯಲ್ಲಿದೆ' ಎಂದು ಅವರಿಗೆ ಹೇಳಿ ಮಾತನಾಡಿಸಿ ಬಂದೆ. ಹೀಗೆ ಅನೇಕ ಸಂದರ್ಭಗಳಲ್ಲಿ ಅವರು ನಮಗೆ ಸಾಂತ್ವಾನ ನೀಡಿದ್ದಾರೆ, ಅತ್ಯಂತ ಸೊಗಸಾಗಿ ಬದುಕಿದ್ದಾರೆ. ಇವೊತ್ತಿನ ಪರಿಸ್ಥಿತಿಯಲ್ಲಿ ಸೋಗು, ಬೂಟಾಟಿಕೆಯನ್ನೇ ಬದುಕಿನಲ್ಲಿ ಅಳವಡಿಸಿಕೊಂಡು ಬದುಕುತ್ತಿರುವಂಥ ಜನರ ಮಧ್ಯದಲ್ಲಿ ಅವರದು ಪಾರದರ್ಶಕ ಜೀವನವಾಗಿತ್ತು. ನಾನು ಆಗಲೇ ಹೇಳಿದಂತೆ ವೈಯಕ್ತಿಕ ಜೀವನದಲ್ಲಿ ಮತ್ತು ಸಾರ್ವಜನಿಕ ಜೀವನದಲ್ಲಿ ನಮಗೆಲ್ಲರಿಗೂ ಕೂಡ ಅವರೊಂದು ದಾರಿದೀಪವಾಗಿದ್ದಾರೆಂದು ಹೇಳಲು ಇಷ್ಟಪಡುತ್ತೇನೆ. ಪಟೇಲರ ಮತ್ತೊಂದು ವೈಶಿಷ್ಟವನ್ನು ಬಹಳ ಜನರು ಗುರುತಿಸಿರಲಿಲ್ಲವೆಂದು ಕಾಣುತ್ತದೆ. ನಮ್ಮ ಗ್ರಾಮೀಣ ಬದುಕಿನಲ್ಲಿ ಪಟೇಲರು ಮತ್ತು ಗೋಪಾಲಗೌಡರು ಒಬ್ಬರಿಗೊಬ್ಬರು ದೂರವಾದಂತಿಲ್ಲ. ಇದು ಪಟೇಲರ ಜೀವನದಲ್ಲಿ ಶಾಶ್ವತವಾಗಿ ನಿಜವಾಯಿತು. ನನ್ನ ಬಳಿ ಒಂದು ಪುಸ್ತಕವಿದ್ದು ಇದನ್ನು ಓದಿದರೆ ಶಾಂತವೇರಿ ಗೋಪಾಲಗೌಡರ ಮತ್ತು ಪಟೇಲರ ಸಂಬಂಧ ಹೋರಾಟದ ಒಂದು ಹಂಥದಲ್ಲಿ ಹೇಗಿತ್ತು ಎಂಬುದು ಸುಸ್ಪಷ್ಟವಾಗುತ್ತದೆ, ಆ ಸಂಬಂಧ ಕಣ್ಣಿಗೆ ಕಟ್ಟುವಂತೆ ಕಾಣುತ್ತದೆ. ನನಗೆ ಪರಿಚಯವಿರುವ ಒಬ್ಬ ಪತ್ರಕರ್ತರು ಈಗ ದೆಹಲಿಯಲ್ಲಿದ್ದು' ಗೋಪಾಲಗೌಡರು ಸತ್ತಿದ್ದು ಪಟೇಲ್‌ರಿಂದಲೇ' ಎಂದು ಹೇಳಿದಾಗ ನನಗೆ ಆಶ್ಚರ್ಯವಾಗಿ 'ಅಪರಿಬ್ಬರೂ ಅಷ್ಟೊಂದು ಗಾಢವಾದ ಸ್ನೇಹಿತರಂತಿದ್ದರು ಎಂದು ಹೇಳುತ್ತಿದ್ದರಲ್ಲ' ಎಂದಾಗ ಅವರು ' ಹಾಗಲ್ಲ, ಗೋಪಾಲಗೌಡರಿಗೆ ಕುಡಿಯುವುದಕ್ಕೆ ದುಡ್ಡು ಇರಲಿಲ್ಲ, ಪಟೇಲರ ಬಳಿ ಆಸ್ತಿ ಇದ್ದುದರಿಂದ ಪಟೇಲರು ಆಸ್ತಿ ಮಾರುವುದು, ಗೋಪಾಲಗೌಡರು. ಕುಡಿಯುವುದು. ಹೀಗಾಗಿ ಪಟೇಲರಿಗಿಂತ ಮೊದಲೇ ಗೋಪಾಲಗೌಡರು ಸತ್ತು. ಎಂದು ತಿಳಿಸಿದರು. ಹೋರಾಟಗಾರರಾಗಿದ್ದ ಗೋಪಾಲಗೌಡರು ಪಟೇಲರ ಸ್ನೆಹಿತರಾಗಿದ್ದರು. ಇದರ ಬಳಿಕ ಹೋರಾಟದ ದಿನಗಳು ಕಳೆದು ಅಧಿಕಾರ ನಡೆಸುವಂಥ ಸಂದರ್ಭ ಬಂದಾಗ ಪಟೇಲರು ಮಾನ್ಯ ದೇವೇಗೌಡರ ಜೊತೆ ಕೂಡಿಕೊಂಡರು. ನಂತರ ದೇವೆಗೌಡರಿಗೂ ಪಟೇಲರಿಗೂ ವ್ಯತ್ಯಾಸ ಬಂದಾಗ ಕೊನೆಯದಾಗಿ ಭೈರೇಗೌಡರ ಜೊತೆ ಸೇರಿಕೊಂಡರು. ಹೀಗೆ ಪಟೇಲರ ಜೀವದುದ್ದಕ್ಕೂ ಪಟೇಲ-ಗೌಡ ರ ಸಂಬಂಧ ನಡೆದುಕೊಂಡು ಬಂದಿದೆ. ಏನಾದರಿರಲಿ, ವೈಯಕ್ತಿಕವಾಗಿ ನನಗೆ ಅತ್ಯಂತ ಮೆಚ್ಚಿನ ರಾಜಕಾರಣಿಯಾಗಿದ್ದ ಪಟೇಲರು ಇವೊತ್ತು ನಮ್ಮನ್ನು ಅಗಲಿದ್ದಾರೆ. ನಾವುಗಳೆಲ್ಲರೂ ಒಮ್ಮೆ ಜೈಲಿಗೆ ಹೋಗುವುದು ಒಳ್ಳೆಯದೆಂದು ನನ್ನ ಭಾವನೆಯಾಗಿದೆ! ನಾವು ಮನುಷ್ಯರಾಗಿದ್ದರೆ ಒಂದೊಂದು ಸಲ ಜೈಲಿಗೆ

ಹೋಗುವುದೊಳ್ಳೆಯದು. ಪಟೇಲರು ಜೈಲಿನಲ್ಲಿದ್ದಂಥ ಸಂದರ್ಭದಲ್ಲಿ ಸಾವಿನ ಕುರಿತು ಬರೆದಿದ್ದಾರೆ. ಆದರ ಒಂದೇ ವಾಕ್ಯವನ್ನು ಮತ್ರ ನಾನು ಓದಲು ಇಷ್ಟಪಡುತ್ತೇನೆ. ''ಮತ್ತೊಮ್ಮೆ ಸಂಧಿಸಲಾಗದಂಥೆ, ನಿರಂತರ ಅಗಲಿಸುವಂಥೆ ಮಾಡುವುದೇ ಸಾವಿನ ಕ್ರೂರ ಗುಣ''. ಅದೇ ರೀತಿ ನಾವು ಅವರನ್ನು ಮತ್ತೊಮ್ಮೆ ಸಂಧಿಸಲಾಗದಂತೆ ಕ್ರೂರ ವಿದಿ ಅಥವಾ ಸಾವಿನ ಈ ಕ್ರೂರ ಗಣ ಪಟೇಲರನ್ನು ನಮ್ಮಿಂದ ದೂರ ಮಾಡಿದೆ. ಅವರು ದೈಹಿಕವಾಗಿ ನಮ್ಮಿಂದ ದೂರವಾದರೂ ಅವರು ಸಂದರ್ಭಕ್ಕನುಸಾರವಾಗಿ ಹಾರಿಸಿದ ಹಾಸ್ಯ ಚಟಾಕಿದೆ, ಅವರಲ್ಲಿದ್ದ ವಿದ್ವತ್, ಮಾನವೀಯತೆ, ಹೃದಯವಂತಿಕೆ, ಧೈರ್ಯ ಇವೆಲ್ಲವೂ ಕೂಡ ನನಗಂತೂ ನನ್ನ ಜೀವನದಲ್ಲಿ ಎಂದೆಂದಿಗೂ ಮರೆಯಲಾಗದಂತಹ ಛಾಪನ್ನು ನಮ್ಮ ವ್ಯಕ್ತಿತ್ವದ ಮೇಲೆ ಒತ್ತಿ ಹೋಗಿದ್ದಾರೆಂದು ಹೇಳಬಯಸುತ್ತೇನೆ. ಇನ್ನು ಡಾ॥ ಜೀವರಾಜ್ ಆಳ್ವರವರ ಕುರಿತು ಹೇಳಬೇಕೆಂದರೆ, ಅವರು ನಾವು ಬಹುತೇಕ ಒಂದೇ ಗರಡಿಯಲ್ಲಿ ಸಾಮು ಪ್ರಾರಂಭಿಸಿದವರು. ನಾನು ಈ ಕುರಿತು ಹೆಚ್ಚಿಗೆ ಪ್ರಸ್ತಾಪಿಸುವುದಕ್ಕೆ ಹೋಗೆ 1980ರ ದಶಕದ ಪ್ರಾರಂಭದಲ್ಲಿ ಅವರೊಮ್ಮೆ ನನ್ನನ್ನು ಪರೀಕ್ಷಿಸಲು ಹೊರಟಾಗ, ಅವರಿಗೆ ನಾನು ದೂರವಾಣಿ ಕರೆ ಮಾಡಿ ನೇರವಾಗಿ ಹೇಳಿದೆ. ''Mr.Alva, I am standing on the strong ground, not on a soil, so, you must be careful." ಎಂದು ಇದಾದ ಬಳಿಕ ನನ್ನ ಬಗೆಗಿದ್ದ ಅವರ ಚಿಂತನೆಯನ್ನು ಬದಲಾಯಿಸಿಕೊಂಡರು. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ' ಹೋರಾಟ ಮತ್ತು ಕನಸು ಇವೆರಡೂ ಒಂದಕ್ಕೊಂದು ಪೂರಕವಾದವು' ಎನ್ನುವ ಮಾತನ್ನಾಡಿದರು. ಇದು ನಿಜವಾದರೂ ಕೂಡ ಕನಸಿಗೂ, ಹೋರಾಟಕ್ಕೂ ಬಹಳ ವ್ಯತ್ಯಾಸವಿದೆ. ಕನಸನ್ನು ಪುಕ್ಕಟ್ಟೆಯಾಗಿ ಕಾಣಬಹುದು, ಆದರೆ, ಹೋರಾಟಕ್ಕೆ ಬೆಲೆ ತೆರಬೇಕಾಗುತ್ತದೆ. ಹೋರಾಟವೆನ್ನುವುದು ಅಷ್ಟು ಸುಲಭವಲ್ಲ, ಇದಕ್ಕೆ ಭಾರಿ ಬೆಲೆಯನ್ನೇ ತೆರಬೇಕಾಗುತ್ತದೆ. ಬದ್ಧತೆಯ ಹೋರಾಟಕ್ಕೆ, ಶಿಸ್ತಿಗೆ, ನಿಷ್ಠುರತೆಗೆ ಬೆಲೆ ತೆರಬಬೇಕಾಗುತ್ತದೆ. ಕನಸನ್ನು ಯಾರು ಬೇಕಾದರೂ ಕಾಣ ಬಹುದಾದರೂ ಜೀವರಾಜ್ ಆಳ್ವರವರು ತಾವು ಕಂಡಂಥ ಕನಸುಗಳೆಲ್ಲವನ್ನೂ ನನಸು ಮಾಡುವಂಥ ಒಂದು ಪ್ರಯತ್ನದಲ್ಲಿ ಹೋರಾಟಕ್ಕೆ ಹೊರಟು ತಪ್ಪು ಮಾಡಿದರು ಎಂಬುದು ನನ್ನ ಭಾವನೆಯಾಗಿದೆ. ಜನತಾದಳಕ್ಕೆ ಇವೊತ್ತು ಬಂದಿರುವಂಥ ಪರಿಸ್ಥಿತಿ ಅವೊತ್ತು ಸಹ ಬಂದಿತ್ತು. ಈ ಗ ಸದನದಲ್ಲಿ ಕುಳಿತಿರುವಂಥ ನನ್ನ ಸ್ನೇಹಿತರು, ನಾನು ಹಾಗೂ ಅವರು ಒಟ್ಟಿಗೆ ಕುಳಿತುಕೊಂಡು ನಾವು ಯಾವ ದಿಕ್ಕು ಹಿಡಿಯಬೇಕು? ಯಾವ ದಾರಿಯಲ್ಲಿ ಸಾಗಬೇಕೆಂಬ ಕುರಿತು ಚರ್ಚೆ ಮಾಡುತ್ತಿದ್ದಾಗ ನನ್ನ ಸ್ನೇಹಿತರು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದರು; ' ರಾಮಯ್ಯ, ನಾನು, ನೀನು ಹಾಗೂ ಇವರೂ ಮೂವರು ಸೇರಿಕೊಂಡು ನಮ್ಮ ಜೊತೆಗೆ ಇನ್ನೂ ಒಂದಿಷ್ಟು ಜನರನ್ನು ಕರೆದುಕೊಂಡು ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡು ಬಿಡೋಣ, ನೀನು ಬಿ.ಜೆ.ಪಿ.ಗೆ ಹೋಗಬೇಡ. ಎಂದರೂ ನಮ್ಮ ಮಾತನ್ನು ಅವರು ಕೇಳಲಿಲ್ಲ. ಅವರು ಅಂದು ಆ ಮಾತನ್ನು ಕೇಳಿದ್ದಿದ್ದರೆ ಬಹುಶಃ ರಾಜಕೀಯದಲ್ಲಿ ಅವರು ಅನುಭವಿಸಿದ ಮೋಸ, he has become the victim of the circumstances.

ರಾಜಕೀಯ ಚದುರಂಗದಾಟದ ಮೋಸಕ್ಕೆ ಬಲಿಯಾದಂಥ ಒಬ್ಬ ಚಿಕ್ಕ ವಯಸ್ಸಿನ ರಾಜಕಾರಣಿ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ದಿವಂಗತ ಜಿವರಾಜ್ ಆಳ್ವರವರು ಸಂಘಟನಾ ಚತುರರಾದರೂ ಕೂಡ ರಾಜಕೀಯವಾಗಿ ತೀರ್ಮಾನ ಕೈಗೊಳ್ಳುವಾಗ ಒಂದೊಂದು ಸಲ ಎಡವಿದಂಥ ವ್ಯಕ್ತಿ, ಬಹಳ ಜನ ಅವರನ್ನು ಮೋಸಗೊಳಿಸಿದರು. ಯಾವುದೋ ಒಂದು ಪಕ್ಷದಲ್ಲಿ

ಅವರ ಪಾಡಿಗೆ ಅವರಿದ್ದರು. ಮಾನ್ಯ ಸದಸ್ಯರಾದ ಸರೇಶ್‌ಕುಮಾರ್ ಜೊತೆ ಏನೋ ಒಂದು ದಾರಿ ಕಂಡುಕೊಂಡಿದ್ದರು. ಆದರೆ, ಅವರಿಗೆ ಆಸೆ ತೋರಿಸಿ, ಮೋಸ ಮಾಡಿ ನಾನು ಆಗಲೇ ಹೇಳಿದಂತೆ ರಾಜಕೀಯ ಚದುರಂಗದಾಟ ಮೋಸದ ಕೃತ್ಯಕ್ಕೆ ಬಲಿಯಾದ, ನನ್ನ ಸ್ನೇಹಿತರಾದ ಪಿ. ಜಿ. ಆರ್. ಸಿಂಧ್ಯರವರು ಹೇಳಿದಂಥೆ ' ದುರಂತದ ಸಾವನ್ನು ಅವರು ಕಾಣಬೇಕಾಗಿ ಬಂತು'. ಅಂತಹ ಒಬ್ಬ ಸ್ನೇಹಿತರನ್ನು ತಾವು ಕಳೆದುಕೊಂಡಿರುವುದು ನನಗಂತೂ ವೈಯಕ್ತಿಕವಾಗಿ ನೋವಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರಕಲೆಂದು ನಾನು ಹಾರೈಸುತ್ತಾ ಇನ್ನು ಉಳಿದಂತೆ ದಿವಂಗತರಾದ ಶ್ರೀಮತಿ ಕೆಂಪಮ್ಮನವರು ನನಗೆ ಗುರುತೇ ಹೊರತು ಅವರ ಬಗ್ಗೆ ನನಗೆ ಆಳವಾದ ಸಂಪರ್ಕವಾಗಲೀ, ಸಂಬಂಧಗಳಾಗಲೀ ಇಲ್ಲ. ಅದೇ ರೀತಿ ಮೃತ್ಯುಂಜಯಪ್ಪ ಯಾರೆಂಬುದು ನನಗೆ ಗೊತ್ತಿಲ್ಲ. ಆರ್.ವೆಂಕಟರಾಮಯ್ಯನವರು ನನ್ನ ಆಳವಾದ ಸಂಪರ್ಕವಾಗಲೀ, ಸಂಬಂಧಗಳಾಗಲೀ ಇಲ್ಲ. ಅದೇ ರೀತಿ ಮೃತ್ಯುಂಜಪ್ಪ ಯಾರೆಂಬುದು ನನಗೆ ಗೊತ್ತಿಲ್ಲ. ಆರ್. ವೆಂಕಟರಾಮಯ್ಯನವರು ನನ್ನ ಜೊತೆಯಲ್ಲಿದ್ದವರು. 1985 ನೇ ಇಸವಿಯಲ್ಲಿ ಸದನಸಲ್ಲಿ ನಾವು ಏನಾದರೂ ಮಾತನಾಡುವಾಗ ಧಡಕ್ಕನೇ ನಿಂತುಕೊಂಡು ಬಿಡುತ್ತಿದ್ದರು. ಅವರು ಕಮೀಷನರ್ ಆಗಿದ್ದರೆಂದು ಕಾಣುತ್ತದೆ. ಅಲ್ಲದೇ, ಅವರು ಕಮ್ಯುನಿಷ್ಟ್ ಪಕ್ಷದಿಂದ ಚುನಾಯಿತರಾಗಿ ಬಂದಿದ್ದರೆಂದು ನನಗನಿಸುತ್ತದೆ. ಅವರು ಪಂಚೆ, ಅಂಗಿ ಹಾಕಿಕೊಂಡು ಬರುತ್ತಿದ್ದರು. ನನಗೆ ಈಗಲೂ ನೆಸಪಿರುವಂತೆ ನೀರಾವರಿ ವಿಷಯ ಕುರಿತು ನಾನು ದೀರ್ಘವಾಗಿ ಭಾಷಣ ಮಾಡುತ್ತಿದ್ದಾಗ ಮೇಲ್ಗಡೆ ಕುಳಿತಿದ್ದ ಅವರು ಈಗಿನ ಅಧ್ಯಕ್ಷರಂತೆ 'ನಿಮ್ಮ ಭಾಷಣವನ್ನು ಬೇಗ ಮುಗಿಸಿ ' ಎಂದು ಬೆಲ್ ಕುಟ್ಟುತ್ತಿದ್ದರು. ' ಕಾವೇರಿ ವಿವಾದದ ಬಗ್ಗೆ ದಿನವೆಲ್ಲಾ ಮತನಾಡಿದರೂ ಮುಗಿಯುವುದಿಲ್ಲ, ಸುಮ್ಮನೆ ಕುಳಿತುಕೊಳ್ಳಿ, ಎಂದು ಹೇಳುತ್ತಿದ್ದರು. ವೆಂಕಟರಾಮಯ್ಯನವರು ಹೋರಾಟದ ಹಿನ್ನೆಲೆಯಲ್ಲಿ ಬಂದಂಥವರಾಗಿದ್ದರು. ಇನ್ನು ಜೆ. ಹೆಚ್. ಬಸವರಾಜು, ಎಸ್. ಎ. ಪಾಟೀಲ್ ಬಸಪ್ಪವರು, ಇವರೆಲ್ಲರೂ ನಮ್ಮನ್ನ ಅಗಲಿದ್ದಾರೆ. ನಮ್ಮಿಂದ ದೂರವಾಗಿರುವ ಲಕ್ಷ್ಮೀನರಸಿಂಹಯ್ಯನವರ ಬಗ್ಗೆ ಹೇಳುವುದಾದರೆ, ನನ್ನ ಸ್ನೇಹಿತರು ಆಗಲೆ ಮಾತನಾಡಿ ಹೇಳಿದಂತೆ ಅವರ (ಸಂಯುಕ್ತ ಜನತಾದಳ) ಪಕ್ಷಕ್ಕೆ ಈ ವರ್ಷ ಕೆಟ್ಟ ವರ್ಷವಾಗಿದೆ. ಕಾರಣ, ಅವರ ಪಕ್ಷದಲ್ಲಿದ್ದ ಜೆ. ಹೆಚ್. ಪಟೇಲರು ತೀರಿಕೊಂಡರು, ಲಕ್ಷ್ಮೀನರಸಿಂಹಯ್ಯನವರು ತೀರಿಕೊಂಡರು, ಈಗ ಜೀವರಾಜ ಆಳ್ವರವರು ತೀರಿಕೊಂಡಿದ್ದಾರೆ. ಅವರ ಪಕ್ಷಕ್ಕೆ ಒಳ್ಳೆಯದೋ, ಕೆಟ್ಟದ್ದೋ ನನಗೆ ಗೊತ್ತಿಲ್ಲ. ಲಕ್ಷ್ಮೀನರಸಿಂಹಯ್ಯ ಅವರ ಸಾವಿನಿಂದ ವೈಯಕ್ತಿಕವಾಗಿ ನನಗೆ ಒಬ್ಬ ಸ್ನೇಹಿತನನ್ನು ಕಳೆದುಕೊಂಡಂಥ ನೋವಾಗಿದೆ. ಅವರಲ್ಲಿದ್ದಂಥ ಎಲ್ಲಾ ಗುಣಗಳಿಗಿಂತಲೂ ಹೆಚ್ಚಾಗಿ ನಾನು ಮೆಚ್ಚಿಕೊಂಡಿದ್ದು ಅವರಲ್ಲಿದ್ದಂಥ ಪ್ರಾಮಾಣಿಕತೆ. ಸುಮಾರು ವರ್ಷಗಳ ಕಾಲ ಅವರ ಅಧಿಕಾರ ನಡೆಸಿದರೂ ಸಾಯುವ ಸಂದರ್ಭದಲ್ಲಿ ಒಂದು ಮನೆ ಕಟ್ಟಿಕೊಂಡರು. ಅದಕ್ಕಿಂತಲೂ ಹೆಚ್ಚಿಗೆ ಅವರು ಆಸ್ತಿ ಮಾಡಲಿಲ್ಲ, ಹಣ ಮಾಡಲಿಲ್ಲ, ಏನೂ ಮಾಡುವುದಕ್ಕಾಗಲಿಲ್ಲ. ಅಷ್ಟೊಂದು ವರ್ಷಗಳ ಕಾಲ ರಾಜಕೀಯ ಮಾಡಿದರೂ ಕೂಡ ಅತ್ಯಂತ ಪ್ರಾಮಣಿಕವಾಗಿ ರಾಜಕೀಯ ಮಾಡಿದರು. ಲಕ್ಷ್ಮೀನರಸಿಂಹಯ್ಯನವರೂ ಸೇರಿದಂತೆ ಜೆ. ಹೆಚ್. ಪಟೇಲರು ಜೈಲಿನಲ್ಲಿ ಕುಳಿತುಕೊಂಡು ಚಿಂತನೆ ಮಾಡಿ ಬರೆದಂಥ ರೀತಿಯಲ್ಲಿ ಈ ಕ್ರೂರ ವಿಧಿ ಶಾಶ್ವತವಾಗಿ ನಮ್ಮೆಲ್ಲರನ್ನೂ ಅವರಿಂದ ದೂರ ಮಾಡಿದೆ, ನಮ್ಮೆಲ್ಲರಿಂದ ದೂರವಾಗಿರುವ ಎಲ್ಲಾ ಆತ್ಮಗಳಿಗೆ ಶಾಂತಿಯುಂಟಾಗಲೆಂದು ದೇವರಲ್ಲಿ (ಇದ್ದರೆ) ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಸದನದ ಕಲಾಪವನ್ನು ದಾಖಲಿಸುತ್ತಿರುವ ಅಧಿಕೃತ ವರದಿಗಾರರಿಗೆ ಸೂಚಿಸುವುದೇನೆಂದರೆ, ಮಾನ್ಯ ಸದಸ್ಯರಾದ ಶ್ರೀ ವೈ.ಕೆ. ರಾಮಯ್ಯನವರು ದಿವಂಗತ ಜೆ.ಹೆಚ್.ಪಟೇಲರ ಕುರಿತು ಸಂತಾಪ ವ್ಯಕ್ತಪಡಿಸಲು ಮಾತನಾಡುತ್ತಿರುವಾಗ ಹೆಣ್ಣುಮಕ್ಕಳ ಬಗ್ಗೆ ಹೇಳಿರುವ ವಾಕ್ಯವನ್ನು ಕಡತದಿಂದ ತೆಗೆದು ಹಾಕಲು ತಿಳಿಸುತ್ತಿದ್ದೇನೆ.

+ಶ್ರೀ ಬಿ.ಸೋಮಶೇಖರ್ (ಮಳವಳ್ಳಿ):- ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಈ ಸದನದ ಮುಂದೆ ತಾವು ಮಂಡಿಸಿರುವ ಸಂತಾಪ ಸೂಚಕ ನಿರ್ಣಯಕ್ಕೆ ಇಡೀ ಸದನವೇ ತನ್ನ ಬೆಂಬಲವನ್ನು ಸೂಚಿಸಿದೆ. ಗುಜರಾತ್‌ನಲ್ಲಿ ನಡೆದಂತಹ ಭೂಕಂಪ ನಿಜವಾಗಿಯೂ ಕೂಡ ಆಘಾತ ತರುವಂತಹ ಘಟನೆಯಾಗಿದೆ. ಗುಜರಾತ್‌ನಲ್ಲಿ ನಡೆದಂತಹ ಭೂಕಂಪ ಮೊದಲಯೆನ ಸ್ಥಾನದಲ್ಲಿದೆ. ಇತ್ತೀಚೆಗೆ ಗುಜರಾತ್‌ನಲ್ಲಿ ನಡೆದ ಭೂಕಂಪವು ಇಡೀ ವಿಶ್ವದಲ್ಲಿಯೇ ಎರಡನೇಯ ಅತ್ಯಂತ ದೊಡ್ಡ ಭೂಕಂಪವಾಗಿದೆ ಎಂದು ನಾವು ತಿಳಿದುಕೊಂಡಿದ್ದೇವೆ. ಚೈನಾ ದೇಶದಲ್ಲಿ ಲಕ್ಷಾಂತರ ಜನರನ್ನು ಬಲಿ ತೆಗೆದುಕೊಂಡಂತಹ ಭೂಕಂಪ ಮೊದಲನೆಯ ಸ್ಥಾನದಲ್ಲಿದೆ. ಇತ್ತೀಚೆಗೆ ಗುಜರಾತ್‌ನಲ್ಲಿ ನಡೆದ ಭೂಕಂಪವು ಇದರ ನಂತರದ ಸ್ಥಾನವನ್ನು ಪಡೆದು ಎರಡನೆಯ ಅತಿ ದೊಡ್ಡ ಭೂಕಂಪವೆನಿಸಿದೆ. ಈ ಭೂಕಂಪದಿಂದಾಗಿ ಲಕ್ಷಾಂತರ ಜನ ಸಾವನ್ನಪ್ಪಿದ್ದಾರೆ ಮತ್ತು ನೂರಾರು ಕೋಟಿ ರೂಪಯಿಗಳಷ್ಟು ಆಸ್ತಿ-ಪಾಸ್ತಿಗಳು ನಷ್ಟವಾಗಿವೆ. ಇದಲ್ಲದೇ ಲಕ್ಷಾಂತರ ಮಂದಿ ಈ ಭೂಕಂಪದಿಂದಾಗಿ ಗಾಯಗೊಂಡಿದ್ದಾರೆ ಮತ್ತು ಅನಾಥರಾಗಿದ್ದಾರೆ. ಈ ಒಂದು ದುರಂತದ ಬಗ್ಗೆ ಕೇವಲ ಭಾರತ ದೇಶದಲ್ಲಿ ಮಾತ್ರವಲ್ಲ ಇಡೀ ವಿಶ್ವದಲ್ಲಿಯೇ ಜನ ಅನುಕಂಪ ವ್ಯಕ್ತಪಡಿಸಿದ್ದಾರೆ. ನಮ್ಮ ರಾಜ್ಯದಲ್ಲೂ ಸಹಾ ಸರ್ಕಾರದವರು ಭೂಕಂಪ ಪೀಡಿತರ ನೆರವಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ನಾವು ಮತ್ತು ನೀವೆಲ್ಲರೂ ಸಹ ನಮ್ಮದೇ ಆದಂತಹ ರೀತಿಯಲ್ಲಿ ಆ ಜನರಿಗೆ ನೆರವು ನೀಡಿರತಕ್ಕದ್ದು ತಮ್ಮಗೆಲ್ಲರಿಗೂ ತಿಳಿದೇ ಇದೆ. ಭೂಕಂಪದ ಬಗ್ಗೆ ವಿಜ್ಞಾನಿಗಳು ಸ್ವಲ್ಪ ಹೆಚ್ಚಿನ ಅಧ್ಯಯನ ಮತ್ತು ಸಂಶೋಧನೆ ಮಾಡಬೇಕಾಗುತ್ತದೆ ಎಂದು ನನಗನಗನಿಸುತ್ತದೆ. ಯಾವ ಸಂದರ್ಭದಲ್ಲಿ ಯಾವ ಭಾಗದಲ್ಲಿ ಏನು ಆಗುತ್ತದೋ ಎಂದು ನಾವು ಹೇಳುವುದಕ್ಕಾಗುವುದಿಲ್ಲ. ಈ ಘಟನೆಯಾದ ಮೇಲೆ ಕೆಲವೇ ದಿನಗಳಲ್ಲಿ ನಮ್ಮ ರಾಜ್ಯದಲ್ಲೂ ಕೂಡ ಭೂಕಂಪ ಭೂಕಂಪದ ಅನುಭವವಾಯಿತು. ಆ ಸಂದರ್ಭದಲ್ಲಿ ವಿಧಾನಸೌಧದಲ್ಲಿ ಕೆಲಸ ಮಾಡುತ್ತಿರತಕ್ಕ ನೌಕರರು ಹೆದರಿಕೊಂಡು ಹೊರಗೆ ಓಡಿ ಬಂದದ್ದನ್ನು ನಾವು ಕೇಳಿದ್ದೇವೆ. ' ಡಿಸಾಸ್ಟರ್ ಮ್ಯಾನೇಜ್‌ಮೆಂಟ್' ಎಂಬುದನ್ನು ನಾವು ಹುಟ್ಟು ಹಾಕಿ ಇದರಲ್ಲಿ ವಿಜ್ಞಾನಿಗಳು ಹೆಚ್ಚು ಪಾತ್ರ ವಹಿಸುವಂತೆ ಮಾಡಬೇಕಾಗಿದೆ. ಈಸದನದ ಎಲ್ಲರ ಜೊತೆಗೆ ಭೂಕಂಪದಲ್ಲಿ ಸಾವಿಗೀಡಾದ ಎಲ್ಲರಿಗೂ ನಾನೂ ಸಹಾ ಸಂತಾಪವನ್ನು ಸೂಚಿಸುತ್ತಿದ್ದೇನೆ.

ಇನ್ನು ಅಗಲಿದ ನಾಯಕರುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಇತರರು ಈಗಾಗಲೇ ಸದನದಲ್ಲಿ ಬಹಳಷ್ಟು ವಿವರವಾಗಿ ಹೇಳಿದ್ದಾರೆ. ಮಾನ್ಯ ಜೆ.ಹೆಚ್.ಪಟೇಲ್‌ರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಸತ್ಯವಾಗಿ ಮಾತನಾಡಿ ಅವರ ವ್ಯಕ್ತಿತ್ವವನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಅವರ ಬಗ್ಗೆ ಮಾತನಾಡಿದಂತಹ ಎಲ್ಲಾ ಸದಸ್ಯರುಗಳೂ ಸಹಾ ಬಹಳ ಗೌರವದಿಂದ ಮಾತನಾಡಿದ್ದಾರೆ. ಮಾನ್ಯ ಪಟೇಲರ ಬಗ್ಗೆ ಮಾತನಾಡಬೇಕೆಂದರೆ ಎಲ್ಲರಿಗೂ

ಪ್ರೀತಿ ಉಕ್ಕಿ ಬರುತ್ತದೆ. ಕಾರಣವೇನೆಂದರೆ, ಅವರು ಯಾರಿಗೂ ಸಹಾ ವೈರಿಗಳಾಗಿರಲಿಲ್ಲ. ಯಾವ ಜನಾಂಗದವರೂ ಸಹಾ ಅವರನ್ನು ದ್ವೇಷಿಸುತ್ತಿರಲಿಲ್ಲ. ಅಂತಃ ವಿಶಿಷ್ಟವಾದ ವ್ಯಕ್ತಿತ್ವ ಅವರದಾಗಿತ್ತು. ಪ್ರತಿಯೊಬ್ಬರಿಗೂ ಸಹಾ ಇವರು ನಮ್ಮ ಮುಖ್ಯಮಂತ್ರಿಗಳು ಎಂಬ ಭಾವನೆ ಬರುವಂತೆ ಅವರು ಮಾಡಿದ್ದರು. ಈ ಬಗ್ಗೆ ನಾನು ಒಂದೇ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ನಾನು ಎರಡನೇ ಬಾರಿಗೆ ಪಟೇಲರ ಸಂಪುಟದಲ್ಲಿ ಸಚಿವನಾದಾಗ ನಾನು ಲೋಕಾಯುಕ್ತರವರು ಖಾಲಿ ಮಾಡಿದ್ದ ಸರ್ಕಾರಿ ಕ್ವಾರ್ಟರ್ಸ್ ಅನ್ನು ನನಗೆ ಅಲಾಟ್ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದೆ. ಆಗ ಮಾನ್ಯ ಲೋಕೋಪಯೋಗಿ ಸಚಿವರಾಗಿದ್ದ ಉದಾಸಿಯವರೂ ಸಹ ತಮಗೆ ಅದೇ ಕ್ವಾರ್ಟರ್ಸ್ ಬೇಕೆಂದು ಕೇಳಿದ್ದರು. ಅವರು ಲೋಕೋಪಯೋಗಿ ಸಚಿವರಾಗಿದ್ದುದರಿಂದ ಬಹುಶಃ ಕ್ವಾರ್ಟರ್ಸ್ ಅನ್ನು ಅಲಟ್ ಮಾಡಿದರು. ಆಗ ನನಗೆ ಬಹಳ ಆಶ್ಚರ್ಯವಾಯಿತು. ಅವರದೇ ಜಾತಿಯವರಾದ ಉದಾಸಿಯವರಿಗೆ ಅವರು ಕ್ವಾರ್ಟರ್ಸ್ ಅನ್ನು ಗಲಾಟೆ ಮಾಡಬಹುದು ಎಂದು ಎಲ್ಲರೂ ತಿಳಿದುಕೊಂಡಿದ್ದರು. ಅವರು ಎಂದಿಗೂ ಜಾತಿ, ಧರ್ಮದ ಬೇಧ ಮಾಡುತ್ತಿರಲಿಲ್ಲ. ಮಾನವೀಯತೆ ಅವರಲ್ಲಿ ತುಂಬಿ ತುಳುಕುತ್ತಿತ್ತು. ಅವರು ಆಗರ್ಭ ಶ್ರೀಮಂತ ಕುಟುಂಬದಲ್ಲಿ ಜನಿಸಿದವರಾಗಿದ್ದರು. ಅವರ ತಂದೆ ಕಾಲದಲ್ಲಿ ನುರಾರು ಎಕರೆಗಳಷ್ಟು ಜಮೀನಿನಲ್ಲಿ ಸಾವಿರಾರು ಕ್ವಿಂಟಾಲ್‌ಗಳಷ್ಟು ಭತ್ತ ಮತ್ತು ಕಬ್ಬು ಅನ್ನು ಬೆಳೆಯಲಾಗುತ್ತಿತ್ತು. ಅಂತಹ ಶ್ರೀ ಮಂತ ಕುಟುಂಬದಲ್ಲಿ ಹುಟ್ಟಿ ಗೇಣಿದಾರರ ಪರವಾಗಿ ಬೀದಿಗಿಳಿದು ಹೋರಾಟ ಮಾಡಿದಂತಹ ವ್ಯಕ್ತಿ ನಿಮಗೆ ಬೇರೆ ಯಾರೂ ಸಿಗುವುದಿಲ್ಲ. ಅಂಥಹ ಒಂದು ಹೋರಾಟವನ್ನು ಅವರು ಮಾಡಿದ್ದರು. ಮೇಲ್ಜಾತಿಯಲ್ಲಿ ಹುಟ್ಟಿ ಕೆಳವರ್ಗದವರ ಬಗ್ಗೆ ಕನಿಕರವಿಟ್ಟು ಅವರ ಬಗ್ಗೆ ಹೋರಾಟ ಮಾಡಿದಂತಹ ರಾಜಕಾರಣಿಗಳು ಬಹಳ ಅಪರೂಪ. ಅದಕ್ಕೆ ಮಾನ್ಯ ಪಟೇಲರ ಮಗನ ಮದುವೆಯೇ ಒಂದು ಸಾಕ್ಷಿ. ಅವರ ಮಗ ಒಬ್ಬ ದಲಿತ ಮಹಿಳೆಯನ್ನು ಪ್ರೀತಿಸಿ ಮದುವೆಯಾದಾಗ 'ನಿನ್ನ ಹಣೆಬರಹ', ನೀನು ಚೆನ್ನಾಗಿರು ಎಂದು ತುಂಬು ಹೃದಯದಿಂದ ಮಗನಿಗೆ ಆಶೀರ್ವದಿಸಿದ್ದರು. ಈಗ ಅವರ ಮಗನ ಕುಟುಂಬದವರು ತುಂಬು ಜೀವನ ನಡೆಸುತ್ತಿದ್ದಾರೆ. ಈ ರೀತಿಯಾಗಿ ಮಾನ್ಯ ಪಟೇಲರ ಬಗ್ಗೆ ಹೇಳುತ್ತಾ ಹೊರಟರೆ ಅದಕ್ಕೆ ಕೊನೆ ಎಂಬುದೇ ಇರುವುದಿಲ್ಲ. ಅವರ ಆಡಳಿತಾವಧಿಯಲ್ಲೂ ಸಹಾ ಎಲ್ಲಾ ರಂಗಗಳಲ್ಲೂ ಕೂಡ ಹಸ್ತಕ್ಷೇಪ ನಡೆಸುತ್ತಿರಲಿಲ್ಲ. 'ನಿಮ್ಮ ಇಲಾಖೆಗೆ ನೀವೇ ಮುಖ್ಯಮಂತ್ರಿಗಳು' ಎಂದು ಹೇಳಿ ಎಲ್ಲಾ ಸಚಿವರಿಗೂ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ಯಾರಾದರೂ ಮಂತ್ರಿಗಳು ತಪ್ಪು ಮಾಡಿದ್ದರೆ ಅವರನ್ನು ಕರೆದು, ಈ ರೀತಿ ನಿನ್ನ ಮೇಲೆ ಭ್ರಷ್ಟಾಚಾರದ ದೂರುಗಳು ಬರುತ್ತಿವೆ, ಆ ರೀತಿ ಬರದಂತೆ ಎಚ್ಚರಿಕೆ ವಹಿಸು ಎಂದು ತಮ್ಮ ಸಹೋದ್ಯೋಗಿಗಳಿಗೆ ಬುದ್ಧಿಮಾತು ಹೇಳುತ್ತಿದ್ದರು. ಬಹುಶಃ ಈ ರೀತಿಯ ಮುಖ್ಯಮಂತ್ರಿಗಳು ಬೇರೊಬ್ಬರಿರಲಾರರು. ಪ್ರತಿಯೊಬ್ಬ ಮಂತ್ರಿಗಳಿಗೂ ಸ್ವಾತಂತ್ರ್ಯವನ್ನು ಕೊಟ್ಟು ಎಲ್ಲಾ ಇಲಾಖೆಗಳಲ್ಲೂ ಪ್ರಗತಿ ಸಾಧಿಸುವಂತೆ ಅವರು ನೋಡಿಕೊಂಡರು. ವಿದ್ಯುತ್ ಖಾತೆಯನ್ನು ಅವರು ವಹಿಸಿಕೊಂಡು ಈ ರಾಜ್ಯದಲ್ಲಿ ಒಂದು ದಾಖಲೆಯನ್ನೇ ಸ್ಥಾಪನೆ ಮಾಡಿದರು. ಈಗಿನ ಮಾನ್ಯ ಮುಖ್ಯಮಂತ್ರಿಗಳೂ ಸಹಾ ಆ ಬಗ್ಗೆ ಮುಕ್ತಕಂಠದಿಂದ ಹೊಗಳಿದ್ದಾರೆ. ರಾಯಚೂರು ಥರ್ಮಲ್ ಪ್ಲಾಂಟ್ ಸ್ಥಾಪನೆಗೆ

ಅವರೇ ಆಸ್ತಿ ಭಾರ ಹಾಕಿದ್ದರು. ಮುಂದೆ ಅವರೇ ಅದನ್ನು ಉದ್ಘಾಟಿಸಿದರು. ಇಂತಹ ದಾಖಲೆ ಬೇರೆ ಯಾರೂ ಸಹಾ ಮಾಡಿಲ್ಲ. ಅವರ ಅಧಿಕಾರಾವಧಿಯಲ್ಲಿ ಸುಮಾರು 800 ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದಿಸುವಂತಹ ಶಕ್ತಿ ನಮ್ಮ ರಾಜ್ಯಕ್ಕೆ ಬಂದಿತು. ಅವರ ಹಾಸ್ಯ ಪ್ರಜ್ಞೆಯ ಬಗ್ಗೆ ಈಗಾಗಲೆ ಅಂತಹ ಅನೇಕ ಸಂದರ್ಭಗಳನ್ನು ಮಾನ್ಯ ಸದಸ್ಯರು ಇಲ್ಲಿ ಹೇಳಿದ್ದಾರೆ. ಪ್ರತಿಯೊಂದು ಸಂದರ್ಭದಲ್ಲೂ ಕೂಡ ಹಾಸ್ಯವಿಲ್ಲದೆ ಅವರು ಮಾತನಾಡುತ್ತಲೇ ಇರಲಿಲ್ಲ. ಅವರು ಮಾತನಾಡುವಾಗ ಹಾಸ್ಯದ ಚಟಾಕಿ ಹಾರುತ್ತದೆ ಎಂಬ ನಿರೀಕ್ಷೆಯಿಂದ ಎಲ್ಲರೂ ಕುಡ ನಿಶ್ಯಬ್ದದಿಂದ ಕುಳಿತು ಅವರ ಮಾತನ್ನು ಆಲಿಸುತ್ತಿದ್ದರು. ನನ್ನ 30 ವರ್ಷಗಳ ಅನುಭವದಲ್ಲಿ ಹೇಳುವುದಾದರೆ, ಅವರ ಹಾಸ್ಯ ಸ್ಪಾನಟೇನಿಯಸ್ ಆಗಿ ಬರುತ್ತಿತ್ತು. ಅವರು ಮಾಡುವ ಹಾಸ್ಯದಲ್ಲಿ ತಮಾಷೆಯೂ ಇರುತ್ತಿತ್ತು ಮತ್ತು ಅರ್ಥವೂ ಅಡಗಿರುತ್ತಿತ್ತು. ನಾವು ಕಾಲೇಜಿನಲ್ಲಿ ಓದುತ್ತಿರುವ ಸಂದರ್ಭದಲ್ಲಿ ಅವರುನಮ್ಮ ಜೊತೆಗೆ ಒಂದು ಮೊಟ್ಟೆಯನ್ನು ತಿಂದರು. ನಾನು ಅದಕ್ಕೆ, ಲಿಂಗಾಯಿತರಾದ ತಾವು ಮೊಟ್ಟೆ ತಿನ್ನುತ್ತೀರಲ್ಲಾ ಎಂದು ಕೇಳಿದೆ. ಅದಕ್ಕೆ ಅವರು, ನಾನು ಅದರ ತಾಯಿಯನ್ನೇ ಬಿಡುವುದಿಲ್ಲ, ಹೀಗಿರುವಾಗ ಇದೇನು ಮಹಾ ಎಂದರು. ಇಂತಹ ಅನೇಕ ಹಾಸ್ಯದ ಸಂದರ್ಭಗಳನ್ನು ನಾವು ಉಲ್ಲೇಖಿಸುತ್ತಾ ಹೋಗಬಹುದು. ಅವರು ಇವತ್ತು ರಾತ್ರಿ ಒಬ್ಬರ ಬಳಿ ಜಗಳವಾಡಿದ್ದರು ಎಂದು ಇಟ್ಟುಕೊಳ್ಳಿ. ನಾಳೆ ಬೆಳಿಗ್ಗೆ ಅವರು ಅವನನ್ನು ಮಾತನಾಡಿಸುವಾಗ ನಿನ್ನೆ ರಾತ್ರಿ ಜಗಳವಾಡಿದ್ದರು ಎಂದು ಇಟ್ಟುಕೊಳ್ಳಿ. ನಾಳೆ ಬೆಳಿಗ್ಗೆ ಅವರು ಅವನನ್ನು ಮಾತನಾಡಿಸುವಾಗ ನಿನ್ನೆ ರಾತ್ರಿ ಜಗಳವಾಡಿದ್ದರು ಎಂದು ಅನಿಸುತ್ತಿರಲಿಲ್ಲ, ಅಂತಹ ಭಾವನೆಯೇ ಬರುತ್ತಿರಲಿಲ್ಲ, ಆ ರೀತಿ ಅವರು ಮಾತನಾಡುತ್ತಿದ್ದರು. ಯಾವುದೇ ಪಕ್ಷದ ಯಾವುದೇ ಶಾಸಕರು ಇಂತಹ ಕೆಲಸ ಆಗಬೇಕು ಎಂದು ಕೇಳಿದರೆ, ಯಾವುದೇ ಪಕ್ಷಬೇಧವಿಲ್ಲದೆ ಅಂತಹ ಕೆಲಸವನ್ನು ಮಾಡಿಸಿಕೊಡುತ್ತಿದ್ದ ವಿಶಾಲ ಮನೋಭಾವದ ಮುತ್ಸದ್ಧಿ ರಾಜಕಾರಣಿಗಳಾಗಿದ್ದರು. ಅವರ ಸರ್ಕಾರದಲ್ಲಿ ನಾನು ಮಂತ್ರಿಯಾಗಿದ್ದಾಗ ಅವರು ನನ್ನ ವ ಬಗ್ಗೆ ಅಪಾರವಾದಂತಹ ಪ್ರೀತಿಯನ್ನು ತೋರಿಸಿ ಒಳ್ಳೆಯ ಕೆಲಸ ಮಾಡುವು ಅವಕಾಶ ಮಾಡಿಕೊಟ್ಟಿದ್ದರು. ನಾನು ಅವರನ್ನೆಂದಿಗೂ ಮರೆಯುವಂತಿಲ್ಲ. ಅಂತಹ ಪ್ರೀತಿ, ವಾತ್ಸಲ್ಯ ಇನ್ನೆಂದೂ ಸಿಕ್ಕಲಾರದು. ಅವರು ನೀಡಿದಂತಹ ಒಂದು ಆಶ್ವಾಸನೆಯನ್ನು ನಾನು ಇಲ್ಲಿ ನೆನಪಿಸಿಕೊಳ್ಳಬಯಸುತ್ತೇನೆ. 1996ರಲ್ಲಿ ರಾಷ್ಟ್ರಪತಿಗಳು ಹೊಸದಾಗಿ ಅಧಿಕಾರ ವಹಿಸಿಕೊಂಡಾಗ ದಲಿತರೆಲ್ಲಾ ಸೇರಿ ' ಸ್ವಾಭಿಮಾನೋತ್ಸವ ಎಂಬ ಕಾರ್ಯಕ್ರಮವೊಂದನ್ನು ಆಯೋಜಿಸಿದ್ದರು. ಆ ಸಂದರ್ಭದಲ್ಲಿ ನಾನು ಮಾತನಾಡುತ್ತಾ ಬೆಂಗಳೂರಿನ ಸಮೀಪ ದೇವನಹಳ್ಳಿಯಲ್ಲಿ ಬರಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಡಾ|. ಅಂಬೇಡ್ಕರ್ ಅವರ ಹೆಸರನ್ನಿಡಬೇಕೆಂಬ ಬೇಡಿಕೆಯನ್ನು ಅವರ ಮುಂದಿಟ್ಟೆ. ಅದನ್ನು ಒಪ್ಪಿ ಮಾನ್ಯ ಪಟೇಲರು ಆ ಬಗ್ಗೆ ಸಮಾರಂಭದಲ್ಲಿ ಘೋಷಣೆಯನ್ನೂ ಸಹಾ ಮಾಡಿದರು. ಅಂದು ಅವರು ಕೊಟ್ಟಂತಹ ಆ ಮಾತನ್ನು ನಡೆಸಿಕೊಡಬೇಕೆಂದು ನಾನು ಈಗಿನ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಮಗೂ ಅದರಿಂದ ಕೀರ್ತಿ ಬರುತ್ತದೆಯಾದ್ದರಿಂದ ಈ ಕೆಲಸವನ್ನು ಮಾಡಬೇಕೆಂದು ನಾನು ತಮ್ಮನ್ನು ಕೋರುತ್ತೇನೆ. ಮಾನ್ಯ ಪಟೇಲರ ಅಗಲಿಕೆಯಿಂದ ನಮ್ಮೆಲ್ಲರಿಗೂ ತುಂಬಾ ನಷ್ಟವಾಗಿದೆ, ನಮ್ಮ ಪಕ್ಷಕ್ಕಂತೂ ತುಂಬಲಾರದ ಹಾನಿಯಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು ಅವರ ಕುಂಟುಂಬಕ್ಕೆ ಮತ್ತು ಅವರ ಆತ್ಮಕ್ಕೆ

1.30.ಪಿ.ಎಂ.

ನಾನು ಶಾಂತಿಯನ್ನು ಕೋರುತ್ತೇನೆ. ಡಾ|| ಜೀವರಾಜ ಆಳ್ವರವರು ನಮ್ಮ ಸಹೋದ್ಯೋಗಿಗಳು. ಅವರೂ ನಾವೂ ಒಟ್ಟಿಗೆ ಸೇರಿ ಕೆಲಸ ಮಾಡಿದವರು. ಮಾನ್ಯ ಜೀವರಾಜ್ ಆಳ್ವರವರು ಅವರು ಏನು ಮಾಡಬೇಕೆಂದು ಹೇಳುತ್ತಿದ್ದರು ಅದನ್ನು ಮಾಡಿಯೆ ತೀರುತ್ತಿದ್ದರು. ಅದು ಒಳ್ಳೆಯವರಿಗೆ ಕೆಟ್ಟದಾಗಲಿ, ಕೆಟ್ಟವರಿಗೆ ಒಳ್ಳೆಯದಾಗಲಿ ಅದನ್ನು ಏನೂ ನೋಡದೆ ಮಾಡಿ ನಂತರ ಪಶ್ಚಾತ್ತಾಪ ಪಟ್ಟುಕೊಳ್ಳುತ್ತಿದ್ದರು. ಅಷ್ಟೊಂದು ಉತ್ಸಾಹಿ ತರುಣರಾಗಿದ್ದರು. ನಮ್ಮ ಪಕ್ಷದ ಸಂಘಟನೆಯಲ್ಲಿ ಬಹಳ ಮುಂಚೂಣಿಯಲ್ಲಿದ್ದರು. ಯುವಕರಿಗೆ ಮಾರ್ಗದರ್ಶಕರಾಗಿದ್ದರು. ನಮ್ಮ ಯುವಕರ ಸಂಘಟನೆಯಲ್ಲಿ ಅವರು ಹೆಚ್ಚಿನ ಪಾತ್ರವನ್ನು ವಹಿಸಿದ್ದಾರೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಅವರಿಗೆ ಇಂತಹ ದುರಂತದ ಸಾವು ಬರುತ್ತದೆ ಎಂದು ನಾವು ಅಂದುಕೊಂಡಿರಲಿಲ್ಲ. ಅತ್ಯಂತ ಸಕ್ರಿಯವಾದ, ಕ್ರಿಯಾಶೀಲರಾದ ಒಬ್ಬ ಯುವಕ ಮುಖಂಡರನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೂ ಸಹ ನಾನು ಶಾಂತಿಯನ್ನು ಕೋರುತ್ತೇನೆ ಮಾನ್ಯ ಲಕ್ಷ್ಮೀನರಸಿಂಹಯ್ಯನವರಿಗೆ ನಾವೆಲ್ಲ 'ಲಚ್ಚಣ್ಣ' ಎಂದು ಕರೆಯುತ್ತಿದ್ದೆವು. ಅವರು ನಮ್ಮ ಪಕ್ಷದ ಹಿರಿಯ ಮುಖಂಡರಾಗಿದ್ದರು ಅವರನ್ನೂ ಸಹ ನಾವು ಕಳೆದುಕೊಂಡಿದ್ದೇವೆ. ಶ್ರೀಮತಿ ಕೆಂಪಮ್ಮನವರು ಬಹಳ ಗೌರವಸ್ಥ ಕುಟುಂಬದಿಂದ ಬಂದವರು. ದಲಿತರ ಬಗ್ಗೆ ಕಾಳಜಿ ಮತ್ತು ಕ್ರಿಯಾಶೀಲವಾದ ಚಿಂತನೆ ಈ ಎರಡೂ ಗುಣಗಳೂ ಅವರಲ್ಲಿದ್ದವು. ಅವರನ್ನೂ ಸಹ ನಾವು ಮಧ್ಯದಲ್ಲಿಯೇ ಕಳೆದುಕೊಂಡಿದ್ದೇವೆ. ಶ್ರೀ ಮಾನ್ ಮೃತ್ಯುಂಜಯಪ್ಪನವರು, ಆರ್.ವೆಂಕಟರಾಮಯ್ಯನವರು ತಮ್ಮ ಕ್ಷೇತ್ರದಿಂದ ಬಂದಂತಹವರು, ಅವರು ವಿರೋಧಪಕ್ಷದಲ್ಲಿದ್ದಾಗ ಯಾವಾಗಲೂ ನಮ್ಮ ಬಗ್ಗೆ ಗಲಾಟೆ ಮಾಡುತ್ತಿದ್ದರು. ಅವರನ್ನೂ ಸಹ ನಾವು ಕಳೆದುಕೊಂಡಿದ್ದೇವೆ. ಎಸ್.ಎ. ಪಾಟೀಲ್, ಎಮ್.ಬಸಪ್ಪ ಮತ್ತು ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀಮಾನ್ ಎ.ರಾಮಣ್ಣನವರು ಇವರನ್ನೆಲ್ಲಾ ಸಹ ನಾವು ಕಳೆದು ಕೊಂಡಿದ್ದೇವೆ. ಇವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ):- ಮಾನ್ಯ ಅಧ್ಯಕ್ಷರೆ, ನಾವು ಸಂತಾಪ ಸೂಚನೆ ತಂದಿರುವವರೆಲ್ಲರೂ ಕೂಡ ಈ ರಾಜ್ಯದ ಉದ್ದಗಲಕ್ಕೂ ಸೇವೆ ಮಾಡಿದ್ದಾರೆ. ಪರಮಾತ್ಮ 'ಭೂಮಿ' ಎಂಬ ರತ್ನಗಂಬಳಿಯನ್ನು ಹಾಸಿದ್ದಾನೆ. ಆ ರತ್ನ ಗಂಬಳಿಯ ಮೇಲೆ ಓಡಾಡಲು, ತಿನ್ನಲು, ಬದುಕಲು, ಜಲ ನಿಕ್ಷೇಪಗಳಿಗೆ ಎಲ್ಲಕ್ಕೂ ಕೂಡ ಆತನೇ ಒಡೆಯ, ಆದರೆ ಗುಜರಾತ್‌ನಲ್ಲಿ ಭೂಗರ್ಭದಲ್ಲಿ ಅಡಗಿ ಹೋಗಿರತಕ್ಕಂತಹ ಜನರ ಪರಿಸ್ಥಿತಿ ನಿಜವಾಗಿಯೂ ಕೂಡ ದುರ್ದೈವದ ಪರಿಸ್ಥಿತಿ. ಸಾವು ಪ್ರಕೃತಿ ಎಂದಿಗೂ ಕೂಡ ತನ್ನ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಮರಣವೇ ಮಹಾನವಮಿ, ಅರಸನಾಗಲಿ, ಧನಿಕನಾಗಲಿ, ತಿರುಕನಾಗಲಿ ನಾನಾಗಲಿ, ನೀನಾಗಲಿ ಎಲ್ಲರೂ ಅಳಿಯಲೇಬೇಕು ಹೊಸಬರು ಬರುವುದು ಹೇಗೆ? ನಮ್ಮ ಮುಖ್ಯಮಂತ್ರಿಗಳು ನಾವೂ ಕೂಡ ಆ ಜಾಗಕ್ಕೆ ಹೋಗಬೇಕೆಂದು ಹೇಳಿದ್ದರು. ಆ ಜಾಗಕ್ಕೆ ಹೋಗುವ ಮೊದಲು ಸಮಾಜಕ್ಕೆ ನಿನ್ನ ಕೊಡುಗೆಯಾದರೂ ಏನು? ''ಹುಟ್ಟುವಾಗ ಏನೂ ತರಲಿಲ್ಲ ಹೋಗುವಾಗ ಏನೂ ಒಯ್ಯಲಿಲ್ಲ, ಸುಟ್ಟು ಸುಟ್ಟು ಸುಣ್ಣದ ಹರಳಾಯಿತು ಈ ದೇಹ. ಹೊಟ್ಟೆ ಬಲು ಚಿಕ್ಕದೆಂದು ಎಷ್ಟೋ ಕಷ್ಟಪಟ್ಟು,

ಪ್ರಾಣಬಿಟ್ಟು ಹೋಗುವಾಗ ಗೇಣು ಬಟ್ಟೆ ಕೂಡ ನಿನಗಿಲ್ಲವೋ ಇಂತಹ ಅಸ್ಥಿರವಾದ ಮಾನವನ ಜನ್ಮದಲ್ಲಿ ಮನುಷ್ಯ ತಾನು ಬದುಕಿದ್ದಾಗ ಸಮಾಜಕ್ಕೆ ಏನನ್ನು ಕೊಡುತ್ತಾನೆ ಅದುವೇ ಲೆಕ್ಕಕ್ಕೆ ಬರುವುದು. 'ಬರುವವರಿಬ್ಬರು ಜೊತೆಗೆ ಪಾಪ-ಪುಣ್ಯ. ಕರೆಯದೇ ಬರುವವರಿಬ್ಬರು ಮುಪ್ಪು-ಸಾವು. ಬಿಡದೆ ಬಂಧಿಸುವರಿಬ್ಬ ರು ಗೃಹ-ಗೃಹಿಣಿ. ಶಾಶ್ವತವಾಗಿ ನಿಲ್ಲುವವರು ದಾನ-ಧರ್ಮ''. ಇಂತಹ ಪವಿತ್ರವಾದ ಮಾನವನ ಜನ್ಮದಲ್ಲಿ ಮುಖ್ಯವಾಗಿ ನಾವು ನೋಡಬೇಕಾಗಿರುವುದು, ನಾವು ಮತ್ತೆ ಮನುಷ್ಯರಾಗಿ ಹುಟ್ಟುವುದಿಲ್ಲ. 'ಪುನರಪಿ ಜನನಂ, ಪುನರಪಿ ಮರಣಂ' ಇಲ್ಲ, ಒಂದು ಸಾರಿ ನಾರದನಿಗೆ ವಿಷ್ಣು ಹೇಳಿದನಂತೆ , 'ನೋಡಪ್ಪ, ತಿಪ್ಪೇಗುಂಡಿ ಹತ್ತಿರ ಒಂದು ಹುಳ ಇದೆ, ಆ ಹುಳುವಿದೆ ನೋಡಿಕೊಂಡು ಬಾ' ಎಂದು ಹೇಳಿದನಂತೆ, ನಾರದ ಹೋಗಿ ನೋಡುವವರೆಗೆ ಆ ಹುಳು ಸತ್ತು ಹೋಗಿತ್ತು. ಅವನು ಮರಳಿಬಂದು ಹೇಳಿದರೆ,'' ಅಲ್ಲಿ ಒಂದುಹಸು ಕರು ಹಾಕಿದೆ, ಅದನ್ನು ನೋಡಿಕೊಂಡು ಬಾ' ಎಂದು ಹೇಳಿದಾಗ ಅದನ್ನು ನೋಡುವುದಕ್ಕೆ ಹೋದರೆ ಆ ಕರುವೂ ಸತ್ತು ಹೋಯಿತು. ನಂತರ 'ಒಂದು ಗಿಣಿ ಮರಿ ಆಗತಾನೆ ಹುಟ್ಟಿದೆ, ಅದನ್ನು ನೋಡಿಕೊಂಡು ಬಾ' ಎಂದು ಹೇಳಿದ, ಅದನ್ನು ನೋಡಿದರೆ ಅದೂ ಸತ್ತು ಹೋಯಿತು. ನನಗೆ ಅವಮಾನವಾಗುತ್ತಿದೆ ಎಂದು ಹೇಳಿದ. ನಂತರ ಮಹಾರಾಜರ ಮನೆಯಲ್ಲಿ ಒಂದು ಮಗು ಹುಟ್ಟಿದೆ ಅದನ್ನು ಹೋಗಿ ನೋಡು ಎಂದು ಹೇಳಿದ; ' ಆ ಮಗುವನ್ನು ನೋಡುವುದಕ್ಕೆ ಹೋದರೆ ಆ ಮಗೂ ಕೂಡ ಸತ್ತು ಹೋಗುತ್ತದೆ, ನನಗೆ ಹೊಡೆದು ಹಾಕಿಬಿಡುತ್ತಾರೆ ಎಂದು ಹೇಳಿದ. ಆಗ ನೀನು ಹೋಗಿ ನೋಡು ಎಂದು ಕಳುಹಿಸಿದ, ಆಗ ತಾನೆ ಹುಟ್ಟಿದ ಮಗು 'ಪೂಜ್ಯರೇ, ನಿಮಗೆ ನಮಸ್ಕಾರ' ಎಂದು ಹೇಳಿತು 'ಈಗ ತಾನೇ ಹುಟ್ಟಿದ್ದೀಯ, ಏನು ನಮಸ್ಕಾರ ಎಂದು ಹೇಳುತ್ತಿದ್ದೀಯ? ಎಂದು ಹೇಳಿದ್ದಕ್ಕೆ 'ನೀವು ನೋಡಿದಾಗ ನಾನು ಹುಳುವಾಗಿದ್ದೆ, ಸತ್ತು ಹೋದೆ, ಕರುವಾಗಿದ್ದೆ ಸತ್ತು ಹೋದೆ, ಗಿಳಿ ಮರಿಯಾಗಿದ್ದೆ ಸತ್ತು ಹೋದೆ, ಈ ಮನುಷ್ಯ ಜನ್ಮ ಪಾವನವಾಗಿದೆ. ಸಂಸ್ಕಾರ ಪಡೆದ ಶಿಲೆ ಪೂರ್ತಿಯಾಗುತ್ತದೆ. ಸಂಸ್ಕಾರ ಪಡೆದ ಜಲ ತೀರ್ಥವಾಗುತ್ತದೆ. ಸಂಸ್ಕಾರ ಪಡೆದ ಅನ್ನ ಪ್ರಸಾದವಾಗುತ್ತದೆ. ಸಂಸ್ಕಾರ ಪಡೆದ ಮಾನವ ದೇವ ಮಾನವನಾಗುತ್ತಾನೆ. ಜನನವೆಂಬ ಮೂರು ಅಕ್ಷರದಲ್ಲ ಜನಿಸಿ, ಜೀವನವೆಂಬ ಮೂರು ಅಕ್ಷರಗಳಲ್ಲಿ ಜೀವಿಸಿ, ಮಾನವ ಎಂಬ ಮೂರು ಅಕ್ಷರದ ನಿನಗೆ ಮರಣ ಎಂಬ ಮೂರು ಅಕ್ಷರ ಬಂದಾಗ ಸಮಾಜ ಎಂಬ ಮೂರು ಅಕ್ಷರಕ್ಕೆ ನಿನ್ನ ಕೊಡುಗೆಯಾದರೂ ಏನು? ಆ ಕೊಡುಗೆಯನ್ನು ಕೊಟ್ಟಂತಹ ಜನ ಇಲ್ಲಿ ಅಭಿನಂದನೆಗೆ ಅರ್ಹರು. ಅವರ ಸಂತಾಪಕ್ಕೆ ಹರಿಕರು. ನಮ್ಮ ಜೊತೆಯಲ್ಲಿ ಯಾರೂ ಬರುವುದಿಲ್ಲ, ಯಾರೂ ಏನೂ ಹೊತ್ತುಕೊಂಡು ಹೋಗುವುದಿಲ್ಲ. ಸಾವು ನಮಗೆ ಕಟ್ಟಿಟ್ಟ ಬುತ್ತಿ. ಸಾವನ್ನು ಸ್ನೇಹಿತನಂತೆ ಸ್ವಾಗತಿಸಬೇಕು. ಅಂತಹ ಪರಿಸ್ಥಿತಿಯಲ್ಲಿ ಎಷ್ಟೋ ಜನ ತಪಸ್ಸಿನಲ್ಲಿ ಮುಳುಗಿ ಹೋಗಿದ್ದರು. ಪೂರ್ವ ಜನ್ಮದಿಂದ ಇಲ್ಲಿ ಬರುವುದಕ್ಕಾಗಲಿಲ್ಲ . ಆಯುಂ ವಿತ್ತಂ ಕರ್ಮಂಚ, ಇದೂ ಕೂಡ ಆಯಸ್ಸು, ವಿದ್ಯೆ ಕೆಲಸ, ಹಣ ಅಧಿಕಾರ ಇವೆಲ್ಲವೂ ತಾಯಿಯ ಗರ್ಭದಲ್ಲಿ ಬರೆದಿರುತ್ತದೆ. ಅವರೆಷ್ಟು ಧನವಂತರು, ಇವರೆಷ್ಟು ಯಶವಂತರು, ಇವರೆಷ್ಟು ಬಲವಂತರು ಎಂದು ನಿನಗೆಷ್ಟು ತಿಳಿದಿದೆ ಮಂಕುತಿಮ್ಮ ಎಂದು ಡಿವಿಜಿ- ಯವರು ಹೇಳುತ್ತಾರೆ. ಯೋಗಿ ತಂದದ್ದು ಯೋಗಿಗೆ, ಜೋಗಿ ತಂದದ್ದು ಜೋಗಿಗೆ, ಭೋಗಿ ತಂದದ್ದು ಬೋಗಿಗೆ, ನಾನು ತಂದದ್ದು ನನಗೆ, ಎಲ್ಲರೂ

ತಂದದ್ದು ಅವರವರಿಗೆ. ಆದಕಾರಣ ಸಾವಿನಲ್ಲೂ ಕೂಡ ನೆಮ್ಮದಿಯನ್ನು ಕಾಣುವ ಹಾಗೆ, ಕರುವು ಮಂದೆಯಲ್ಲಿ ತನ್ನ ತಾಯಿಯನ್ನು ಹುಡುಕಿಕೊಂಡು ಹೋದಹಾಗೆ ನಾವು ಮಾಡಿದ ಪಾಪ ಪುಣ್ಯಗಳನ್ನು ನಾವು ಸರಿಯಾದ ರೀತಿಯಲ್ಲಿ ಮಾಡಿಹೋಗಬೇಕು. ಯಾರು ಹಿತವರು ನಿನಗೆ, ಈ ಮೂವರೊಳಗೆ, ನಾರಿಯೋ ಧಾರಿಣಿಯೋ ಬಲುತನದ ಸಿರಿಯೋ, ಅನ್ಯರೊಳು ಜನಿಸಿದ್ದ ಅಂಗನೆಯ ಕರೆತಂದು ಮನೆಗಳ ಯಜಮಾನಿ ಎಂದು, ಬಿಲ್ಲಬಿತ್ತಣದಿ ಕೋಟೆ-ಕೊತ್ತಲೆಗಳನ್ನು ಕಟ್ಟಿ, ಯಮಕಿಂಕರು ಬಂದು ಒಂದು ದಿನ ಹೋಗುವಾಗ ನಿನ್ನ ಜೊತೆಗೆ ಇವರೆಲ್ಲ ಬರುವರೇ? ಒಡಲಿಗೆ ಒಡೆಯನಾದ ಪರಮಾತ್ಮನ ಒಡಲಲ್ಲಿ ಜನಿಸಿ ಧನ್ಯನಾಗು ಎನ್ನುವ ಮಾತನ್ನು ಹೇಳಿದ್ದಾರೆ. ಆದಕಾರಣ ಸಾಯುವ ಮೊದಲು ಸಾಲವನ್ನು ತೀರಿಸಿ ಹೋಗು, ಸಾಯುವ ಮೊದಲು ಸಮಾಜಕ್ಕೆ ಋಣವನ್ನು ತೀರಿಸಿಹೋಗು ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಆಕೆಲಸವನ್ನು ಮಾನ್ಯ ಪಟೇಲರು ಚೆನ್ನಾಗಿ ಮಾಡಿದ್ದಾರೆ. ಅದರಲ್ಲಿ ಜಾತಿ ಇರಲಿಲ್ಲ, ಅವರು ನೀತಿ ಇಟ್ಟುಕೊಂಡಿದ್ದರು. ಅವರು ಆ ಪಕ್ಷ ಈ ಪಕ್ಷ ಎಂದು ಹೇಳುತ್ತಿರಲಿಲ್ಲ. ಅಂತಹ ವ್ಯಕ್ತಿತ್ವವನ್ನು ಹೊಂದಿರತಕ್ಕಂತಹವರು ನಿಜವಾಗಿಯೂ ಅಪರೂಪದ ವ್ಯಕ್ತಿ ಎಂದು ಹೇಳುತ್ತೇನೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ನಾನು ಮೈಸೂರು ನಗರದ ಮಹಾ ಪೌರನಾಗಬೇಕಾದರೆ ಡಾ।। ಜೀವರಾಜ ಆಳ್ವರವರೇ ಕಾರಣ. ಅಲ್ಲಿ ಮಹಾ ಪೌರನಾಗಿ ಒಳ್ಳೆಯ ಕೆಲಸ ಮಾಡಿ ಅತ್ಯುತ್ತಮ ಮೇಯರ್ ಎಂದು ಹೇಳಿಸಿಕೊಂಡು ನಾನು ಈ ಸದನಕ್ಕೆ ಬಂದಿದ್ದೇನೆ. ಅವರೂ ಕೂಡ ಒಳ್ಳೆಯ ಕೆಲಸಗಳನ್ನು ಮಾಡಿದ್ದರು. ಅವರ ಆತ್ಮಕ್ಕೂ ಕೂಡ ಶಾಂತಿ ಸಿಗಲಿ. ಮತ್ತು ಈ ಸಂತಾಪ ಸೂಚನೆಯಲ್ಲಿ ತಂದಿರತಕ್ಕಂತಹ ಎ.ರಾಮಣ್ಣನವರು, ಇವರು ಬಹಳ ದಿಟ್ಟತನದ ವ್ಯಕ್ತಿ. ತನ್ನ ಬದುಕಿನುದ್ದಕ್ಕೂ ಛಲದಂಕಮಲ್ಲನಂತೆ ಕೆಲಸ ಮಾಡಿದವರು. ಶ್ರೀಮತಿ ಕೆಂಪಮ್ಮ, ಶ್ರೀ ಮೃತ್ಯುಂಜಯಪ್ಪ, ಶ್ರೀ ವೆಂಕಟರಾಮಯ್ಯ, ಶ್ರೀ ಜೆ.ಎಸ್.ಬಸವರಾಜು, ಶ್ರೀ ಎಸ್.ಪಾಟೀಲ್ ಶ್ರೀ ಎಮ್. ಬಸಪ್ಪ, ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರಿ, ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆ ಸುರಯೇ ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಗೆ, ಎಲ್ಲರೊಳಗೊಂದಾಗು ಮಂಕುತಿಮ್ಮ ಎಂದು ಹೇಳಿ ಭಗವಂತ ಅವರೆಲ್ಲರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಮತ್ತೊಮ್ಮೆ ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ.ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಅಧ್ಯಕ್ಷರೆ, ಇವತ್ತು ತಾವು ಮಂಡಿಸಿರತಕ್ಕಂತಹ ಸಂತಾಪ ಸೂಚನೆ ಪರವಾಗಿ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ಇವತ್ತು ಗುಜರಾತಿನಲ್ಲಿ ಆದಂತಹ ಭೀಕರ ಕಷ್ಟನಷ್ಟಗಳನ್ನು, ಸಾವುನೋವುಗಳನ್ನು ನೋಡಿದಾಗ ನಮ್ಮ ಮನಸ್ಸಿಗೆ ನೋವಾಗುತ್ತದೆ. ಈ ಪರಿಸ್ಥಿಯಲ್ಲಿ ಇರುವಂತಹವರಿಗೆ ನಮ್ಮ ರಾಜ್ಯದಲ್ಲಿ ಬಹಳಷ್ಟು ಸಾಹಯಾ ಸಹಕಾರ ಕಷ್ಟದಲ್ಲಿ ಸಿಲುಕಿರುವಂತಹ ಜನರಿಗೆ ಸಿಕ್ಕಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದಾಗ ನನಗೆ ಬಹಳ ಸಂತೋಷವಾಯಿತು. ದೇಶ ವಿದೇಶಗಳಿಂದ ಕೂಡ ಅವರಿಗೆ ಸಹಾಯ ದೊರಕಿದೆ. ಆದರೆ ಕೆಲವರು ಇದಕ್ಕೆ ರಾಜಕೀಯ ಲೇಪವನ್ನು ಕೂಡ ಹಾಕಿದ್ದು ಉಂಟು. ಯಾರು ಕಷ್ಟದಲ್ಲಿದ್ದು, ಬದುಕು ಸಾವುಗಳ ಮಧ್ಯೆ ಹೋರಾಡುತ್ತಿರುವಾಗ ಅದಕ್ಕೆ ರಾಜಕೀಯ ಲೆಪನವನ್ನು ಮಾಡುವುದು ತಪ್ಪು ಎಂದು ನನ್ನ ಭಾವನೆ ವ್ಯಕ್ತಪಡಿಸುತ್ತಾ, ಒಬ್ಬ ಅಬಲೆ ರಾತ್ರಿ 10 ಗಂಟೆಯಲ್ಲಿ ಹೋಗುತ್ತಿದ್ದಾಗ ಇಬ್ಬರು, ಮೂವರು ಜನರು ಸೇರಿ ಕಷ್ಟ ಕೊಟ್ಟರೆ

ಎಷ್ಟು ತಪ್ಪಾಗುತ್ತದೋ ಅದೇ ರೀತಿಯಲ್ಲಿ ಗುಜರಾತಿನಲ್ಲಿ ಸಾವುನೋವುಗಳಿಂದ ಬದುಕುಳಿದ ಜನರಿಗೆ ಕ್ರೂರವಾದ ರಾಜಕೀಯ ಲೇಪಕಟ್ಟುವುದು, ಯಾವುದೇ ಪಕ್ಷವಾಗಲಿ ಮಾಡಬಾರದಾಗಿತ್ತು, ಅದನ್ನು ತಿದ್ದಿಕೊಳ್ಳಬೇಕೆಂದು ಈ ಸಮಯದಲ್ಲಿ ನಾನು ಹೇಳುತ್ತಾ, ಗುಜರಾತಿಯಲ್ಲಿ ಆದಂತಹ ಭೂಕಂಪಕ್ಕೆ, ವಿಜ್ಞಾನ ಇವತ್ತು ಬಹಳಷ್ಟು ಬೆಳೆದಿದೆ. ಇಂಟರ್(ಐಟಿ)ನೆಟ್‌ನಲ್ಲಿ ಇಷ್ಟು ಮುಂದುವರೆದಿದ್ದರೂ ಕೂಡ ಭೂಕಂಪಕ್ಕೆ ಕಾರಣ ಕಂಡು ಹಿಡಿಯುವುದಕ್ಕೆ ಸಾಧ್ಯವಾಗಷ್ಟು ನಾವು ವಿಜ್ಞಾನದಲ್ಲಿ ಹಿಂದಿದ್ದೇವೆ. ಇದನ್ನೂ ಕೂಡ ನಾವು ಚಿಂತಿಸಬೇಕಾದಂತಹ ವಿಷಯ. ಈ ದಿಕ್ಕಿನಲ್ಲಿ ನಮ್ಮ ದೇಶ ಹಾಗೂ ನಮ್ಮ ರಾಜ್ಯ ಅದಕ್ಕೆ ಹೆಚ್ಚಿನ ಒತ್ತು ಕೊಟ್ಟು ಚಿಂತಿಸಬೇಕೆಂದು ಈ ಸಮಯದಲ್ಲಿ ಹೇಳಿ, ಯಾರ್‍ಯಾರು ಆ ಭೂಕಂಪದಲ್ಲಿ ಸತ್ತಿದ್ದಾರೆ ಅವರಿಗೆ ನನ್ನ ದುಃಖವನ್ನು ವ್ಯಕ್ತಪಡಿಸುತ್ತೇನೆ. ಅಲ್ಲಿ ಮೃತರಾದವರ ಆತ್ಮಗಳಿಗೆ ಶಾಂತಿಯನ್ನು ದೇವರು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಇನ್ನು ಜೆ.ಹೆಚ್.ಪಟೇಲ್‌ರವರ ಬಗ್ಗೆ ಈಗಾಗಲೇ ಹಲವಾರು ಸದಸ್ಯರುಗಳು ಮಾತನಾಡಿದ್ದಾರೆ. ನಾನು ಕೂಡ ಅವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಹಿಂದೆ ನಡೆದ ಲೋಕಸಭಾ ಚುನಾವಣೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಯೊಬ್ಬರು ಯಾವುದೋ ಒಂದು ಮೀಟಿಂಗ್‌ಗೆ ಅಟೆಂಡ್ ಆಗದಿರುವ ಕಾರಣಕ್ಕೆ ಅವರನ್ನು ಸಸ್ಪೆಂಡ್ ಮಾಡಲಾಗಿತ್ತು. ಅವರನ್ನು ರೀ-ಇನ್‌ಸ್ಟೇಟ್ ಮಾಡಬೇಕೆಂದು ಪಟೇಲ್‌ರವರಿಗೆ ಪತ್ರವೊಂದನ್ನು ಬರೆದು ಅವರನ್ನು ಭೇಟಿಯಾಗಲು ಹೋದೆ. ಆಗ ಅವರು ಹಾಸಿಗೆಯ ಮೇಲೆ ಮಲಗಿದ್ದರು. ಅವರಿಂದ ಪತ್ರದಲ್ಲಿ ರೀ-ಇನ್‌ಸ್ಟೇಟ್ ಎಂದು ಬರೆಸಬೇಕು ಎಂದುನನ್ನ ಯೋಚನೆ ಇತ್ತು. ಅವರು ನನಗೆ ಕುಳಿತುಕೊಳ್ಳಲು ಹೇಳಿದರು. ನಾನು ಅವರಿಗೆ ವಿಷಯವನ್ನು ಹೇಳಿದ ಮೇಲೆ ನನಗೆ ಅವರು, 'ನೀನೇ, ಏನು ಬರೆಯಬೇಕು ಎಂಬುದನ್ನು ನೀನೇ ಬರೆದುಬಿಡು' ಎಂದು ಹೇಳಿ ಅವರ ಕೈಯಲ್ಲಿ ಸಹಿಯನ್ನು ಹಾಕಿಸಿಕೊಳ್ಳುವ ಹಾಗೆ ಶಾಸಕನಾದ ನನಗೆ ಬರಲಿ ಅವಕಾಶ ಕೊಟ್ಟಾಗ ಆಗ ನಮಗೇ ಕಾನೂನು ಬಿಟ್ಟು ಹೋಗಬಾರದು ಎನ್ನುವಂಥ ಚಿಂತನೆಯನ್ನು ನನ್ನ ಮನಸ್ಸಿನಲ್ಲಿ ಅಂದು ಜೆ.ಹೆಚ್.ಪಟೇಲ್‌ರವರು ತಂದರು. ಅವರು ಹಾಸ್ಯ ಚಟಾಕಿಗಳನ್ನು ಅರ್ಥಗರ್ಭಿತವಾಗಿಯೆ ಹೇಳುತ್ತಿದ್ದರು. ಅವರು ಒಮ್ಮೆ ಚರ್ಚೆ ನಡೆಯುತ್ತಿದ್ದಾಗ ಆ ಹೊತ್ತಿಗೆ ಒದಗಿದ ಮಾತು ಸತ್ತವನು ಎದ್ದು ಬಂದಂತೆ ಎಂದು ಹೆಳಿದ ಪ್ರಾವರ್ಬ್ ನನಗೆ ಈಗ ನೆನಪಿಗೆ ಬರುತಿದ್ದೆ. ಈಗತಾನೆ ಎದ್ದು ಹೋದ ಮಾನ್ಯ ಖರ್ಗೆಯವರು ಹಿಂದೆ ಈ ಕಡೆಯಲ್ಲಿ ಕುಳಿತಿದ್ದಾಗ ಪ್ರೊಹಿಬಿಷನ್ ಬಗ್ಗೆ ಮೂರ್‍ನಾಲ್ಕು ದಿವಸಗಳ ಕಾಲ ಚರ್ಚೆಯಾಗಿತ್ತು; ಸರ್ಕಾರಕ್ಕೆ ಬರುವ ಮೊದಲು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಹಾಗೆ ಪ್ರೊಹಿಬಿಷನ್ ನಿಲ್ಲಿಸಬೇಕೆಂದು ಅದರ ಬಗ್ಗೆಯೇ ಮೂರ್‍ನಾಲ್ಕು ದಿವಸಗಳ ಕಾಲ ಚರ್ಚೆಯನ್ನು ಮಾಡಲಾಯಿತು. ಕಡೆಗೆ ಜೆ.ಹೆಚ್.ಪಾಟೀಲ್ ರವರು ಎದ್ದು ನಿಂತು ಚೈನಾ ದೇಶವನ್ನು ಕಂಪೇರ್ ಮಾಡಿ ಹೇಳುತ್ತಾ, ಚೈನಾದಲ್ಲಿ ಜನಾಂಗಿನಿಯನ್ನು ಅವರು ಮಾಡಿದ್ದಾರೆ, ಈಗ ಪ್ರೊಹಿಷನ್ ಕೂಡ ಮಾಡಿದರೆ ಅಲ್ಲಿ ಜನಗಳಿಗೆ ಹುಚ್ಚು ಬಂದು ಬಿಡುತ್ತದೆಯಾದ ಕಾರಣ ಪ್ರೊಹಿಷನ್ ಮಾಡಬಾರದು ಎಂದು ಒಂದೇ ವಾಕ್ಯವನ್ನು ಹೇಳಿ ಕುಳಿತುಕೊಳ್ಳುವಾಗ ವಿರೋಧಪಕ್ಷದ ನಾಯಕರಾಗಿದ್ದ ಮಾನ್ಯ ಖರ್ಗೆಯವರು ಮಾತನಾಡಿ ಪ್ರೊಹಿಬಿಷನ್ ಬಗ್ಗೆ ಮೂರ್‍ನಾಲ್ಕು ದಿವಸಗಳ ಕಾಲ ಚರ್ಚೆ ಮಾಡಿದರೂ ನೀವು ಮೂರೇ ಮೂರು ನಿಮಿಷದಲ್ಲಿ ಬಾಂಬ್ ಹಾಕಿಬಿಟ್ಟು ನಮ್ಮ ಬಾಯಿಯನ್ನು ಮುಚ್ಚಿಸಿಬಿಟ್ಟಿರಿ ಎಂದು ಹೇಳಿದರು. ಅಂದರೆ 'ಆ ಹೊತ್ತು ಒದಗಿದ ಮಾತು ಸತ್ತವನು ಎದ್ದು

ಬಂದಂತೆ ' ಎನ್ನುವ ಪ್ರೊವರ್ಬ್‌ನಲ್ಲಿಯ ಸಮಯ ಪ್ರಜ್ಞೆ ಜೆ.ಹೆಚ್.ಪಟೇಲ್‌ರಿಗಲ್ಲದೇ ಯಾರಲ್ಲೂ ಬರುವುದಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅವರು ದೆಹಲಿಯಲ್ಲಿದ್ದಾಗ ನಾನು ಅನೇಕ ಬಾರಿ ಹೋಗಿ ಕಂಡಿದ್ದೆ. ದುರಾದೃಷ್ಟವಶಾತ್ ಅವರು ಸತ್ತ ದಿನ ನಾನು ಈ ದೇಶದಲ್ಲಿರಲಿಲ್ಲ. ವೆಬ್‌ಸೈಟ್‌ನಲ್ಲಿ ವಿಷಯವನ್ನು ತಿಳಿತು ನಾನು ಅವರನ್ನು ನೋಡಲೇಬೇಂಕೆಂದು ಬಹಳ ಪ್ರಯತ್ನಪಟ್ಟೆ, ಆದರೆ ಅದಕ್ಕೆ ಅವಕಾಶವೇ ಸಿಗಲಿಲ್ಲ. ಅವರು ಯಾವುದೇ ಜಾತಿ-ಮತಗಳ ಬಗ್ಗೆ ಭೇದಭಾವವನ್ನು ಹೊಂದಿರಲಿಲ್ಲ. ಅವರು ಮೂರುವರೆ ವರ್ಷಗಳ ಅಧಿಕಾರಾವಧಿಯಲ್ಲಿ ಆರು ತಿಂಗಳನ್ನು ಬಿಟ್ಟರೆ ಉಳಿದ ಮೂರು ವರ್ಷಗಳಲ್ಲೂ ಅವರ ಮೇಲೆ ನಮ್ಮ ಪಕ್ಷದ ಭಿನ್ನಮತೀಯ ಚಟುವಟಿಕೆಗಳೇ ನಡೆಯುತ್ತಿದ್ದವು. ಅವುಗಳನ್ನು ಮುಖ್ಯಮಂತ್ರಿಪದವಿಯಿಂದ ತೆಗೆಯಬೇಕೆಂದು ಎಲ್ಲ ರೀತಿಯ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಿದ್ದಾಗಲೂ ಕೂಡ ಜೆ.ಹೆಚ್.ಪಟೇಲ್‌ರು ಅದರ ಬಗ್ಗೆ ಒಂದು ದಿನವೂ ಕೂಡ ಯೋಚನೆ ಮಾಡುತ್ತಿರಲಿಲ್ಲ. ಆ ರೀತಿಯ ಧೈರ್ಯವನ್ನು ಹೊಂದಿದ್ದ ವ್ಯಕ್ತಿಯನ್ನು ಇವೊತ್ತಿನ ದಿವಸ ನಾವುಗಳೆಲ್ಲರೂ ಕಳೆದುಕೊಂಡಿದ್ದೇವೆ. ಅವರನ್ನು ಯಾವುದಾದರೂ ಸಾಯಂಕಾಲದ ಹೊತ್ತಿನಲ್ಲಿ ಯಾರೇ ಶಾಸಕರು ನೋಡಲು ಹೋದರೆ ''ನೀನು ಒಂದು ಪೆಗ್ ಹಾಕು'' ಎಂದು ಹೇಳುತ್ತಿದ್ದರು. ಅಂದರೆ ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಮುಖ್ಯಮಂತ್ರಿಯಾಗಿದ್ದರೂ ಕೂಡ ಯಾರಿಗೂ ಭೇದಭಾವದಿಂದ ಅವರು ನೋಡುತ್ತಲೇ ಇರಲಿಲ್ಲ. ಇಂಥ ವ್ಯಕ್ತಿಯನ್ನು ಕಳೆದುಕೊಂಡಿರುವುದು ನನಗೆ ಬಹಳ ನೋವಾಗಿದೆಯೆಂದು ಹೇಳಬಯಸುತ್ತೇನೆ. ಇನ್ನು ಎರಡನೆಯದಾಗಿ ನಮ್ಮ ಪಕ್ಷದಲ್ಲಿ ಮುಂಚೂಣಿಯಲ್ಲಿದ್ದ ಲಕ್ಷ್ಮೀನರಸಿಂಹಯ್ಯನವರು ಕೂಡ ಮೃತರಾಗಿದ್ದಾರೆ. ಇನ್ನು ಮೂರನೆಯದಾಗಿ ಸ್ಫೂರ್ತಿದಾಯಕ ಹಾಗೂ ಶಕ್ತಿದಾಯಕ ನಾಯಕರಾಗಿದ್ದ ಜೀವರಾಜ ಆಳ್ವರವರು ಕೂಡ ಇಂದು ನಮ್ಮನ್ನಗಲಿದ್ದಾರೆ. ಅವರು ಎಂದಿಗೂ ಕೂಡ ದಿಟ್ಟತನದಿಂದ ವರ್ತಿಸಿ ಯೋಚನೆಗೆ ಅವಕಾಶವನ್ನೇ ಮಾಡುತ್ತಿರಲಿಲ್ಲ. ಮಾನ್ಯ ಚಂದ್ರೇಗೌಡರು ವಿರೋಧಪಕ್ಷದ ನಾಯಕರಾಗಿದ್ದಾಗ ಅವರನ್ನು ತೆಗೆಯಬೇಕೆಂದು ಏನೇನು ಮಡಬೇಕೋ ಅವೆಲ್ಲವನ್ನೂ ಮಾಡಿ ಕೊನೆಗೆ ತೆಗೆಸಿದರು. ಅವರನ್ನು ತೆಗೆಸಿದ ಮೇಲೆ ಜೀವರಾಜಾಳ್ವರವರು ಚಂದ್ರೇಗೌಡರನ್ನು ಕಂಡು 'ನಿಮ್ಮನ್ನು ತೆಗೆಸಿ ಬಹಳ ತಪ್ಪು ಮಾಡಿದೆ' ಎಂದುಹೇಳಿದ್ದರು. ಇದನ್ನು ನನ್ನ ಮುಂದೆಯೂ ಕೂಡ ಹೇಳಿದ್ದರು. ಇಂಥ ಒಳ್ಳೆಯ ವ್ಯಕ್ತಿತ್ವದ ಮನುಷ್ಯನನ್ನು ಅಕಾಲಮರಣ ಬಲಿತೆಗೆದುಕೊಂಡುಬಿಟ್ಟಿದೆ. ಇನ್ನು ನಾಲ್ಕನೆಯದಾಗಿ ನಮ್ಮನ್ನು ವಿದ್ಯಾರ್ಥಿದೆಸೆಯಲ್ಲಿಯೇ ಕಮ್ಯುನಿಸ್ಟ್ ತತ್ವಕ್ಕೆ ಎಳೆದು ತಂದ ಆರ್.ವೆಂಕಟರಾಮಯ್ಯನವರು ಕೂಡ ಮೃತರಾಗಿದ್ದಾರೆ. ಅವರು ಆಗಲೇ ಭೂ-ಒಡೆತವನ್ನು ವಿರೋಧ ಮಾಡಿ ಜೋಡಿ ಇನಾಮ್ ಗ್ರಾಮಗಳ ರದ್ಧತಿಗೆ ಆದ್ಯತೆಯನ್ನು ಕೊಟ್ಟಿದ್ದರು. ಇವರನ್ನು ಹಾಗೂ ವೆಂಕಟಗಿರಿಯಪ್ಪನವರನ್ನು ನಾವುಗಳು ನೆನೆಯಬೇಕು. ಅವರುಗಳು ಮಾಡಿದ ಹೋರಾಟ ಹಾಗೂ ಪ್ರತಿಭಟನೆಗಳ ಫಲವಾಗಿಯೇ ಉಳುವವನು ಭೂಮಿಯ ಒಡೆಯನಾಗಲು ಕಾರಣವಾಗಿದೆ. ಇವರುಗಳಲ್ಲದೇ ದಿವಂಗತರುಗಳಾದ , ಶ್ರೀಮತಿ ಟಿ.ಕೆಂಪಮ್ಮ, ಶ್ರೀ ಮೃತ್ಯುಂಜಯಪ್ಪ, ಶ್ರೀ ಬಸವರಾಜು, ಶ್ರೀ ಎಸ್.ಎ.ಪಾಟೀಲ್.' ಶ್ರೀ ಬಸಪ್ಪನವರು , ಶ್ರೀ ಎ.ರಾಮಣ್ಣವರುಗಳ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ.ಚೆನ್ನಿಗಪ್ಪ (ಕೊರಟಗೆರೆ):- ಮಾನ್ಯ ಅಧ್ಯಕ್ಷರೇ, ತಾವು ತಂದಿರುವ ಸಂತಾಪ ಸೂಚನೆಯ ಪ್ರಸ್ತಾವಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಈ ವರ್ಷದ ಜನವರಿ 26ರಂದು ಗುಜರಾತ್‌ನಲ್ಲಿ ಸಂಭವಿಸಿದ ಭೂಕಂಪದಿಂದ ಇಡೀ ರಾಷ್ಟ್ರವೇ ಕಣ್ಣೀರಿನ ಕಂಬನಿಗೆರೆದು ಅವರ ನೆರವಿಗೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು, ಶಾಸಕರುಗಳು ಹಾಗೂ ಸಂಘ ಸಂಸ್ಥೆಗಳು ಮುಂದಾಗಿರುವುದನ್ನು ಹೇಳಿ ಹಲವಾರು ಸದಸ್ಯರುಗಳು ತಮ್ಮದೇ ಆದ ಮಾತುಗಳನ್ನು ಈಗಾಗಲೇ ಸಭೆಯಲ್ಲಿ ಹೇಳಿದ್ದಾರೆ. ಗುಜರಾತ್ ಭೂಕಂಪದಲ್ಲಿ ಮಡಿದ ಕುಟುಂಬ ವರ್ಗದವರಿಗೆ ಕರ್ನಾಟಕ ರಾಜ್ಯ ಸಹಾಯ ಹಸ್ತವನ್ನು ನೀಡಿ ತನ್ನದೇ ಅದ ಅತ್ಯುತ್ತಮ ಹೆಸರನ್ನು ಈಗಾಗಲೇ ಪಡೆದು ಕೊಂಡಿದೆ. ಇನ್ನು ಮುಂದೆ ಪರಮಾತ್ಮನು ಇಂಥ ಕೆಟ್ಟ ಘಟನೆಗೆ ಅವಕಾಶ ಮಾಡಿಕೊಡಬಾರದೆಂದು ನಾನು ಪರಮಾತ್ಮನಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಧೀಮಂತ ರಾಜಕಾರಣಿ, ಅತ್ಯುತ್ತಮ ಮುಖ್ಯಮಂತ್ರಿ ಹಾಗು 7 ಹೊಸ ಜಿಲ್ಲೆಗಳನ್ನು ರಚನೆ ಮಾಡಲು ಕಾರಣಕರ್ತರಾಗಿದ್ದ ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರು ದಿವಂಗತರಾಗಿದ್ದಾರೆ. ಈವರು ನಮ್ಮ ನಾಯಕರೂ ಕೂಡ ಆಗಿದ್ದರೆ. ಹಿಂದೆ ಸಂಸತ್ ಸದಸ್ಯರಾಗಿ ಲೋಕಸಭೆಯಲ್ಲಿ ಕನ್ನಡದಲ್ಲಿ ಭಾಷಣ ಮಾಡಿ ಪ್ರಾದೇಶಿಕ ಭಾಷೆಗೆ ವಿಶೇಷ ಮಹತ್ವವನ್ನು ತಂದುಕೊಟ್ಟಂಥ ಮೊದಲ ಕನ್ನಡಿಗರಾಗಿದ್ದರು. ನಾವು ಹೊಸದಾಗಿ ಶಾಸಕನಾಗಿ ಬಂದಾಗ, ನಮಗೆ ತಿಳಿವಳಿಕೆ ಹೇಳುವ ಜೊತೆಗೆ, 'ಚೆನ್ನಿಗಪ್ಪನವರೆ, ನೀವು ಇನ್ನೂ ಕಲಿಯಬೇಕಾದ್ದು ಬಹಳ ಇದೆ, ಮೊದಲು ನಿಮ್ಮ ಕ್ಷೇತ್ರದಲ್ಲಿ ಚೆನ್ನಾಗಿ ಕೆಲಸವನ್ನು ಮಾಡಬೇಕು, ಸಾರ್ವಜನಿಕ ಮಹತ್ವದ ಯಾವುದೇ ಕೆಲಸವಿದ್ದರೂ ಹೇಳಿ, ಅದನ್ನು ನಾನು ಮಾಡಿಸಿಕೊಡುತ್ತೇನೆ ' ಎಂದು ಹೇಳಿದ್ದರು. ನಮ್ಮನ್ನು ಮಕ್ಕಳ ಹಾಗೆ ನೋಡುತ್ತಿದ್ದರು. ಹೊಸ ಶಾಸಕರಿಗೆ ಸದನದಲ್ಲಿ ಮಾತನಾಡಲು ಮುಗುಗರವಾಗುತ್ತಿದ್ದದ್ದನ್ನು ಕಂಡು ಪಟೇಲರೇ ಹತ್ತಿರ ಕರೆದು ಮುಜುಗರತನವನ್ನು ಹೋಗಲಾಡಿಸಿ ನಾವು ಕಾರ್ಯೋನ್ಮುಖರಾಗುವಂತೆ ಮಾಡಿದ್ದರು. ಇವರು ಕೆ.ಇ.ಬಿ.ಯಲ್ಲಿ ಕೂಡ ಅನೇಕ ಸುಧಾರಣೆಗಳನ್ನು ತಂದಿದ್ದರು. ರೈತರಿಗೆ ವಿದ್ಯುತ್ ವಲಯದಿಂದ ಆಗುತ್ತಿದ್ದ ಅನ್ಯಾಯವನ್ನು ಸರಿಪಡಿಸಲು ಈ ವಲಯಕ್ಕೆ ಹೆಚ್ಚು ಹಣವನ್ನು ಒದಗಿಸಿ ವಿದ್ಯುಚ್ಛಕ್ತಿ ಸರಬರಾಜು ಸುಗಮಗೊಳ್ಳಲು ಕಾರಣರಾಗಿದ್ದರು. ಇದರಿಂದ ಎಲ್ಲ ರಂಗಗಳಲ್ಲಿ ಅಭಿವೃದ್ಧಿಯನ್ನು ತಂದುಕೊಟ್ಟು ರಾಜ್ಯಕ್ಕೆ ಕೀರ್ತಿಪತಾಕೆಯನ್ನು ಹಾರಿಸಿದ ಜೆ.ಹೆಚ್.ಪಟೇಲ್‌ರವರನು ನಾನಂತೂ ಹೃದಯಪೂರ್ವಕವಾಗಿ ಸ್ಮರಿಸಿಕೊಳ್ಳುವುದರ ಜೊತೆಗೆ ಇಂಥವರನ್ನೇ ಮುಂದೆಯೂ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ. ರಾಜಕಾರಣದಲ್ಲಿ ಒಬ್ಬರನ್ನು ತುಳಿದು ಮೇಲೆ ಬರಬೇಕು ಎನ್ನುವುದೇ ಹೆಚ್ಚಾಗಿರುವಂಥ ಈ ಕಾಲದಲ್ಲೂ ಕೂಡ ಜೆ.ಹೆಚ್.ಪಟೇಲ್‌ರು ಅಂಥ ವ್ಯಕ್ತಿತ್ವವನ್ನು ಹೊಂದಿಲ್ಲದೇ ಇನ್ನೊಬ್ಬರು ಮುಂದೆ ಬರಲಿ, ಬೇರೆಯವರು ಮುಖ್ಯಮಂತ್ರಿಗಳಾಗಲಿ ಎನ್ನುವ ಮನೋಭಾವನೆಯನ್ನು ಹೊಂದಿದ್ದರು. ಯಾವುದೇ ಪಕ್ಷದ ಶಾಸಕರು ಕೊಟ್ಟ ಪತ್ರಕ್ಕೂ ಕೂಡಲೇ ಕೆಲಸವನ್ನು ಮಾಡಿಸಿಕೊಡುವ ಸಹಮತದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಇವರ ಅಗಲಿಕೆಯಿಂದ ರಾಜ್ಯಕ್ಕೆ ಮಾತ್ರವಲ್ಲ, ಇಡೀ ರಾಷ್ಟ್ರಕ್ಕೇ ತುಂಬಲಾಗದ ನಷ್ಟವುಂಟಾಗಿದೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಪರಮಾತ್ಮನು ಕೊಡಲೆಂದು ಪ್ರಾರ್ಥಿಸುತ್ತೇನೆ. ಇನ್ನು ಯುವ ಮುಖಂಡರು, ಯುವ ನೇತಾರರು, ಶಾಸಕರು, ಮಂತ್ರಿಗಳಾಗಿದ್ದ ಮಾನ್ಯ ಜೀವರಾಜ ಆಳ್ವರವರು

ಕೂಡ ನಿಧನರಾಗಿದ್ದಾರೆ. ಇವರು 1994ನೇ ಇಸವಿಯಲ್ಲಿ ನಮ್ಮ ಪಕ್ಷದಲ್ಲಿದ್ದರು. ಆಗ ನಮ್ಮ ಕ್ಷೇತ್ರಕ್ಕೆ ಬಂದಿದ್ದಾಗ ಬಡ ರೈತನ ಮಗನಿಗೆ ಚುನಾವಣೆಯಲ್ಲಿ ನಿಲ್ಲಲು ಟಿಕೆಟ್ ಕೊಡುವುದಾಗಿ ಹೇಳಿನನಗೆ ಟಿಕೆಟ್ ಕೊಡಿಸಿದ್ದರು. ಇವರು ಒಬ್ಬ ಮಹಾನ್ ವ್ಯಕ್ತಿಯೇ ಆಗಿದ್ದರು. ಯುವಸ್ಫೂರ್ತಿಯಾಗಿ ಬೆಳೆದಂತಹ ಮಹಾಚೇತನ ಜೀವರಾಜ್ ಆಳ್ವಅವರು. ಅವರೂ ಸಹ ನಮ್ಮನ್ನು ಅಗಲಿದ್ದಾರೆ. ಇದರಿಂದ ತುಂಬಲಾರದ ನಷ್ಟವುಂಟಾಗಿದೆ. ಅವರಿಗೂ ಸಹ ನನ್ನ ಸಹಾನುಭೂತಿಯನ್ನು ವ್ಯಕ್ತ ಮಾಡುತ್ತಾ, ಇನ್ನಿತರ ಗಣ್ಯರಾದ ಶ್ರೀಮತಿ ಟಿ.ಕೆಂಪಮ್ಮ, ಶ್ರೀ ಮೃತ್ಯುಂಜಯಪ್ಪ, ಕೆ.ಎಸ್. ಪಾಟೀಲ್, ಶ್ರೀ ಎಂ.ಬಸಪ್ಪ ಮತ್ತು ಶ್ರೀ ಎ. ರಾಮಣ್ಣ ಇವರೆಲ್ಲರ ಬಗ್ಗೆ ಬಹಳ ಉತ್ತಮವಾಗಿ ನಾಯಕರೆಲ್ಲಾ ಸ್ಪಂದನೆ ಮಾಡಿದ್ದಾರೆ. ಪರಮಾತ್ಮ ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಯಾವಗಲ್ (ನರಗುಂದ):- ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಮಂಡಿಸಿದ ಪ್ರಸ್ತಾವಕ್ಕೆ ನನ್ನ ಬೆಂಬಲವನ್ನು ವ್ಯಕ್ತಮಾಡುತ್ತಾ, ಗುಜರಾತ್ ಭೂಕಂಪದಲ್ಲಿ ಮಡಿದಂತಹ ಕುಟುಂಬದವರಿಗೆ ಸಾಂತ್ವಾನವನ್ನು ವ್ಯಕ್ತ ಮಾಡುತ್ತಾ, ನಮ್ಮ ವ್ಯವಸ್ಥೆಯಲ್ಲಿ ಮತ್ತು ಮಾನವೀಯ ಸ್ವಭಾವದಲ್ಲಿ ಆಗಬಹುದಾದಂತಹ ನಿದರ್ಶನಗಳನ್ನು ನಾವು ನೋಡಿದರೆ ನಾವೂ ಸಹ ಯಾವುದೂ ನಿಶ್ಚಿತವಲ್ಲದಂತಹ ಪರಿಸ್ಥಿತಿಯಲ್ಲಿ ಇದ್ದೇವೆಂದು ನಮಗೆ ಗೊತ್ತಿದೆ. ಇವತ್ತು ಜಗತ್ತಿನಲ್ಲಿ ಅನೇಕ ಕಡೆ ಭೂ ಆಗುತ್ತಿರುವುದನ್ನು ನೋಡಿದಾಗ ನಮ್ಮ ದೇಶದಲ್ಲಿ ದಕ್ಷಿಣಭಾಗ, ಭೂಕಂಪ ಆಗದಂತಹ ಪ್ರದೇಶ ಡೆಕ್ಕನ್ ಪ್ಲಾಟೋ ಎನ್ನುವ ಭಾವನೆ ಇತ್ತು. ಆದರೆ ಕಿಲಾರಿಯಲ್ಲಿ ಆದದ್ದನ್ನು ನೋಡಿದಾಗ ನಮಗೆ ಇದು ಎಲ್ಲಿಯಾದರೂ ಆಗಬಹುದು ಎಂದು ಅನಿಸಿತ್ತು. ಹೀಗಾಗಿ ಇದು ಎಲ್ಲಿ ಆಗಬಹುದು ಎನ್ನುವುದರ ಬಗ್ಗೆ ಸೂಚನೆ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವ ವಿಜ್ಞಾನಿಗಳ ತರ್ಕ ಮತ್ತು ಅನುಭವದಿಂದ ಈ ಭೂಕಂಪ ಎಲ್ಲಿಯಾದರೂ ಆಗಬಹುದು ಎನ್ನುವ ಅಭಿಪ್ರಾಯಕ್ಕೆ ಬಂದಿದ್ದೇವೆ. ಗುಜರಾತ್‌ನಲ್ಲಿ ಆದಂತಹ ಘಟನೆ ಬಗ್ಗೆ ಹೇಳುವುದಾದರೆ ಅದು ತಪ್ಪಾಗುವುದಿಲ್ಲ ಎಂದು ಭಾವಿಸಿ, ಭುಜ್ ನಗರ ಬಹುತೇಕ ಬಂಗಾರ ಮತ್ತು ವಜ್ರಗಳನ್ನು ಮಾರುವಂತಹ ಉದ್ಯಮವಾಗಿ ಬೆಳೆದಿತ್ತು. ಇಲ್ಲಿಂದ ಅಲ್ಲಿಗೆ ಹೋದಂತಹವರು ಹೇಳುತ್ತಿದ್ದರು. ಅಲ್ಲಿ ಅಂದು ನಡೆದಂತಹ ಘಟನೆಯಲ್ಲಿ ಈ ಉದ್ಯೋಗ ಮಾಡುವಂತಹ ಉದ್ಯಮಿಗಳೆಲ್ಲಾ ಭೂಮಿಯಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟರು. ಒಬ್ಬ ಬಂಗಾರ ಮತ್ತು ವಜ್ರ ವ್ಯಾಪಾರ ನಡೆಸುವಂತಹ ಜಾಗದಲ್ಲಿ ಐದು ಟನ್ ಬಂಗಾರ ಇತ್ತು. ಒಬ್ಬ ವಯೋವೃದ್ಧ ತನ್ನ ಮೊಮ್ಮಕ್ಕಳೊಂದಿಗೆ ಆ ಜಾಗಕ್ಕೆ ಹೋಗಿ ಆ ಐದು ಟನ್ ಬಂಗಾರವನ್ನು ಬೇಕಾದರೆ ತೆಗೆದುಕೊಳ್ಳಿ, ಆದರೆ ನನ್ನ ಮಕ್ಕಳನ್ನು ಉಳಿಸಿ ಎಂದು ಹೇಳಿದರೂ ಕೂಡ ಅಲ್ಲಿರುವಂತಹ ಜನ ಅವರನ್ನು ಉಳಿಸಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಲ್ಲಿ ಮಾನವೀಯತೆಯನ್ನು ಮರೆತು ಜನರು ಲೂಟಿ ಮಾಡಿದಂತಹ ಪರಿಸ್ಥಿತಿ ಇತ್ತು. ಅದರ ಮುಂದೆ ಹೋಗಿ ನೋಡಿದರೆ ಯಾರು ಅಲ್ಲಿಯ ಜನರನ್ನು ರಕ್ಷಣೆ ಮಾಡಬೇಕಾಗಿದ್ದಂತಹ ಪೋಲೀಸಿನವರು ಸಹ ಇದೇ ರೀತಿಯ ಕೆಲಸವನ್ನು ಮಾಡಿದಂತಹ ಪರಿಸ್ಥಿತಿ ಕಂಡುಬಂತು. ಇಂತಹ ಸನ್ನಿವೇಶ ಬೇರೆ ಕಡೆ ಮರುಕಳಿಸಬಾರದು ಎನ್ನುವ ಉದ್ದೇಶದಿಂದ ನಮ್ಮ ವ್ಯವಸ್ಥೆಯಲ್ಲಿ ಒಂದು ಬದಲಾವಣೆ ತರುವಂತಹ ಪ್ರಯತ್ನ ಮಾಡಬೇಕು. ಇನ್ನು ಮಾನ್ಯ ಪಟೇಲ್ ಅವರ ಸಮ್ಮುಖದಲ್ಲಿ ನಾವೆಲ್ಲಾ ಇದ್ದಂತಹವರು. ಬಹುತೇಕ ರಾಜಕೀಯ ಮೂಸೆಯಲ್ಲಿ

ಅವರು ಒಬ್ಬ ಮೇಲ್ಮಟ್ಟದ ರಾಜಕೀಯ ವ್ಯಕ್ತಿಯಾಗಿ ಪರಿವರ್ತನೆ ಯಾಗಿದ್ದರು. ಅಥವಾ ಮೂಡಿ ಬಂದ್ದರು ಎಂದರೆ ಇಷಾಪಗಲಾರದು. ಅದನ್ನು ಒಂದು ಶಬ್ದದಲ್ಲೇ ಹೇಳುವುದಾದರೆ ಅವರು ಒಬ್ಬ ಸೇಟ್ಸ್‌ಮನ್ ಆಗಿದ್ದರು. ಅವರು ಬಹುತೇಕ ಉತ್ತರ ಕರ್ನಾಟಕದ ಭಾಗಕ್ಕೆ ಮೊಟ್ಟಮೊದಲ ಆದ್ಯತೆಯನ್ನು ಕೊಟ್ಟು ಕೆಲಸದ ದೃಷ್ಟಿಯಿಂದ ಒಳ್ಳೆಯದನ್ನು ಮಾಡಿದ್ದರು ಎಂದರೆ ತಪ್ಪಾಗಲಾರದು. ಮಾನ್ಯ ಪಟೇಲ್‌ರವರು ಒಂದು ರೀತಿಯ ವ್ಯಕ್ತಿತ್ವ ಹೊಂದಿದ್ದರೆ, ಮಾನ್ಯ ಜೀವರಾಜ್ ಆಳ್ವರವರು ಇನ್ನೊಂದು ರೀತಿಯ ವ್ಯಕ್ತಿತ್ವ ಹೊಂದಿದವರು. ಅವರ ಹತ್ತಿರ ಒಳ್ಳೆಯ ಸಮೀಪ ಸಂಪರ್ಕ ಹೊಂದಿದವರು. ಅವರು ಒಡನಾಟ ಇಟ್ಟುಕೊಂಡಿರುವುದನ್ನು ನೋಡಿದರೆ, ಅವರು ಒಬ್ಬ ಪಾಮರನಿಂದ ಹಿಡಿದು ದೇಶದ ಪ್ರಧಾನ ಮಂತ್ರಿಯವರೆಗೂ ಸಂಪರ್ಕ ಇದ್ದದ್ದನ್ನು ನಾವು ನೋಡಿದ್ದೇವೆ. ಅವರೂ ಸಹ ಬೇಗ ನಿದನ ಹೊಂದಿದರು. ಅವರ ಪ್ರಾರಂಭಿಕ ಜೀವನ ಅವರ ಓಡಾಟ ಅವರು ಮಾಡುವಂತಹ ಕೆಲಸ, ಅವರ ದುಡುಕುತನ ಈ ದುರಂತದಲ್ಲಿ ಪರಿವರ್ತನೆಯಾಯಿತು. ಇವರು ಹಾಗೂ ಪಟೇಲ್ ಮತ್ತು ಉಳಿದಂತಹ ಇತರ ವ್ಯಕ್ತಿಗಳು ನಿಧನ ಹೊಂದಿದವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ):- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೆ ಮಾನ್ಯ ಮುಖ್ಯಮಂತ್ರಿಯವರು ಗುಜರಾತ್‌ನಲ್ಲಿ ಸಂಭವಿಸಿದ ಭೂಕಂಪದ ಬಗ್ಗೆ ಬಹಳ ಸವಿಸ್ತಾರವಾಗಿ ಮಾತನಾಡಿದ್ದಾರೆ. ಆ ಭೂಕಂಪ ಎಷ್ಟು ಪ್ರಖರವಾಗಿತ್ತು ಎಂದರೆ ನಾನು ನನ್ನ 50 ವರ್ಷಗಳ ಅನುಭವದಲ್ಲೆ ಇಷ್ಟೊಂದು ದೊಡ್ಡ ಭೂಕಂಪವನ್ನು ಕಂಡಿರಲಿಲ್ಲ. ಮೊನ್ನೆ ತಾನೆ ಅಲ್ಲಿಂದ ಬಂದವರು ಹೇಳಿದರು, ಪತ್ರಿಕೆಯಲ್ಲೆ ಏನೇ ಬಂದರೂ ಅಲ್ಲೆ ಸುಮಾರು ಎರಡು ಲಕ್ಷ ಜನ ಸತ್ತಿದ್ದಾರೆ ಅಥವಾ ಇನ್ನು ಹೆಚ್ಚು ಆಗಿರಬಹುದು ಎಂದು ಅಂದಾಜು ಮಾಡುತ್ತಿದ್ದಾರೆ. ಇನ್ನು ನಮ್ಮವರು ಅಲ್ಲೆ ಇದ್ದವರು ಇಲ್ಲಿಗೆ ಬಂದಿದ್ದರು. ಅವರು ನಾವು ಇದ್ದ ಕಡೆ ಭೂಕಂಪ ಆಗಲಿಲ್ಲ, ಆದ್ದರಿಂದ ಉಳಿದುಕೊಂಡು ಬಂದೆವು ಎಂದು ನಮ್ಮ ಗ್ರಾಮದವರೇ ಅಲ್ಲೆ ನೌಕರಿ ಮಾಡುವವರು ಹೇಳಿದರು. ಇಂತಹ ಒಂದು ದೊಡ್ಡ ದುರಂತ ನಡೆದು ಅದರ ಬಗ್ಗೆ ರಾಷ್ಟ್ರಮಟ್ಟದಲ್ಲೆ ನಾವು ಚಿಂತನೆ ಮಾಡಬೇಕಾಗಿದೆ. ಈ ದುರಂತಗಳು ಏಕೆ ಸಂಭವಿಸುತ್ತವೆ? ಇದು ಆಗುವುದಕ್ಕೆ ಕಾರಣವೇನು? ಬಹುಶಃ ಈ ದುರಂತಗಳು ನಮ್ಮ ದೇಶದಲ್ಲೆ ಅಧರ್ಮ, ಅನೀತಿ, ಅನಾಚಾರಗಳು ನಡೆದರೆ ಆಗುತ್ತವೆ ಎಂದು ನಮ್ಮ ಹಿಂದಿನ ಸಂಸ್ಕೃತಿ ನಂಬುತ್ತದೆ. ಅದರ ಜೊತೆಗೆ ಸಾಧುಗಳು ಹೇಳಿದಂತಹ ಮಾತುಗಳು, ಕುಂಭ ಮೇಳ ನಡೆದಿದ್ದರಿಂದ ಇಲ್ಲೆ ಆಗಲಿಲ್ಲ, ಇಲ್ಲದೆ ಇದ್ದರೆ ಇಲ್ಲೆ ಆಗುತ್ತಿತ್ತು ಎಂದು ಕುಂಭಮೇಳ ಮಾಡಿದಂತಹ ಸಾಧುಗಳು ಹೇಳಿದ್ದಾರೆ. ಆದರೆ ದುರ್ದೈವ ಆ ಒಂದು ದುರಂತ ನಮ್ಮ ಒಬ್ಬ ಮಂತ್ರಿಗಳನ್ನು ಬಲೆ ತೆಗೆಯುವ ಮಟ್ಟಕ್ಕೆ ಹೋಯಿತು. ಆ ಸಾಧುಗಳು ಮತ್ತು ನಮ್ಮ ಮಂತ್ರಿಗಳನ್ನು ಬಲೆ ತೆಗೆಯುವ ಮಟ್ಟಕ್ಕೆ ಯೋಯಿತು. ಆ ಸಾಧುಗಳು ಮತ್ತು ನಮ್ಮ ಮಂತ್ರಿಗಳಾದ ಜಾನ್ ಅವರು ಹೇಳಿರುವಂತಹ ಮಾತುಗಳಿಗೆ ಸ್ವಲ್ಪ ಸಹಮತ ಕಾಣುತ್ತದೆ. ಆದರೆ ಅವರು ಮಂತ್ರಿಗಳಾಗಿ ಹೇಳಬಾರದ ರೀತಿಯಲ್ಲೆ ಹೇಳಿದ್ದಕ್ಕೆ ಈ ರೀತಿಯ ಪ್ರಸಂಗ ಬಂತು. ಒಟ್ಟಿನಲ್ಲಿ ಎಲ್ಲೆ ಅನೀತಿ ಅನಾಚಾರ, ಅಧರ್ಮ ನಡೆಯುತ್ತದೆ ಅಲ್ಲೆ ಸೃಷ್ಟಿ ಮುನಿಯುತ್ತದೆ ಎನ್ನುವುದಕ್ಕೆ ಹಲವಾರು ಉದಾಹರಣೆಗಳು ಹಿಂದಿನ ಇತಿಹಾಸದಲ್ಲೆ ನಾವು ನೋಡುತ್ತಾ ಬಂದಿದ್ದೇವೆ. ಆ ದೃಷ್ಟಿಯಿಂದ ಇವತ್ತು ನಾವು ಷೃಷ್ಟಿ ಮುನಿಯುತ್ತದೆ ಎನ್ನುವುದಕ್ಕೆ

ಹಲವಾರು ಉದಾಹರಣೆಗಳು ಹಿಂದಿನ ಇತಿಹಾಸದಲ್ಲಿ ನಾವು ನೋಡುತ್ತಾ ಬಂದಿದ್ದೇವೆ. ಆದೃಷ್ಟಿಯಿಂದ ಇವತ್ತು ನಾವು ಸೃಷ್ಟಿ ವಿರುದ್ಧ ಏನು ಮಾಡಬೇಕಾದರೂ ಬಹಳ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಸೃಷ್ಟಿ ಸಮತೋಲನ ಈಗಾಗಲೇ ಕಳೆದು ಕೊಂಡಿದೆ. ಅದರ ಬಗ್ಗೆ ಚಿಂತನೆ ನಡೆದಿದೆ ಎನ್ನುವುದನ್ನು ಕೂಡ ಕೇಳುತ್ತಿದ್ದೇವೆ. ಈ ಒಂದು ಹಿನ್ನೆಲೆಯಲ್ಲಿ ಅಲ್ಲಿ ಮಡಿದವರು ಆತ್ಮಕ್ಕೆ ಶಾಂತಿ ಕೊಡಲೆ ಎಂದು ದೇವರಲ್ಲಿ ಬೇಡುತ್ತಾ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ, ಏನೆಂದರೆ ನಮ್ಮ ಒಂದು ತಿಂಗಳ ಸಂಬಳವನ್ನು ಕೊಡಬೇಕು ಎಂದು ಹೇಳಿದರು. ನಾವು ಎಷ್ಟು ಸಾಧ್ಯವಿದೆ ಅಷ್ಟು ಕೊಡುವುದಕ್ಕೆ ತಯಾರಿದ್ದೇವೆ. ಅಲ್ಲಿ ಒಂದು ಊರು ದತ್ತಕ ತೆಗೆದುಕೊಳ್ಳಬೇಕು ಎಂದು ವಿಚಾರ ಮಾಡಿದ್ದಾರೆ. ಅದಕ್ಕೆ ನಮ್ಮ ಶಾಸಕರ ಪಾಲು ಏನಿದೆ, ನಮ್ಮ ಅಧ್ಯಕ್ಷರು, ಮುಖ್ಯ ಮಂತ್ರಿಗಳು ಹಾಗೂ ನಮ್ಮ ನಾಯಕರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಆಷ್ಟು ಕೊಡುತ್ತೇವೆ ಎಂದು ಹೇಳುತ್ತಾ, ಮಾನ್ಯ ಜೆ.ಹೆಚ್.ಪಟೇಲ್ ಅವರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ನಾನು ಕಂಡಂತಹ ವಿಶೇಷ ವ್ಯಕ್ತಿ. ನಾನು ಮೊಟ್ಟಮೊದಲನೆ ಬಾರಿಗೆ ಶಾಸಕನಾಗಿ ಈ ಸದನಕ್ಕೆ ಬಂದಾಗ ಅವರ ಸಂಪುಟದಲ್ಲಿ ದೇವೇಗೌಡರ ಕಾಲದಿಂದ ಐದು ವರ್ಷ ಕೆಲಸ ಮಾಡುವಂತಹ ಸಂದರ್ಭ ಬಂತು. ನಾನು ಕಂಡಂತಹ ವಿಶಿಷ್ಟ ವ್ಯಕ್ತಿಗಳಲ್ಲಿ ಅದರಲ್ಲೂ ಶರಣ ಸಂಪ್ರದಾಯದಲ್ಲಿ ಅಣ್ಣ ಬಸವಣ್ಣನವರ ಮಾತನ್ನು ಹನ್ನೆರಡನೇ ಶತಮಾನದಲ್ಲಿ ಅವರು ನುಡಿದಂತೆ ಗಾರಿಯಲ್ಲಿ ನಡೆದ ವ್ಯಕ್ತಿ ಎಂದರೆ ಇವತ್ತು ಮಾನ್ಯ ಜೆ.ಹೆಚ್.ಪಟೇಲ್ ಎಂದು ಗುರುತಿಸಿದ್ದೇನೆ. ''ನ್ಯಾಯ ನಿಷ್ಠುರಿ ದಾಕ್ಷಿಣ್ಯ ಪರ ನಾನಲ್ಲವಯ್ಯ, ಲೋಕ ವಿರೋಧಿ ಶರಣ ಯಾರಿಗೂ ಅಂಜುವವನಲ, ಕೂಡಲ ಸಂಗನ ರಾಜ ತೇಜದಲ್ಲಿಪ್ಪ' ಎಂದು ಬಸವಣ್ಣನವರು ಹೇಳುತ್ತಾರೆ. ಆ ರೀತಿಯಾಗಿ ಅವರು ಯಾರಿಗೂ ಅಂಜುತ್ತಿರಲಿಲ್ಲ. ಅವರು ಏನಾದರೂ ಮಾಡಬೇಕೆಂದರೆ ನ್ಯಾಯವಾಗಿ ಏನು ತಿಳಿಯುತ್ತಿತ್ತು ಅದನ್ನು ಮಾಡುತ್ತಿದ್ದರು. ಉದಾಹರಣೆಗೆ ಏಳು ಜಿಲ್ಲೆಗಳನ್ನು ಮಾಡುವಾಗ ಅದರ ಬಗ್ಗೆ ಕ್ಯಾಬಿನೇಟ್‌ನಲ್ಲೆ ವಿರೋಧ ಇತ್ತು. ಅದರ ಬಗ್ಗೆ ತಮಗೆಲ್ಲಾ ಗೊತ್ತಿರಲಿಕ್ಕಿಲ್ಲ. ಮಾನ್ಯ ಖರ್ಗೆಯವರ ಜಿಲ್ಲೆ ಕೂಡ ಆಗುತ್ತಿತ್ತು. ಅದನ್ನು ಮಾಡಬೇಕೆಂದು ವಿಚಾರ ಇತ್ತು. ಆದರೆ ಅಲ್ಲಿ ಒಮ್ಮತ ಬರದಿದ್ದ ಕಾರಣ ಹಾಗೆಯೆ ಉಳಿಯಿತು. ಆ ಒಂದು ದೃಷ್ಟಿಯಿಂದ ಇವತ್ತು ನಿಜವಾಗಿ ಏಳು ಜಿಲ್ಲೆಗಳನ್ನು ಮಾಡಿದಂತಹ ಕೀರ್ತಿ ಅವರಿಗೆ ಸಲ್ಲುತ್ತದೆ. ಅದರ ಜೊತೆಗೆ ಇಡೀ ಜನತೆಗೆ ಸಂದೇಶ ಬೀರಬೇಕು ಎನ್ನುವ ದೃಷ್ಟಿಯಿಂದ ಅಂತರರಾಷ್ಟ್ರೀಯ ಕೇಂದ್ರವಾಗಿ ಕೂಡಲ ಸಂಗಮವನ್ನು ಮಾಡಿದಂತಹ ಕೀರ್ತಿ ಇವತ್ತು ಯಾರಿಗೆ ಹೋಗಬೇಕೆಂದರೆ, ಅದು ನಿಜವಾಗಿ ಮಾನ್ಯ ಪಟೇಲ್‌ರವರಿಗೆ ಹೋಗಬೇಕೆಂದು ಹೆಳಿದರೆ ತಪ್ಪಾಗಲಾರದು. ಇನ್ನು ಹಲವಾರು ವಿಚಾರಗಳನ್ನು ಅವರ ಬಗ್ಗೆ ಹೇಳುವುದಕ್ಕೆ ಹೊರಟರೆ ಬಹಳ ವೇಳೆಯಾಗುತ್ತದೆ. ಇನ್ನೊಂದು ವಿಚಾರ ಈ ಸದನದಲ್ಲೆ ನಡೆದಂತಹದ್ದನ್ನು ಹೇಳಬೇಕಾದರೆ, ಒಮ್ಮೆ ಜನತಾ ಪಕ್ಷದ ಸರ್ಕಾರ ರಾಷ್ಟ್ರದಲ್ಲಿ ಬಂದಾಗ, ಇಲ್ಲಿ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಯಾಗಿದ್ದರು. ಇಲ್ಲಿ ಅವರು ಭ್ರಷ್ಟಾಚಾರ ಮಾಡಿದ್ದಾರೆ. ಬಹಳ ದುಡ್ಡು ಹೊಡೆದಿದ್ದಾರೆ ಎಂದು ಅವರ ಮನೆಯೆಲ್ಲಾ ಜಪ್ತಿ ಮಾಡಿಸಿದರು. ಮಾನ್ಯ ದೇವರಾಜ್ ಅರಸ್ ಅವರು ಸದನದಲ್ಲಿ ಉತ್ತರ ಕೊಡುತ್ತಿದ್ದರು. ಮಾನ್ಯ ಬೊಮ್ಮಾಯಿಯವರು ಅಂದು ಇಲ್ಲಿ ವಿರೋಧಪಕ್ಷದ ನಾಯಕರಾಗಿದ್ದರು. ಮಾನ್ಯ ಜೆ.ಹೆಚ್.

ಪಟೇಲ್ ಕೂಡ ಅವರ ಪಕ್ಕದಲ್ಲೆ ಕುಳಿತಿದ್ದರು. ಆಗ ದೇವರಾಜ್ ಅರಸ್ ಅವರು, ಇಷ್ಟೆಲ್ಲಾ ಜಪ್ತಿ ಮಾಡಿಸಿದಿರಿ, ಎಲ್ಲಾ ಮಾಡಿದಿರಿ, ನಿಮಗೆ ಏನು ಸಿಕ್ಕಿತು ಎಂದು ಬಯ್ದರಂತೆ. ಆಗ ಪಟೇಲ್ ಅವರು ಹೇಳಿದ ಮಾತಿಗೆ ದೇವರಾಜ್ ಅರಸ್ ಕೂಡ ನಗೆಗಡಲಿನಲ್ಲೆ ಮುಳುಗಿದರಂತೆ. ಆರೀತಿ ವಿನೋಧವಾಗಿ ಮಾತನಾಡುತ್ತಿದ್ದರು. ಅವರು ಹೆಳಿದ ಮಾತು 'ಏನೆಂದರೆ ಇಲ್ಲ, ತಾವು ಬಹಳ ಸತ್ಯವಾದ ಮಾತು ಹೇಳಿದಿರಿ, ಏನು ಪ್ರಯತ್ನ ಮಾಡಿದರೂ ಕೂಡ ಏನೂ ಸಿಗಲಿಲ್ಲ. ಅದನ್ನು ಎಲ್ಲಿ ಇಟ್ಟಿದ್ದೀರಿ ಎಂದು ಹೇಳಿ. ಎಂದು ಕೇಳಿದರಂತೆ! ನೋಡಿ, ಅಂತಹ ಸಂದರ್ಭದಲ್ಲೂ ಅಷ್ಟೊಂದು ವಿನೋದವಾಗಿತ್ತು ಅವರ ಮಾತು. ಆಗ ದೇವರಾಜ್ ಅರಸ್ ಕೂಡ ಬಹಳ ನಕ್ಕುಬಿಟ್ಟರಂತೆ. ಹೀಗಾಗಿ ಇಂತಹ ಸಂದರ್ಭದಲ್ಲೆ ಎಲ್ಲರನ್ನೂ ನಗಿಸುವುದರ ಮುಖಾಂತರ ಇದ್ದ ಸತ್ಯವನ್ನು ಹೊರಗೆಡವುವಂತಹ ಪ್ರಯತ್ನ ಮಾಡುತ್ತಿದ್ದರು.

2.00. ಪಿ.ಎಂ.

ಇನ್ನು ಜೀವನದಲ್ಲಿ ಬಸವಣ್ಣನವರ ಬಗ್ಗೆ ಇದ್ದಂತಹ ಸಾಮ್ಯತೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಪಾಟೇಲ್‌ರವರು ನಡೆದು ಬಂದಂತಹ ದಾರಿ ಏನು ಇದೆ, ಅದು ದಾರಿ ದೀಪವಾಗಬೇಕಾಗಿದೆ. ಆ ಒಂದು ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಅಣ್ಣ ಬಸವಣ್ಣನವರು 12ನೇ ಶತಮಾನದಲ್ಲಿ ಹರಿಜನರಿಗೆ ಮತ್ತು ಬ್ರಾಹ್ಮಣರಿಗೆ ಸಂಬಂಧವನ್ನು ಮಾಡಿದರು. ಅವರು ಬರೀ ಬಾಯಿ ಮಾತಿನಲ್ಲಿ ಹೇಳಲಿಲ್ಲ. ಅವರು ನುಡಿದಂತೆ ಮಾಡಿದಂತಹ ಒಬ್ಬ ದಾರ್ಶನಿಕರು ಯಾರಾದರೂ ಇದ್ದರೆ ಅದು ಅಣ್ಣ ಬಸವಣ್ಣನವರು ಎಂದು ಹೇಳಬೇಕಾಗುತ್ತದೆ. ಅಣ್ಣ ಬಸವಣ್ಣನವರು ಬೇರೆಯವರಿಗೆ ಆ ರೀತಿ ಮಾಡಿಸಿದ್ದರೆ, ಇವರು ತಮ್ಮ ಮನೆಯಲ್ಲೇ ಆದಂತಹ ಘಟನೆಯನ್ನು ಹೇಳಿದರು. ನಾನು ಆಗ ಅವರ ಮನಗೆ ಹೋಗಿದ್ದೆ, ಅಷ್ಟೇ ಪ್ರೇಮದಿಂದ ಅವರ ಸೊಸೆಯನ್ನು ಕಾಣುತ್ತಿದ್ದರು. ತಮ್ಮ ಸಮಾಜದಿಂದ ಹುಟ್ಟಿ ಬಂದಂತಹ ಹೆಣ್ಣು ಮಗಳನ್ನು ಯಾವ ದೃಷ್ಟಿಯಿಂದ ನೋಡಬೇಕಾಗಿತ್ತೋ ಅದೇ ರೀತಿಯಲ್ಲಿ ಕಾಣುತ್ತಿದ್ದರು. ಈ ರೀತಿಯಲ್ಲಿ ಅವರ ಜೀವನದಲ್ಲಿ ಬಸವಣ್ಣನವರ ಜೀವನದ ಸಾಮ್ಯತೆ ಮತ್ತು ಶರಣರ ತತ್ವವನ್ನು ಅಳವಡಿಸಿಕೊಂಡಿದ್ದರು. ಅವರು ನುಡಿದಂತೆ ನಡೆಯುತ್ತಿದ್ದರು ಮತ್ತು ಹೇಳುತ್ತಿದ್ದರು. ನಮ್ಮ ಸ್ನೇಹಿತರು ಹೇಳಿದಂತೆ ಮೂರೂವರೆ ವರ್ಷಗಳ ಕಾಲ ಅವರು ಸರ್ಕಾರವನ್ನು ನಡೆಸಿದರು. ಇಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಇದು ನನಗೆ ಆದ ಅನುಭವವನ್ನು ಹೇಳುತ್ತೇನೆ. ಇವತ್ತು ನಾವು ವಿರೋಧಪಕ್ಷದಲ್ಲಿ ಮತ್ತು ಆಡಳಿತಪಕ್ಷದಲ್ಲಿ ನಾವು ನೋಡುವುದೆನೆಂದರೆ, ಆಡಳಿತ ಪಕ್ಷದವರು ಬಂದರೆ ನಾಮಿನೇಷನ್ ಅನ್ನು ತಮ್ಮ ಪಕ್ಷದವರನ್ನೇ ಹಾಕಿಕೊಳ್ಳುವಂಥಾದ್ದು ನೋಡುತ್ತೇವೆ. ಅಲ್ಲಿ ವಿರೋಧಪಕ್ಷದವರನ್ನು ಹಾಕುವುದಿಲ್ಲ ಈ ರೀತಿಯಾಗಿ ಪ್ರವೃತ್ತಿ ಇವತ್ತು ನಮ್ಮಲ್ಲಿ ಇದೆ, ನಾವು ಸಹ ಮಾಡಿದ್ದೇವೆ, ಇಲ್ಲವೆಂದು ನಾನು ಹೇಳುವುದಿಲ್ಲ. ನಾನು ಅವರಿಂದ ನನಗೆ ಆದಂತಹ ಅನುಭವವನ್ನು ಹೇಳುತ್ತೇನೆ. ಅವರು ಶಿವಮೊಗ್ಗ ಜಿಲ್ಲೆಯಿಂದ ಯಾರು ಶಾಸರಕತು ಆರಿಸಿ ಬಂದಿದ್ದರು. ಇದರ ಬಗ್ಗೆ ಹೇಳುವುದಾದರೆ ಒಮ್ಮೆ ಯಡಿಯೂರಪ್ಪನವರ ಕ್ಷೇತ್ರದಲ್ಲಿ ಪಿಎಲ್‌ಡಿ ಬ್ಯಾಂಕ್‌ನಲ್ಲಿ ಕೇವಲ ಎರಡು ನಾಮಿನೇಷನ್‌ನಲ್ಲಿ ಅವರು ಆರಿಸಿ ಬರುವಂಥ ಸಂದರ್ಭವಿತ್ತು. ಆಗ ಅವರು ಎರಡು ನಾಮಿನೇಷನ್ ಅವರಿಗೆ ಹಾಕಿ, ಒಂದು ನಮ್ಮ ಪಾರ್ಟಿಯವರಿಗೆ ಹಾಕಿ ಎಂದು ಹೇಳಿದರು. ಇಂತಹ ಒಂದು ದೊಡ್ಡ ಗುಣ ಅವರಲ್ಲಿತ್ತು,

ಇನ್ನು ನಮ್ಮ ಡಾ|| ಜೀವರಾಜ್ ಆಳ್ವರವರ ಬಗ್ಗೆ ನಾನು ಹೆಚ್ಚಿಗೆ ಏನೂ ಹೇಳುವುದಿಲ್ಲ. ನಾನು ಕಂಡಂತೆ ಅವರು ಒಬ್ಬ ಯುವ ರಾಜಕಾರಣಿಯಾಗಿದ್ದರು, ಇವರು ತತ್ವನಿಷ್ಠೆಯಿಂದ ನಡೆದಂತಹ ಒಂದು ಉದಾಹರಣೆಯನ್ನು ನಾನು ಹೇಳಬಯಸುತ್ತೇನೆ. ಇವರು ಸದನದಲ್ಲಿ ಬಿ.ಜೆ.ಪಿ. ಸ್ಥಾನದಲ್ಲಿ ಕುಳಿತ್ತಿದ್ದರು, ನಂತರ ಏನೋ ಭಿನ್ನಾಭಿಪ್ರಾಯ ಬಂದು ಅವರು ಆ ಪಕ್ಷವನ್ನು ಬಿಡುವಂತಹ ಪ್ರಸಂಗ ಬಂತು. ಈ ರೀತಿಯಾಗಿ ನಾನು ಯಾರನ್ನೂ ಕಂಡಿಲ್ಲ, ಇವರು ಆ ಪಕ್ಷವನ್ನು ಬಿಡುವಾಗ ಯಾವ ಪಕ್ಷದಿಂದ ಇವರು ಆಯ್ಕೆಯಾಗಿದ್ದರೋ, ಆ ಪಕ್ಷಕ್ಕೆ ರಾಜೀನಾಮೆಯನ್ನು ಕೊಟ್ಟು ಹೊರಗೆ ಹೋದರು. ಇದು ಅವರಲ್ಲಿದ್ದಂತಹ ಆದರ್ಶಮಯವಾದಂತಹ ಗುಣ, ನಾವು ಇದನ್ನು ಕಲಿಯತಕ್ಕಂಥಾದ್ದು ಆಗಿದೆ. ನಾನು ಇದರ ಬಗ್ಗೆ ಕೇಳೀದಾಗ ಇಲ್ಲ, ನಾವು ಒಂದು ಪಕ್ಷದಿಂದ ಆರಿಸಿ ಬಂದಾಗ ಆಪಕ್ಕಷಕ್ಕೆ ರಾಜೀನಾವೆುಯನನು ಕೊಟ್ಟು ಹೊರಗೆ ಹೋಗಬೇಕೆಂದರು. ಈ ರೀತಿಯಾಗಿ ನಿಷ್ಠಾವಂತ, ತತ್ವನಿಷ್ಠವಾದಂತಹ ರಾಜಕಾರಣಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನನಗೆ ಬಹಳ ಸಮೀಪವಾಗಿದ್ದಂತವರು ಎಂದರೆ ಶ್ರೀಮತಿ ಟಿ.ಕೆಂಪಮ್ಮನವರು, ನಾನು ಐದು ವರ್ಷಗಳ ಕಾಲ ಮಂತ್ರಿಯಾಗಿದ್ದರಿಂದ ವಿಧಾನ ಪರಿಷತ್ತಿನಲ್ಲಿ ಅವರು ಪ್ರಶ್ನೆ ಕೇಳತಕ್ಕಂಥ ಅವಕಾಶವಿತ್ತು. ನಾನು ಅವರನ್ನು ಬಹಳ ಆತ್ಮೀಯತೆಯಿಂದ ಕಾಣುತ್ತಿದ್ದೆ, ನಮ್ಮಲ್ಲಿ ಅಣ್ಣ ತಂಗಿಯರ ಸಂಬಂಧವಿತ್ತು. ಅವರು ನಮ್ಮ ಮನೆಗೆ ಬಂದು ಮಗನ ಲಗ್ನಕ್ಕೆ ತಪ್ಪಿಸಿಕೊಳ್ಳಬಾರದೆಂದು ಹೇಳಿ ಹೋಗಿದ್ದರು. ಆಗ ನಾನು ಯಾವುದೇ ಪರಿಸ್ಥಿತಿಯಲ್ಲೂ ಲಗ್ನಕ್ಕೆ ಬರುವುದನ್ನು ತಪ್ಪಿಸುವುದಿಲ್ಲವೆಂದು ಹೇಳಿದ್ದೆ. ಆದರೆ ದುರ್ದೈವದಿಂದ ಅವರು ಮರುದಿವಸ ಮಗನ ಲಗ್ನವಿದ್ದರೆ ಹಿಂದಿನ ದಿವಸ ಮರಣವನ್ನಪ್ಪಿದರು. ಆ ರೀತಿ ಅವರಿಗೆ ದೈವ ಬರೆದಿತ್ತು ಎಂದು ಕಾಣುತ್ತದೆ, ಅವರು ವಿಧಾನಪರಿಷತ್ತಿನ ಛೇರಮನ್ ಆಗುವಂತಹ ಅವಕಾಶವನ್ನು ಆ ದೇವರು ಕೊಡಲಿಲ್ಲ. ಇವರ ಹೆಸರನ್ನು ಬಹಳ ಜನರು ಹೇಳಿದ್ದರು, ಎಂಬ ವಿಚಾರನ್ನು ನಾನು ಕೇಳಿದ್ದೆ; ಈ ವಿಚಾರವನ್ನು ಅವರು ನನಗೂ ಹೇಳಿದ್ದರು. ಇಂತಹ ಒಳ್ಳೆಯ ಗುಣ ಅವರಲ್ಲಿತ್ತು. ಇದೇ ರೀತಿಯಲ್ಲಿ ಮಾನ್ಯ ಲಕ್ಷ್ಮೀನರಸಿಂಹಯ್ಯನವರು ಸಹ ನಮ್ಮನ್ನೆಲ್ಲಾ ಪ್ರೇಮದಿಂದ ಕಾಣುತ್ತಿದ್ದರು. ಇನ್ನು ತಾವು ಹೇಳಿರುವಂತಹ ವ್ಯಕ್ತಿಗಳ ಬಗ್ಗೆ ದುಃಖ ಸೂಚಕ ನಿರ್ಣಯ ಏನು ಹೇಳಿದ್ದೀರಿ, ಅದಕ್ಕೆ ನಾನು ಕೂಡ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಇನ್ನು ಕೊನೆಯದಾಗಿ ನಮ್ಮ ಸಿಂಧ್ಯರವರು ಒಂದು ಮಾತನ್ನು ಹೇಳಿದರು. ಮಾನ್ಯ ಜೆ.ಹೆಚ್.ಪಟೇಲ್‌ರವರ ನೆನಪು ಉಳಿಯುವಂತಹ ಕೆಲಸವನ್ನು ಮಾಡಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ವಿಚಾರ ಮಾಡಬೇಕೆಂದು ಹೇಳುತ್ತೇನೆ. ಇವರು ಬಹಳ ವಿಶೇಷವಾದಂತಹ ವ್ಯಕ್ತಿಗಳು ಆಗಿದ್ದಾರೆ, ಮತ್ತೆ ನೀವು ಅವರ ಆತ್ಮೀಯರು ಆಗಿದ್ದೀರಿ. ತಾವು ಪ್ರತಿಜ್ಞಾ ವಚನವನ್ನು ಸ್ವೀಕರಿಸುವಂತಹ ಸಂದರ್ಭದಲ್ಲಿ ಅವರು ನನ್ನ ಆತ್ಮೀಯ ಗೆಳೆಯನ ಸಮಾರಂಭಕ್ಕೆ ಹೋಗಬೇಕೆಂದು ಹೇಳಿದರು. ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ರಾಜ್ಯ ಕಂಡಂತಹ ವಿಶೇಷವಾದಂತಹ, ವಿಶಿಷ್ಟವಾದಂತಹ, ವ್ಯಕ್ತಿತ್ವವನ್ನು ಹೊಂದಿದ್ದ ಮುಖ್ಯಮಂತ್ರಿಯಾಗಿದ್ದರು. ಆದುದರಿಂದ ತಾವು ದಯವಿಟ್ಟು ಈ ಬೆಂಗಳೂರು ನಗರದಲ್ಲಿ ಶಾಶ್ವತವಾಗಿ ಅವರ ಹೆಸರು ಉಳಿಯುವಂತೆ ಏನು ಮಾಡಬೆಕೆಂಬ ತೀರ್ಮಾನವನ್ನು ತೆಗೆದುಕೊಂಡು ಅದನ್ನು ಮಾಡಬೇಕೆಂದು ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಂಡು ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

+ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ಗುಜರಾತ್ ದುರಂತದಲ್ಲಿ ಮಡಿದವರು ಹಾಗೂ ಈ ನಾಡಿನಲ್ಲಿ ಮಡಿದಂತಹ ಅನೇಕ ಗಣ್ಯರ ಬಗಗೆ ತಾವು ತಂದಿರುವಂತಹ ಸಂತಾಪ ಸೂಚಕ ನಿರ್ಣಯಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಈ ವರ್ಷದ ಗಣರಾಜ್ಯೋತ್ಸವ ಈ ನಾಡಿಗೆ ಅತ್ಯಂತ ಸಂತೋಷವನ್ನು ತರುವಂಥಾ ನಾಡ ಹಬ್ಬ ಆದರೂ ಕೂಡ ಗುಜರಾತ್‌ನಲ್ಲಿ ನಡೆದಂತಹ ದುರಂತದಿಂದ ಅತ್ಯಂತ ಕರಾಳ ದಿನವಾಗಿ ಇದು ದೇಶಕ್ಕೆ ಪರಿವರ್ತನೆಯಾಯಿತು ಒಮ್ಮೆಲೇ ಸಾವಿರಾರು ಜನರು ಮಡಿದು ನಮ್ಮ ದೇಶಕ್ಕೆ ಆರ್ಥಿಕವಾಗಿ ಮತ್ತು ಹೆಚ್ಚಿನ ಜೀವಹಾನಿಯನ್ನು ತಂದೊಡ್ಡಿದಂತಹ ಈ ದೊಡ್ಡ ದುರಂತಕ್ಕೆ ಇಡೀ ದೇಶವೂ ಮರುಗಿದೆ. ನಮ್ಮ ಕರ್ನಾಟಕ ರಾಜ್ಯದಿಂದಲೂ ಸಹ ಸಾಕಷ್ಟು ನೆರವನ್ನು ಅವರಿಗೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಜೆ.ಹೆಚ್. ಪಟೇಲ್‌ರವರು ಸಮಾಜವಾದಿ ಹೋರಾಟದಲ್ಲಿ ನನ್ನ ಕ್ಷೇತ್ರದ ಮಾನ್ಯ ಗೋಪಾಲಗೌಡರ ಜೊತೆ ಜೊತೆಯಲ್ಲಿ ತೀರ್ಥಹಳ್ಳಿ, ಸಾಗರ, ಹೊಸನಗರ, ಈ ಎರಡು ಮೂರು ತಾಲ್ಲೂಕುಗಳಲ್ಲಿ, ಹಳ್ಳಿ ಹಳ್ಳಿಗಳಲ್ಲೂ ಪ್ರವಾಸ ಮಾಡಿದರು. ಇವತ್ತು ರಾಜಕೀಯ ಪ್ರಜ್ಞಾವಂತಿಕೆಯನ್ನು ಪ್ರದರ್ಶನ ಮಾಡಿದ್ದರೆ ಅದು ಮಾನ್ಯ ಗೋಪಾಲಗೌಡರ ಮತ್ತು ಮಾನ್ಯ ಜೆ.ಹೆಚ್. ಪಟೇಲ್‌ರವರ ಈ ಒಂದು ಅಧ್ಯಯನದ ಪರಿಣಾಮವೆಂದು ಹೇಳುತ್ತೇನೆ. ಇವತ್ತಿಗೂ ರೈತರು ನನ್ನ ಕ್ಷೇತ್ರದ ಮೂಲೆ ಮೂಲೆಗಿಯಲ್ಲೂ ಇವರ ಫೋಟೋ ಹಾಕಿರುವುದನ್ನು ನೋಡುತ್ತಿದ್ದೇನೆ; ಉಳುವವನೇ ಹೊಲದ ಒಡೆಯ ಎನ್ನುವ ಚಿಂತನೆಯ ಹೋರಾಟದಲ್ಲಿ ನಡೆದಿರುವಂತಹ ಆ ದಿನಗಳನ್ನು ನಾವು ನೋಡಿ, ಆ ಸ್ಫೂರ್ತಿಯನ್ನು ನಾವು ತೆಗೆದುಕೊಂಡು ಈ ಸಾರ್ವಜನಿಕ ಜೀವನದಲ್ಲಿ ಎಲ್ಲರೂ ಮೇಲೆ ಬರುವುದಕ್ಕೆ ಇದು ದೊಡ್ಡ ಕಾರಣವಾಯಿತು. ಮಾನ್ಯ ಜೆ.ಹೆಚ್. ಪಟೇಲರನ್ನು ತುರ್ತು ಪರಿಸ್ಥಿತಿಯ ಕರಾಳ ದಿವಸಗಳಲ್ಲಿ ಬಂಧನ ಮಾಡಲಾಯಿತು. ಆಗ ನಾನು ಕಾಲೇಜಿನಲ್ಲಿ ಓದುತ್ತಾ ಇದೆ, ಆಗ ನನ್ನನ್ನು ಕೂಡ ಪ್ರಿವೆಂಟ್‌ವ್ ಆಗಿ ಅರೆಸ್ಟ್ ಮಾಡಿ ಶಿವಮೊಗ್ಗದ ಜೈಲಿನಲ್ಲಿಟ್ಟರು. ಅಲ್ಲಿಗೆ ಆಗ ಮಾನ್ಯ ಜೆ.ಹೆಚ್.ಪಟೇಲರನ್ನು ಕರೆದುಕೊಂಡು ಬಂದರು. ನಾವು ಬಹಳ ಉತ್ಸಾಹದಿಂದ ಜೈಲಿನಲ್ಲಿದ್ದೆವು. ಸುಮಾರು ಒಂದು-ಒಂದೂವರೆ ತಿಂಗಳು ಕಳೆಯುತ್ತಾ ಇದ್ದಹಾಗೆ ನಮಗೆ ಜೈಲಿನಿಂದ ಹೊರಗಡೆ ಇರುವಂತಹ ಪ್ರಪಂಚ ಕಾಣದಾದಾಗ ನಾವು ಬಹಳ ಕೊರಗುತ್ತಿದ್ದೆವು. ಗೋಳಾಡುತ್ತಿದ್ದೆವು. ಆಗ ಅಲ್ಲಿ ನಾವು ಅನೇಕ ವಿದ್ಯಾರ್ಥಿಗಳು ಇದ್ದೆವು, ಆಗ ಮಾನ್ಯ ಜೆ.ಹೆಚ್.ಪಟೇಲ್‌ರವರ ಸಹವಾಸದಿಂದ ಜೈಲಿನಲ್ಲಿದ್ದಂತಹ ದಿವಸಗಳನ್ನು ಸಹನೀಯವಾಗಿ ಕಳೆಯಲು ಸಾಧ್ಯವಾಯಿತು. ಅವರು ನಮ್ಮ ಜೊತೆಯಲ್ಲಿ ಚಿಕ್ಕ ಮಕ್ಕಳ ರೀತಿಯಲ್ಲಿ ಆಟವಾಡುತ್ತಿದ್ದರು, ಕತೆಗಳನ್ನು ಹೇಳುತ್ತಿದ್ದರು. ಅವರು ದೇಶ, ವಿದೇಶಗಳಿಗೆ ಪ್ರವಾಸ ಮಾಡಿದಂತಹ ಸಂದರ್ಭಗಳಲ್ಲಿ ಆದಂತಹ ಅನುಭವಗಳನ್ನು ಹೇಳುತ್ತಿದ್ದರು. ಅವರು ನಮ್ಮನ್ನು ಎಜುಕೇಟ್‌ಗಳನ್ನಾಗಿ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದರು. ಒಂದು ದಿವಸ ಜೈಲಿನಲ್ಲಿ ಆದಂತಹ ಘಟನೆಯ ಬಗ್ಗೆ ಹೇಳುತ್ತೇನೆ. ಮಾನ್ಯ ಜೆ.ಹೆಚ್.ಪಟೇಲ್‌ರವರು ಮತ್ತು ಮೂರ್ನಾಲ್ಕು ಜನರು ಮನೆಗಳಿಂದ ಊಟವನ್ನು ತರಿಸಿಕೊಳ್ಳುತ್ತಿದ್ದರು. ಆಗ ಮಾನ್ಯ ಜೆ.ಹೆಚ್.ಪಟೇಲ್‌ರವರು ನನ್ನ ಎದುರುಗಡೆ ಇದ್ದಂತಹ ಬ್ಯಾಂಕ್‌ನಲ್ಲಿದ್ದರು. ಅವರಿಗೆ ಮನೆಯಿಂದ ಊಟ ಬರುತ್ತಿತ್ತು. ನಾನು ಬೇರೆ ವಿಚಾರಗಳನ್ನು ಮಾತನಾಡುವಂತಹ ಸಂದರ್ಭದಲ್ಲಿ ನಮಗೆಲ್ಲರಿಗೂ ಸೆರೆಮನೆಯಾಗಿದೆ, ಕೆಲವರ ಪಾಲಿಗೆ ಇದು ಅರಮನೆಯಾಗಿದೆ, ಅವರಿಗೆಲ್ಲಾ ಮನೆಯಿಂದ ಊಟ ಬರುತ್ತಿತ್ತು, ನಾನು ಬೇರೆ ವಿಚಾರಗಳನ್ನು

ಮಾತನಾಡುವಂತಹ ಸಂದರ್ಭದಲ್ಲಿ ನಮಗೆಲ್ಲರಿಗೂ ಸೆರೆಮನೆಯಾಗಿದೆ, ಕೆಲವರ ಪಾಲಿಗೆ ಇದು ಅರಮನೆಯಾಗಿದೆ, ಅವರಿಗೆಲ್ಲಾ ಮನೆಗಳಿಂದ ಊಟ ಬರುತ್ತದೆ, ನಮಗೆ ಮಾತ್ರ ಜೈಲಿನಲ್ಲಿ ಮಾಡಿದಂತಹ ಗಂಜಿ, ಮುದ್ದೆ, ಇದನ್ನು ತಿನ್ನುವುದಕ್ಕೆ ಆಗುವುದಿಲ್ಲ,, ಇದರಲ್ಲಿ ಹುಳ ಇದೆ, ಇದನ್ನು ತಿನ್ನುವುದಕ್ಕೆ ಆಗದೇ, ಆ ಹುಳವನ್ನು ಪಕ್ಕಕ್ಕೆ ಇಟ್ಟು ಗಂಜಿಯನ್ನು ಕುಡಿಯುತ್ತಿದ್ದೆವು, ಇದು ನಮಗೆ ಬಹಳ ಕಷ್ಟವಾಗುತ್ತಿತ್ತು. ನಾವು ಇದನ್ನು ಕುಡಿಯದೇ ಇದ್ದರೆ ಸಯುವಂತಹ ಪರಿಸ್ಥಿತಿ ಇತ್ತು. ನಾನು ಇದನ್ನು ಹೇಳಿದ ನಂತರ ಅದು ಏನಾಯಿತೋ ನನಗೆ ಗೊತ್ತಿಲ್ಲ; ಮಾನ್ಯ ಜೆ.ಹೆಚ್.ಪಟೇಲ್‌ರವರು ತರಿಸುವಂತಹ ಊಟದ ಪ್ರಮಾಣವೂ ಜಾಸ್ತಿಯಾಯಿತು. ಅವರು ರೊಟ್ಟಿಯನ್ನು ಜಾಸ್ತಿ ತರಿಸುತ್ತಿದ್ದರು. ನಮ್ಮ ಹುಡುಗರನ್ನೆಲ್ಲರನ್ನು ಅವರ ರೂಮಿಗೆ ಕರೆಸಿಕೊಂಡು ಮೊದಲು ನಮಗೆ ರೊಟ್ಟಿಯನ್ನು ಹಂಚಿ ನಮ್ಮನ್ನು 'ಸಾಕೇನಪ್ಪಾ' ಎಂದು ಕೇಳಿಕೊಂಡು ಅವರು ಸಹ ರೊಟ್ಟಿಯನ್ನು ತಿನ್ನುತ್ತಿದ್ದರು. ಆಗ ಅವರಿಗೆ ನಾನು ಹೇಳಿದಂತಹ ಮಾತು ನೋವಾಗಿದೆ ಎಂದು ಗೊತ್ತಾಯಿತು. ಆಗ ನಾನು ಮಾನ್ಯ ಪಟೇಲ್‌ರವರ ಬಳಿ ಕ್ಷಮೆ ಯಾಚಿಸಿದೆ, ನನಗೆ ಗೊತ್ತಾಗದೇ ಈ ಮಾತನ್ನು ಹೇಳಿದ್ದೇನೆ. ನೀವು ನಮಗೆಲ್ಲರಿಗೂ ಕಣ್ಣು ತೆರೆಸಿದ್ದೀರೆಂದು ಆಗ ಅವರು ನಮಗೆ ಹೇಳಿದರು. ನಿಮ್ಮೆಲ್ಲರ ಎದುರಿಗೆ ಈ ರೀತಿ ಊಟ ಮಾಡಬಾರದಾಗಿತ್ತು ಎಂದು ಹೇಳಿದರು. ನಮಗೆ ಈ ಜೈಲಿನ ವಾಸ ಟೆನ್ಷನ್ ತರುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ. ಇಲ್ಲಿ ಎಲ್ಲರಿಗೂ ಒಳ್ಳೆಯ ಊಟ ಸಿಗಬೇಕಾಗಿತ್ತು. ಆದರೆ ಅದು ಎಲ್ಲರಿಗೂ ಸಿಗುವುದಿಲ್ಲವೆನ್ನುವಂತಹ ಮಾತನ್ನು ಹೇಳಿದರು. ಅವರು ಈ ರೀತಿಯಾಗಿ ನಮಗೆ ಸಾಂತ್ವಾನ ಹೇಳಿದರು. ನಾನು ಇಲ್ಲಿಗೆ ಶಾಸಕನಾಗಿ ಬಂದಮೇಲೆ, ಅವರು ಮುಖ್ಯಮಂತ್ರಿಯಾದಮೇಲೆ ಇಲ್ಲಿ ನಾನು ಕಿರಿಯನಾಗಿದ್ದೆ, ನಾನು ಅವರ ಬಳಿ ಹೇಗೆ ಹೋಗುವುದೆಂದು ಯೋಚನೆ ಮಾಡುತ್ತಿದ್ದೆ. ಆಗ ಅವರು ನನ್ನನ್ನು ಕರೆಯುತ್ತಿದ್ದಂತಹ ರೀತಿ ಮತ್ತು ನನ್ನ ಜೊತೆಯಲ್ಲಿ ವರ್ತಿಸುತ್ತಿದ್ದಂತಹ ರೀತಿ ನೋಡಿ ಅವರು ಮುಖ್ಯಮಂತ್ರಿಗಳು ಎನ್ನುವಂತಹ ಮುಜುಗರವಾಗುತ್ತಿರಲಿಲ್ಲ. ನನಗೆ ಒಂದು ದಿವಸ ತಕ್ಷಣವೇ ಒಂದು ಕೆಲಸವಾಗಬೇಕಾಗಿತ್ತು, ಆ ಸಂದರ್ಭದಲ್ಲಿ ಅವರು ಸಹ ಮಾರನೇ ದಿವಸವೇ ವಿದೇಶಕ್ಕೆ ಹೋಗುವಂಥ ಕಾರ್ಯಕ್ರಮವಿತ್ತು. ನಾನು ಅವರಿಗಾಗಿ ಬೆಡ್-ರೂಮ್ ಪಕ್ಕದಲ್ಲಿ ಕಾಯುತ್ತಾ ಕುಳಿತಿದ್ದೆ, ನಾನು ಒಳಗಡೆ ಹೋಗುವುದಕ್ಕೆ ಆಗಲಿಲ್ಲ. ಆಗ ಇನ್ನು ಬೆಳಿಗ್ಗೆ ಒಂಭತ್ತೂವರೆ ಗಂಟೆಯ ಸಮಯವಾಗಿತ್ತು.

ಕೆಂಪು ಶಾಲನ್ನು ಹೊದ್ದುಕೊಂಡು ಹಾಸಿಗೆಯ ಮೇಲೆ ಕುಳಿತಿದ್ದರು, ಇಬ್ಬರು, ಮೂವರು ಸಚಿವರಿದ್ದರು, ನನ್ನನ್ನು ಬಾರಯ್ಯ ಎಂದು ಕರೆದು, ಈತ ಗೋಪಾಲಗೌಡರ ಕ್ಷೇತ್ರವನ್ನು ಪ್ರತಿನಿಧಿಸುವವನೆಂಬ ಅವರಿಗೆ ಪರಿಚಯ ಮಾಡಿಸಿ, ಪಕ್ಕದಲ್ಲೆ ಕುಳ್ಳಿರಿಸಿಕೊಂಡು ಏನಾಗಬೇಕೆಂದು ಕೇಳಿದರು. ಆಗ ನಾನು ನನಗಾಗಬೇಕಾದ ಕೆಲಸವನ್ನು ಹೇಳಿದೆ, ತಕ್ಷಣವೇ, ಅವರ ವಿಶೇಷಾಧಿಕಾರಿ ಪಾಟೀಲರನ್ನು ಕರೆದು, ಇದು ತೀರ್ಥಹಳ್ಳಿ ಯ ಕೆಲಸ ತತ್‌ಕ್ಷಣ ಆಗಬೇಕೆಂದು ಆದೇಶ ಮಾಡಿದರು. ಈ ರೀತಿಯಾಗಿ ಇಷ್ಟೊಂದು ಪ್ರೀತಿ, ಪ್ರೇಮವನ್ನು ಇಟ್ಟುಕೊಂಡಿದ್ದ ನಮ್ಮ ಪಟೇಲರು ನಮ್ಮೊಡನೆ ಇಲ್ಲವೆಂದರೆ, ನಮಗೆ ಅತ್ಯಂತ ದುಃಖವಾಗಿದೆ, ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ನಾನು ಪ್ರಾರ್ಥಿಸುತ್ತೇನೆ.

ಇನ್ನು ದಿವಂಗತ ಡಾ|| ಜೀವರಾಜ ಆಳ್ವರವರ ಬಗ್ಗೆ ಹೇಳುವುದಾದರೆ, 1994ರ ಚುನಾವಣೆಯಲ್ಲ ನಮ್ಮ ಪಕ್ಷಕ್ಕೆ ಅವರು ಸೇರಿ ಮಾನ್ಯ ಅಡ್ವಾನಿಯವರೊಡನೆ ಕರ್ನಾಟಕ ಪ್ರವಾಸ ಮಾಡುತ್ತಾ ನನ್ನ ಕ್ಷೇತ್ರವಾದ ತೀರ್ಥಹಳ್ಳಿಗೆ ಬಂದರು. ಅವರು ನನ್ನ ಕ್ಷೇತ್ರದ ಮೊದಲ ಭಾಷಣ ನನಗೆ 5-6 ಸಾವಿರ ಮತಗಳನ್ನು ತಂದುಕೊಟ್ಟಿತ್ತು. ನಾನು ಡಾ||ಜೀವರಾಜ್ ಆಳ್ವರವನನ್ನು ಮರೆಯುವಂತಿಲ್ಲ. ಮೂರು ಸಾರಿ ಚುನಾವಣೆಗಳಲ್ಲಿ ಸೋತ ನನಗೆ 1994ರ ಚುನಾವಣೆಯಲ್ಲಿ ತೆಲ್ಲಲ್ಲುಸಾಧ್ಯವಾಗಿದ್ದು ಡಾ||ಜೀವರಾಜ್ ಆಳ್ವರವರ ನನ್ನ ಕ್ಷೇತ್ರದ ಮೊದಲನೆ ಭಾಷಣವೆಂದು ನಾನು ಭಾವಿಸುತ್ತೇನೆ. ಅವರು ಇವತ್ತು ನಮ್ಮ ನಡುವೆ ಇಲ್ಲ. ಇವತ್ತು ಸಂತಾಪ ಸೂಚಕ ನಿರ್ಣಯದಲ್ಲಿ ಸೂಚಿಸಿರುವ ಎಲ್ಲರ ಆತ್ಮಕ್ಕೆ ಪರಮಾತ್ಮ ಶಾಂತಿಯನ್ನು ಕೊಡಲೆಂದು ನನ್ನ ನುಡಿನಮನವನ್ನು ಸಲ್ಲಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಒಂದು ನಿಮಿಷ ಮೌನವನ್ನು ಈ ಸಂದರ್ಭದಲ್ಲಿ ಆಚರಿಸಿತು)

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯನ್ನು ಮೃತರ ಕುಟುಂಬವರ್ಗಕ್ಕೆ ಕಳುಹಿಸಿ ಕೊಡಲಾಗುವುದು. ಈಗ ಸಭೆಯನ್ನು ಮುಂದೂಡಿ, ನಾಳೆ ಬೆಳಗ್ಗೆ 11.00 ಪುನಃ ಸೇರುವುದು.

(ಸದನವು ಮಧ್ಯಾಹ್ನ 2 ಗಂಟೆ 12 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 28-2-2001 ರ ಬುಧವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.